# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 19 ಶನಿವಾರ 2023

ಸಂಪುಟ: 44 | ಸಂಚಿಕೆ: 124 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




# ಸದ್ಯದಲ್ಲೇ ಎಸ್.ಟಿ.ಸೋಮಶೇಖರ್, ಶಿವರಾಮ್ ಹೆಬ್ಬಾರ್ 'ಕೈ' ವಶ

## ●ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಶೀಘ್ರ ಕಾಂಗ್ರೆಸ್ ಸೇರ್ಪಡೆ ●ಲೋಕಸಭಾ ಚುನಾವಣೆಯಲ್ಲಿ 20 ಕ್ಷೇತ್ರ ಗೆಲ್ಲುವ ಗುರಿ ಕಾಂಗ್ರೆಸ್‌ನದು ●ಡಿಕೆಶಿ, ಸುರ್ಜೆವಾಲ ನೇತೃತ್ವದಲ್ಲಿ 'ಹಸ್ತ' ಕಾರ್ಯಾಚರಣೆ



ಎಸ್.ಟಿ.ಸೋಮಶೇಖರ್



ಶಿವರಾಮ್ ಹೆಬ್ಬಾರ್

ಬೆಂಗಳೂರು, ಆ. 18(ಕೆಎಂಶಿ)– ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದ ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರವನ್ನು ಉರುಳಿಸಿ, ಬಿಜೆಪಿಗೆ ಸೇರಿದ್ದ ಶಾಸಕರಲ್ಲಿ ಕೆಲವರನ್ನು ಮತ್ತೇ ಕಾಂಗ್ರೆಸ್‌ಗೆ ಸೇರಿಸಿಕೊಳ್ಳುವ ನಿಟ್ಟಿನಲ್ಲಿ ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು 'ಆಪರೇಷನ್ ಹಸ್ತ'ಗೆ ಚಾಲನೆ ನೀಡಿದ್ದಾರೆ. ಇದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಂಪೂರ್ಣ ಒಪ್ಪಿಗೆ ಇದೆ ಎಂದು ಹೇಳಲಾಗಿದೆ.

ವಿಧಾನಸಭೆಯಲ್ಲಿ 135 ಸ್ಥಾನಗಳನ್ನು ಹೊಂದಿ, ನಿಚ್ಚಳ ಬಹುಮತ ಇದ್ದರೂ ಶಾಸಕರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಆಪರೇಷನ್ ಹಸ್ತಕ್ಕೆ ಕೈ ಹಾಕಲಾಗಿದೆ. ಮುಖ್ಯವಾಗಿ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹೆಚ್ಚಿನ ಸ್ಥಾನಗಳನ್ನು ಪಡೆಯಲು ಅನುಕೂಲವಾಗುವಂತೆ ಈ ಕಾರ್ಯಾಚರಣೆ ನಡೆಸಲಾಗುತ್ತಿದೆ. ಬಿಜೆಪಿ ಶಾಸಕರಾಗಿರುವ ಎಸ್.ಟಿ. ಸೋಮಶೇಖರ್ ಮತ್ತು ಶಿವರಾಂ ಹೆಬ್ಬಾರ್ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಕಾಂಗ್ರೆಸ್ ಸೇರಲು ಮಾನಸಿಕವಾಗಿ ಸಿದ್ಧರಾಗಿದ್ದಾರೆ. ಈ ನಿಟ್ಟಿನಲ್ಲಿ ಈ ಇಬ್ಬರೂ ಶಾಸಕರು ಬೆಂಬಲಿಗರ ಸಭೆ ನಡೆಸಿದ್ದಲ್ಲದೇ, ಬಿಜೆಪಿ ವಿರುದ್ಧ ಅಸಮಾಧಾನ ತೋರ್ಪಡಿಸಿದ್ದಾರೆ. ತಮ್ಮ ಬೆಂಬಲಿಗರು ಕಾಂಗ್ರೆಸ್ ಸೇರುವಂತೆ ಹೇಳುತ್ತಿದ್ದಾರೆ ಎಂದು ಈ ಇಬ್ಬರೂ ಶಾಸಕರು ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಮೂಲ ಬಿಜೆಪಿ ಎಂದುಕೊಂಡಿರುವವರು ಕಳೆದ ವಿಧಾನಸಭೆ ಚುನಾವಣೆ ವೇಳೆ ತಮ್ಮನ್ನು ಸೋಲಿಸಲು ಪ್ರಯತ್ನಪಟ್ಟಿದ್ದರು. ಅವರ ವಿರುದ್ಧ ಪಕ್ಷದ ವರಿಷ್ಠರು ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ ಎಂಬುದು ಇವರ ಆರೋಪವಾಗಿದೆ. ಸೋಮಶೇಖರ್ ಅವರಂತೂ ಒಂದು ಹೆಜ್ಜೆ ಮುಂದೆ ಹೋಗಿ "ಬಿಜೆಪಿಯವರೇ ನನ್ನನ್ನು ಕಳುಹಿಸುವ ಹಾಗೇ ಕಾಣುತ್ತಿದೆ" ಎಂದು ಹೇಳುವ ಮೂಲಕ ತಾವು ಬಿಜೆಪಿಯಿಂದ ಹೊರ ಹೋಗುವುದನ್ನು ಪರೋಕ್ಷವಾಗಿ ತಿಳಿಸಿದ್ದಾರೆ.

ಬಿಜೆಪಿ ಶಾಸಕರಾದ ಎಸ್.ಟಿ.ಸೋಮಶೇಖರ್ ಮತ್ತು ಶಿವರಾಂ ಹೆಬ್ಬಾರ್ ಅವರು ಕಾಂಗ್ರೆಸ್ ಸೇರ್ಪಡೆಗೊಳ್ಳಲು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಮತ್ತು ಸುರ್ಜೇವಾಲ ಅವರು ಗ್ರೀನ್ ಸಿಗ್ನಲ್ ನೀಡಿದ್ದಾರೆ ಎನ್ನಲಾಗಿದ್ದು, ಪ್ರವಾಸದಲ್ಲಿರುವ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ರಾಜಧಾನಿಗೆ ಹಿಂದಿರುಗಿದ ನಂತರ ಇವರಿಬ್ಬರೂ ಶಾಸಕರು ರಾಜೀನಾಮೆ ಸಲ್ಲಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಇನ್ನುಳಿದಂತೆ ಶಾಸಕರಾದ ಗೋಪಾಲಯ್ಯ, ಮುನಿರತ್ನ, ಭೈರತಿ ಬಸವರಾಜು, ಎಂಟಿಬಿ ನಾಗರಾಜ್ ಕೂಡ ಬಿಜೆಪಿ ತೊರೆದು ಕಾಂಗ್ರೆಸ್ ಸೇರಲು ಸಿದ್ಧರಾಗಿದ್ದಾರೆ ಎಂದು ಹೇಳಲಾಗಿದೆ. ಇವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲು ಕೆಲವರು ವಿರೋಧ ವ್ಯಕ್ತಪಡಿಸಿದ್ದಾರೆ ಎಂದು ಹೇಳಲಾಗಿದ್ದು, ಅವರೆಲ್ಲರನ್ನೂ ಸಮಾಧಾನಪಡಿಸಿ ಇವರನ್ನು ಕೂಡ ಕಾಂಗ್ರೆಸ್‌ಗೆ ಸೇರಿಸಿಕೊಳ್ಳಲು ಡಿ.ಕೆ. ಶಿವಕುಮಾರ್ ●9ನೇ ಪುಟಕ್ಕೆ



"ಕಾಂಗ್ರೆಸ್‌ನಿಂದ ಬಿಜೆಪಿಗೆ ಹೋಗಿದ್ದ ಎಲ್ಲಾ ಶಾಸಕರು ನನಗೆ ಪರಿಚಯಸ್ಥರು ಹಾಗೂ ಸ್ನೇಹಿತರು. ರಾಜಕೀಯವಾಗಿ ಹಾಗೂ ವೈಯಕ್ತಿಕವಾಗಿ ಅವರೆಲ್ಲಾ ನನ್ನ ಸ್ನೇಹಿತರಾಗಿದ್ದಾರೆ. ರಾಜಕಾರಣದಲ್ಲಿ ಯಾವ ಸಂದರ್ಭದಲ್ಲಿ ಏನು ನಡೆಯುತ್ತದೆ ಎಂದು ಹೇಳಲಾಗದು. –ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ



"ಯಾವ ಶಾಸಕರು ಬಿಜೆಪಿ ಬಿಟ್ಟು ಹೋಗುವುದಿಲ್ಲ. ಈಗಾಗಲೇ ನಾನು ಎಸ್.ಟಿ. ಸೋಮಶೇಖರ್ ಮತ್ತು ಶಿವರಾಮ್ ಹೆಬ್ಬಾರ್ ಅವರೊಂದಿಗೆ ಮಾತನಾಡಿದ್ದೇನೆ. ಅವರು ಪಕ್ಷ ತೊರೆಯುವುದಿಲ್ಲ. –ಬಸವರಾಜ ಬೊಮ್ಮಾಯಿ, ಮಾಜಿ, ಸಿಎಂ



"ನಮ್ಮಿಂದಲೂ ಹೋಗುವವರನ್ನೆಲ್ಲಾ ಮೈಸೂರು ಪೇಟ ತೊಡಿಸಿ, ಶಾಲು ಹಾಕಿ ಕರೆದುಕೊಂಡು ಹೋಗಲಿ ಬಿಡಿ. ಹೋಗುವವರನ್ನು ಹಿಡಿದುಕೊಳ್ಳೋಕೆ ಆಗುತ್ತದಾ? –ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಿಎಂ

"ರಾಜಕಾರಣದಲ್ಲಿ ಯಾವುದೂ ಶಾಶ್ವತವಲ್ಲ ಎಂದು ಹೇಳುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಪರೇಷನ್ ಹಸ್ತವನ್ನು ಪರೋಕ್ಷವಾಗಿ ಸಮರ್ಥಿಸಿಕೊಂಡಿದ್ದಾರೆ. ರಾಜಕಾರಣದಲ್ಲಿ ಶಾಶ್ವತ ಶತ್ರುಗಳು ಇಲ್ಲ, ಮಿತ್ರರೂ ಇಲ್ಲ. ರಾಜಕಾರಣ ನಿಂತ ನೀರಲ್ಲ ಎಂಬುದನ್ನು ಅವರು ಪರೋಕ್ಷವಾಗಿ ಹೇಳಿದ್ದಾರೆ.

## 10–15 ಹಾಲಿ, ಮಾಜಿ ಶಾಸಕರು ಕಾಂಗ್ರೆಸ್ ಸೇರಲು ಸಿದ್ಧರಿದ್ದಾರೆ!

ಮೈಸೂರು, ಆ.18– ಬಿಜೆಪಿಯಿಂದ ಹಲವರು ಕಾಂಗ್ರೆಸ್‌ಗೆ ವಾಪಸ್ಸಾಗಲಿದ್ದಾರೆ ಎನ್ನುವ ಚರ್ಚೆಯ ನಡುವೆಯೇ 10–15 ಹಾಲಿ ಮತ್ತು ಮಾಜಿ ಶಾಸಕರು ಕಾಂಗ್ರೆಸ್ ಪಕ್ಷಕ್ಕೆ ಸೇರಲು ಸಿದ್ಧರಿದ್ದು, ಅವರೊಂದಿಗೆ ಮಾತುಕತೆ ನಡೆಯುತ್ತಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೊಸ ಬಾಂಬ್ ಸಿಡಿಸಿದ್ದಾರೆ. ಖಾಸಗಿ ಕಾರ್ಯಕ್ರಮ ನಿಮಿತ್ತ ಶುಕ್ರವಾರ ಮೈಸೂರಿಗೆ ಆಗಮಿಸಿದ್ದ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಕಾಂಗ್ರೆಸ್ ಸೇರಲು ಸಿದ್ಧರಿರುವವರೊಂದಿಗೆ ಮಾತುಕತೆ ನಡೆದಿದ್ದು, ಕೆಲವೇ ದಿನಗಳಲ್ಲಿ ಎಲ್ಲವೂ ಅಂತಿಮವಾಗಲಿದೆ. ಅವರ ಹೆಸರನ್ನು ಈಗಲೇ ಹೇಳಲು ಸಾಧ್ಯವಿಲ್ಲ. ಆದರೆ ಬಿಜೆಪಿ ಹಾಗೂ ಜೆಡಿಎಸ್‌ನಿಂದ ಹಾಲಿ–ಮಾಜಿ ಶಾಸಕರು ನಮ್ಮ ಪಕ್ಷಕ್ಕೆ ಬರುವುದು ಖಚಿತ ಎಂದರು.

**ಬರ ಸಂಬಂಧ ಸಭೆ:** ಬರ ಘೋಷಣೆ ಬಗ್ಗೆ ಮಾತನಾಡಿ, ಈ ಸಂಬಂಧ ಸಭೆ ನಡೆಸಿದ್ದೇವೆ. ಜೂನ್ ಮತ್ತು ಆಗಸ್ಟ್‌ನಲ್ಲಿ ಮಳೆ ಕೊರತೆಯಾಗಿದೆ. ಆದರೆ ಶೇ.60ರಷ್ಟು ಬರ ಇದ್ದರೆ ಮಾತ್ರ ಕೇಂದ್ರ ಅನುದಾನ ಬಿಡುಗಡೆ ಮಾಡುತ್ತದೆ. ಈ ಪರಿಮಿತಿಯನ್ನು ಶೇ.30ಕ್ಕೆ ಇಳಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಮುಖ್ಯಮಂತ್ರಿಗಳು ಪತ್ರ ಬರೆದು ಒತ್ತಾಯಿಸಿದ್ದಾರೆ. ಅದಕ್ಕಿನ್ನೂ ಪ್ರತಿಕ್ರಿಯೆ ಬಂದಿಲ್ಲ. ಹಾಗಾಗಿ ಕೇಂದ್ರದಿಂದ ವಿಶೇಷ ಅನುದಾನ ಕೇಳಲಾಗಿಲ್ಲ. ಬರ ಪರಿಸ್ಥಿತಿ ಬಗ್ಗೆ ಅಧಿಕಾರಿಗಳಿಂದ ವರದಿ ಕೇಳಿದ್ದೇವೆ. ಕೇಂದ್ರದ ಪ್ರತಿಕ್ರಿಯೆ ಬಂದ ನಂತರ ಸಭೆ ನಡೆಸಿ, ಮುಂದಿನ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

**ಬಾಯಿ ಚಪಲದ ಹೇಳಿಕೆ:** ಗುತ್ತಿಗೆದಾರರಿಂದ ಸಚಿವರು ಹಣ ವಸೂಲಿ ಮಾಡುತ್ತಿದ್ದಾರೆಂಬ ಆರೋಪದ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದ ●9ನೇ ಪುಟಕ್ಕೆ

## ದಸರೆಯಲ್ಲಿ 'ಸ್ತ್ರೀ ಶಕ್ತಿ' ಕಾರುಬಾರು ಖಚಿತ: 300 ಹೆಚ್ಚುವರಿ ಬಸ್ ಪ್ರಸ್ತಾವನೆ ಸಲ್ಲಿಸಿದ ಸಾರಿಗೆ ಸಂಸ್ಥೆ

●ಮೈಸೂರು ಭಾಗದಲ್ಲಿ ಪ್ರಯಾಣಿಕರ ಸಂಖ್ಯೆಯಲ್ಲಿ ಶೇ.30ರಷ್ಟು ಹೆಚ್ಚಳ
●ಮೈಸೂರಿಗೆ ಮಹಿಳಾ ಪ್ರಯಾಣಿಕರ ದಂಡಿನ ನಿರೀಕ್ಷೆ

■ಪುಟ–10



## 40 ಪರ್ಸೆಂಟ್ ಕಮಿಷನ್ ಆರೋಪ ನ್ಯಾಯಾಂಗ ತನಿಖೆಗೆ ಆದೇಶ

ಬೆಂಗಳೂರು, ಆ.18– ಈ ಹಿಂದೆ ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ಭಾರೀ ಸದ್ದು ಮಾಡಿದ್ದ 40 ಪರ್ಸೆಂಟ್ ಕಮಿಷನ್ ಆರೋಪದ ಬಗ್ಗೆ ಸಿದ್ದರಾಮಯ್ಯ ಸರ್ಕಾರ ನ್ಯಾಯಾಂಗ ತನಿಖೆಗೆ ಆದೇಶಿಸಿದೆ. ಈ ಮೂಲಕ ಪ್ರತಿಪಕ್ಷ ಬಿಜೆಪಿಗೆ ರಾಜ್ಯ ಸರ್ಕಾರ ಮತ್ತೊಂದು ಶಾಕ್ ನೀಡಿದೆ.

ಅಧಿಕಾರಕ್ಕೆ ಬಂದ ಮೂರೇ ತಿಂಗಳಲ್ಲಿ ಕಾಂಗ್ರೆಸ್ ಸರ್ಕಾರ, ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರು ಮಾಡಿದ್ದ ಕಮಿಷನ್ ಆರೋಪದ ತನಿಖೆಗೆ ನಿವೃತ್ತ ಹೈಕೋರ್ಟ್ ನ್ಯಾಯಾಧೀಶ ನ್ಯಾಯಮೂರ್ತಿ ನಾಗಮೋಹನ್ ದಾಸ್ ನೇತೃತ್ವದಲ್ಲಿ ತನಿಖಾ ಸಮಿತಿ ರಚಿಸಿ ಗುರುವಾರ ಆದೇಶ ಹೊರಡಿಸಿದೆ.

ಸ್ಥಳ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ವಿವರವಾದ ತನಿಖೆ ನಡೆಸಿ, ಲೋಪದೋಷಗಳ ಮಾಹಿತಿ ಹಾಗೂ ಕಾರಣರಾದ ಆರೋಪಿಗಳನ್ನು ಪತ್ತೆ ಮಾಡಿ ಸಂಪೂರ್ಣ ವರದಿಯನ್ನು ಒಂದು ತಿಂಗಳಲ್ಲಿ ನೀಡಬೇಕು. ಹಾಗೇ ಈ ಪ್ರಕರಣಕ್ಕೆ ಸಂಬಂಧಿಸಿದ ಅಗತ್ಯ ಕಡತ, ದಾಖಲೆಗಳನ್ನು ಆಯಾ ಇಲಾಖೆಯ ಅಧಿಕಾರಿಗಳು ಈ ತನಿಖಾ ಸಮಿತಿಗೆ ನೀಡಬೇಕೆಂದು ಆದೇಶದಲ್ಲಿ ಸೂಚಿಸಿದೆ. ರಾಜ್ಯ ಗುತ್ತಿಗೆದಾರರ ಸಂಘವು, ಎಲ್ಲ ಸಾರ್ವಜನಿಕ ●9ನೇ ಪುಟಕ್ಕೆ

# ಸದ್ಯಕ್ಕೆ ಬಿಪಿಎಲ್, ಎಪಿಎಲ್ ಕಾರ್ಡ್ ವಿತರಿಸಲ್ಲ

## ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ಸ್ಪಷ್ಟನೆ



ಬೆಂಗಳೂರು, ಆ. 18(ಕೆಎಂಶಿ)–ಹೊಸದಾಗಿ ಬಿಪಿಎಲ್ ಹಾಗೂ ಎಪಿಎಲ್ ಪಡಿತರ ಚೀಟಿಗಳನ್ನು ಸದ್ಯಕ್ಕೆ ನೀಡಲ್ಲ ಎಂದಿರುವ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ, ಇಲಾಖೆಗೆ ಹೊಸದಾಗಿ 2181 ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಘೋಷಿಸಿದ್ದಾರೆ. ಇಲಾಖಾ ಪ್ರಗತಿ ಪರಿಶೀಲನೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮಗೆ ಹೊಸದಾಗಿ ಪಡಿತರ ಚೀಟಿ ಕೋರಿ ಬಂದಿರುವ ಸುಮಾರು



ಮೂರು ಲಕ್ಷ ಅರ್ಜಿಗಳು ವಿಲೇವಾರಿ ಆಗುವವರೆಗೂ ಹೊಸ ಅರ್ಜಿ ಸ್ವೀಕರಿಸುವುದೂ ಇಲ್ಲ, ನೀಡುವುದೂ ಇಲ್ಲ ಎಂದು ಹೇಳಿದರು. ಅನ್ನಭಾಗ್ಯ ಯೋಜನೆಯಡಿ ಪ್ರತಿ ಯುನಿಟ್‌ಗೆ 5 ಕೆ.ಜಿ. ಹೆಚ್ಚುವರಿ ಅಕ್ಕಿ ನೀಡುವ ವಿಚಾರ ಅಂತಿಮಗೊಳ್ಳುವವರೆಗೂ ಹೊಸ ಪಡಿತರ ಚೀಟಿ ವಿತರಿಸಲ್ಲ. ನಾವು ಈಗಾಗಲೇ ಘೋಷಣೆ ಮಾಡಿರುವಂತೆ 10 ಕೆ.ಜಿ.ಆಹಾರಧಾನ್ಯ ನೀಡುತ್ತೇವೆ. ಅಕ್ಕಿ ಜತೆಗೆ ರಾಗಿ ಮತ್ತು ಜೋಳ ನೀಡಲು ಅಗತ್ಯವಿರುವ ಧಾನ್ಯ ದಾಸ್ತಾನು ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಆದರೆ, ಇದಕ್ಕೂ ಮುನ್ನ ಎಷ್ಟು ಜನರಿಗೆ ಈ ಧಾನ್ಯದ ಅಗತ್ಯವಿದೆ ಎಂಬ ಮಾಹಿತಿ ಸಂಗ್ರಹ ಮಾಡಲು ನಿರ್ದೇಶನ ನೀಡಲಾಗಿದೆ. ಇಲಾಖೆಯಲ್ಲಿ 3500ಕ್ಕೂ ಹೆಚ್ಚು ವಿವಿಧ ಹುದ್ದೆಗಳು ಖಾಲಿ ಇವೆ. 2181 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕಾರ್ಯದರ್ಶಿ ಹಾಗೂ ಆಯುಕ್ತರಿಗೆ ಸೂಚನೆ ನೀಡಿದ್ದೇವೆ ಎಂದರು. ರಾಜ್ಯದ ಎಲ್ಲಾ ತಾಲೂಕುಗಳಲ್ಲಿ ಇಲಾಖೆಯ ಪ್ರತ್ಯೇಕ ಕಚೇರಿಯನ್ನು ತೆರೆದು ಸಹಾಯಕ ನಿರ್ದೇಶಕರನ್ನು ಮತ್ತು ಅಧೀನ ಸಿಬ್ಬಂದಿಯನ್ನು ನೇಮಕ ●9ನೇ ಪುಟಕ್ಕೆ

## ಜೆಡಿಎಸ್ ಬಲಗೊಳಿಸುವ ಜವಾಬ್ದಾರಿ 'ಮರಿ' ದೇವೇಗೌಡರಿಗೆ!

■ಜಿಟಿಡಿ ನೇತೃತ್ವದಲ್ಲಿ ಜೆಡಿಎಸ್ ಕೋರ್ ಕಮಿಟಿ ರಚನೆ ■ಸದ್ಯದಲ್ಲೇ ರಾಜ್ಯಾದ್ಯಂತ ಪ್ರವಾಸ; ಶೀಘ್ರ ಪಕ್ಷದ ನೂತನ ಸಮಿತಿ



ಬೆಂಗಳೂರು, ಆ. 18(ಕೆಎಂಶಿ)– ಮಾಜಿ ಪ್ರಧಾನಮಂತ್ರಿಗಳಾದ ಹೆಚ್.ಡಿ.ದೇವೇಗೌಡರ ನಿರ್ದೇಶನದ ಮೇರೆಗೆ ಜೆಡಿಎಸ್ ಪಕ್ಷದ ಕೋರ್ ಕಮಿಟಿ ರಚನೆ ಮಾಡಲಾಗಿದೆ. ಮುಂದಿನ ಚುನಾವಣೆಗಳನ್ನು ಸಮರ್ಥವಾಗಿ ಎದುರಿಸುವುದು, ಪಕ್ಷವನ್ನು ಸದೃಢಗೊಳಿಸುವ ನಿಟ್ಟಿನಲ್ಲಿ ಮಾಜಿ ಸಚಿವ ಹಾಗೂ ಹಿರಿಯ ಶಾಸಕ ಜಿ.ಟಿ.ದೇವೇಗೌಡರ ಅಧ್ಯಕ್ಷತೆಯಲ್ಲಿ ಜೆಡಿಎಸ್ ಪಕ್ಷದ ನೂತನ ಸಮಿತಿ ರಚನೆ ಮಾಡಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ, ಕೋರ್ ಕಮಿಟಿ ಅಧ್ಯಕ್ಷರಾಗಿ ಮಾಜಿ ಸಚಿವ ಜಿ.ಟಿ.ದೇವೇಗೌಡ ಹಾಗೂ ಸಂಚಾಲಕರಾಗಿ ಮಾಜಿ ಶಾಸಕ ವೈ.ಎಸ್.ವಿ.ದತ್ತ ಅವರನ್ನು ನೇಮಕ ಮಾಡಲಾಗಿದೆ ಎಂದರು. ಆಗಸ್ಟ್ 7 ರಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ನೇತೃತ್ವದಲ್ಲಿ ನಡೆದ ಪಕ್ಷದ ಮುಖಂಡರು ಸಭೆಯಲ್ಲಿ ಕೋರ್ ಕಮಿಟಿಯ ಹೊಸ ಅಧ್ಯಕ್ಷರು ಹಾಗೂ ಸದಸ್ಯರ ಆಯ್ಕೆಯನ್ನು ಅಂತಿಮಗೊಳಿಸಲಾಯಿತು ಎಂದು ಅವರು ಹೇಳಿದರು. ಕೋರ್ ಕಮಿಟಿಯಲ್ಲಿ ಮಾಜಿ ಸಚಿವರಾದ ಸಾ.ರಾ. ಮಹೇಶ್, ಬಂಡೆಪ್ಪ ಕಾಶೆಂಪೂರ್, ಹೆಚ್.ಕೆ. ಕುಮಾರಸ್ವಾಮಿ, ವೆಂಕಟರಾವ್ ನಾಡಗೌಡ, ಸಿ.ಎಸ್.ಪುಟ್ಟರಾಜು, ಅಲ್ಕೋಡ್ ಹನುಮಂತಪ್ಪ, ಶಾಸಕರಾದ ನೇಮಿರಾಜ ನಾಯಕ್, ರಾಜೂಗೌಡ, ಬಿ.ಎಂ.ಫಾರೂಕ್, ಮಾಜಿ ಶಾಸಕರಾದ ●9ನೇ ಪುಟಕ್ಕೆ

## ನೈಸ್ ಯೋಜನೆ ವ್ಯಾಪ್ತಿಯಲ್ಲಿ ಡಿಕೆ ಬ್ರದರ್ಸ್‌ಗೆ ಸೇರಿದ ಎರಡು ಸಾವಿರ ಎಕರೆ ಭೂಮಿ ಇದೆ

●ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಗಂಭೀರ ಆರೋಪ
●ನಮ್ಮ ಕುಟುಂಬಕ್ಕೆ ಸೇರಿದ ಯಾರೊಬ್ಬರ ಹೆಸರಲ್ಲೂ ಇಲ್ಲಿ ಆಸ್ತಿ ಇರುವುದು ಸಾಬೀತುಪಡಿಸಿದರೆ ರಾಜಕೀಯ ನಿವೃತ್ತಿ



ಬೆಂಗಳೂರು, ಆ. 18(ಕೆಎಂಶಿ)– ಬೆಂಗಳೂರು–ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆ (ನೈಸ್) ಅಕ್ಕಪಕ್ಕ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಅವರ ಸಹೋದರ ಸಂಸದ ಡಿ.ಕೆ.ಸುರೇಶ್ ಅವರು ಎರಡು ಸಾವಿರ ಎಕರೆ ಭೂಮಿಯನ್ನು ಲೂಟಿ ಹೊಡೆದಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೈಸ್ ಯೋಜನೆಗಳ ಅಕ್ರಮಗಳಿಗೆ ಈ ಡಿಕೆ ಸಹೋದರರೇ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಮ್ಮ ಕುಟುಂಬದ ಯಾವೊಬ್ಬ ವ್ಯಕ್ತಿ ಹೆಸರಲ್ಲಿ ನೈಸ್ ಆಸ್ತಿ ಇಲ್ಲ. ಒಂದು ವೇಳೆ ಇದ್ದರೆ ನಮ್ಮ ಇಡೀ ಕುಟುಂಬ ರಾಜಕೀಯ ನಿವೃತ್ತಿ ಪಡೆಯುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸವಾಲು ಹಾಕಿದ್ದಾರೆ.

ನೈಸ್ ಯೋಜನೆಗಳ ಅಕ್ರಮಗಳಿಗೆ ಹಾಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೇ ನೇರ ಕಾರಣ. ಈ ವಿಷಯ ಇಡೀ ರಾಜ್ಯಕ್ಕೆ ಗೊತ್ತಿದೆ. ನೈಸ್ ಅಕ್ಕಪಕ್ಕ ಜಮೀನುಗಳನ್ನು ಯಾರು ಕೊಳ್ಳೆ ಹೊಡೆದಿದ್ದಾರೆ ಎನ್ನುವುದೂ ತಿಳಿದಿದೆ ಎಂದು ಅವರು ನೇರ ಆರೋಪ ಮಾಡಿದರು.

ನೈಸ್ ಯೋಜನೆಗೆ ಸಹಿ ಹಾಕಿದ್ದು ಅಂದಿನ ಮುಖ್ಯಮಂತ್ರಿ ದೇವೇಗೌಡರು ಎಂದು ಡಿ.ಕೆ.ಸುರೇಶ್ ನೀಡಿದ್ದ ಹೇಳಿಕೆ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ ಅವರು, ದೇವೇಗೌಡರು ಸಹಿ ಹಾಕಿದ್ದು ರಸ್ತೆ ಮಾಡಲಿಕ್ಕೆ. ಅಲ್ಲಿನ ಭೂಮಿ ಲಪಟಾಯಿಸುವುದಕ್ಕೆ ಅಲ್ಲ.

ನೈಸ್ ವಿಚಾರ ಇಟ್ಟುಕೊಂಡು ಕುಮಾರಸ್ವಾಮಿ ವ್ಯವಹಾರ ಮಾಡುತ್ತಾರೆ ಎಂಬ ಡಿಕೆ ಸುರೇಶ್ ಹೇಳಿಕೆಗೆ ಕೆಂಡಾಮಂಡಲರಾದ ಅವರು, ಅವನ (ನೈಸ್) ಜತೆ ಶಾಮೀಲಾಗಿ ಜಮೀನು ಲೂಟಿ ಹೊಡೀಲಿ ಅಂತ ದೇವೇಗೌಡರು ●9ನೇ ಪುಟಕ್ಕೆ

# ವಾರದಲ್ಲಿ 2 ದಿನ ಶಾಲಾ ಮಕ್ಕಳಿಗೆ ಮೊಟ್ಟೆ: ಮಂಡ್ಯದಲ್ಲಿ ಸಚಿವ ಮಧು ಬಂಗಾರಪ್ಪ ಚಾಲನೆ

ಮಂಡ್ಯ, ಆ.18(ಮೋಹನ್ ರಾಜ್)– ಸರ್ಕಾರಿ ಹಾಗೂ ಅನುದಾನಿತ ಶಾಲಾ ಮಕ್ಕಳಿಗೆ ವಾರದಲ್ಲಿ 2 ದಿನ ಮೊಟ್ಟೆ ಮೊಟ್ಟೆ ತಿನ್ನದ ಮಕ್ಕಳಿಗೆ ಬಾಳೆಹಣ್ಣು ಮತ್ತು ಕಡಲೆ ಮಿಠಾಯಿ ವಿತರಿಸುವ ಯೋಜನೆಗೆ ನಗರದ ಹೊಸಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಶುಕ್ರವಾರ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಚಾಲನೆ ನೀಡಿದರು.

ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಶಾಲೆಗಳ 1ರಿಂದ 10ನೇ ತರಗತಿವರೆಗಿನ ಮಕ್ಕಳಿಗೆ ಪೂರಕ ಪೌಷ್ಟಿಕ ಆಹಾರವಾಗಿ ವಾರದಲ್ಲಿ 2 ದಿನ ಮೊಟ್ಟೆ, ಮೊಟ್ಟೆ ತಿನ್ನದವರಿಗೆ ಬಾಳೆ ಹಣ್ಣು, ಕಡಲೆ ಮಿಠಾಯಿ ವಿತರಿಸುವ ಯೋಜನೆ ಇದಾಗಿದ್ದು, ಈ ಯೋಜನೆಗೆ ಮಂಡ್ಯ ಜಿಲ್ಲೆಯಲ್ಲಿ ಚಾಲನೆ ನೀಡಿದ್ದು ವಿಶೇಷವಾಗಿತ್ತು. ಈ ವೇಳೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾತನಾಡಿ, ಸರ್ಕಾರ ಬಡವರಿಗೆ ಸಹಾಯವಾಗುವ ರೀತಿ ಶಕ್ತಿ, ಗೃಹಜ್ಯೋತಿ ಇನ್ನಿತರ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ. ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 60 ಲಕ್ಷ ಮಕ್ಕಳಿಗೆ ವಾರದಲ್ಲಿ 2 ಬಾರಿ 1.20 ಕೋಟಿ ಮೊಟ್ಟೆ ನೀಡಲಾಗುವುದು. ಇದರಿಂದ ಮಕ್ಕಳಲ್ಲಿ ಪೌಷ್ಟಿಕಾಂಶ ಹೆಚ್ಚಾಗಿ ಉತ್ತಮ ಮಾನಸಿಕ ಹಾಗೂ ದೈಹಿಕ ಬೆಳವಣಿಗೆ ಕಾಣಬಹುದು ಎಂದರು.

ಮುಂದಿನ 2 ವರ್ಷಗಳಲ್ಲಿ ಮಕ್ಕಳಿಗೆ ಪೂರಕ ಹಾಗೂ ಭವಿಷ್ಯ ರೂಪಿಸುವ ಶಿಕ್ಷಣ ನೀಡಲಾಗುವುದು. ಶಿಕ್ಷಣ ಇಲಾಖೆಗೆ ವರ್ಗಾವಣೆ ಕೋರಿ ಅಂದಾಜು 90,000 ಅರ್ಜಿಗಳು ಬಂದಿತ್ತು. 31,000 ಶಿಕ್ಷಕರನ್ನು ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡಲಾಗಿದೆ. ಈಗಾಗಲೇ 30,000 ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಮುಖ್ಯಮಂತ್ರಿಗಳು ಶಾಲೆಗಳಲ್ಲಿ ಶಿಕ್ಷಕರ ಕೊರತೆ ಉಂಟಾಗಬಾರದು ಎಂದು ಇನ್ನೂ 10,000 ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲು ತಿಳಿಸಿದ್ದಾರೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳನ್ನೊಳಗೊಂಡಂತೆ ಸಭೆ ನಡೆಸಿ, ಶಿಕ್ಷಣ ಇಲಾಖೆ ಸಮಸ್ಯೆಗಳನ್ನು ಪರಿಹರಿಸಲಾಗುವುದು ಎಂದರು. ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಗ್ರಾಮೀಣ ಮತ್ತು ಬಡ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುವ ದೃಷ್ಟಿಯಿಂದ ಸರ್ಕಾರಿ ಹಾಗೂ ಅನುದಾನಿತ ಶಾಲಾ ಮಕ್ಕಳಿಗೆ ಮೊಟ್ಟೆ ನೀಡಲಾಗುತ್ತಿದೆ. ಆರ್ಥಿಕವಾಗಿ ಹಿಂದುಳಿದವರು, ಮಹಿಳೆಯರು ಹಾಗೂ ರೈತರಿಗೆ ಪೂರಕವಾದ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಇದಕ್ಕೆ ಸಾರ್ವಜನಿಕರ ಮುಂದಿರುವ ಗೃಹಜ್ಯೋತಿ, ಶಕ್ತಿ, ಗೃಹಲಕ್ಷ್ಮಿ ಹಾಗೂ ಅನ್ನಭಾಗ್ಯ ಯೋಜನೆಗಳೇ ಸಾಕ್ಷಿ. ಗೃಹ ಲಕ್ಷ್ಮಿ ಯೋಜನೆಗೆ ಆ.30 ರಂದು ಚಾಲನೆ ನೀಡಲಾಗುವುದು ಎಂದರು.



ಈ ರಾಜ್ಯಮಟ್ಟದ ಕಾರ್ಯಕ್ರಮವನ್ನು ಮಂಡ್ಯದಲ್ಲಿ ಹಮ್ಮಿಕೊಂಡಿರುವುದು ಸಂತೋಷದ ವಿಷಯ. ಕೃಷಿ ಇಲಾಖೆಯಲ್ಲೂ ರೈತರಿಗೆ ಪೂರಕವಾಗಿ ಕೃಷಿ ಭಾಗ್ಯ ಸೇರಿದಂತೆ ಇನ್ನಿತರ ಯೋಜನೆಗಳನ್ನು ರೂಪಿಸಲಾಗುವುದು. ಜಿಲ್ಲೆಯಲ್ಲಿ ಮೈಶುಗರ್ ಅಭಿವೃದ್ಧಿ ಪಡಿಸಲಾಗುವುದು. ಮಂಡ್ಯ ಜಿಲ್ಲೆಯ ಕಾಮಗಾರಿಗಳ ಹಣ ಪಾವತಿಗಾಗಿ ಲೋಕೋಪಯೋಗಿ ಇಲಾಖೆಗೆ 10 ಕೋಟಿ, ಜಿಪಂಗೆ 10 ರಿಂದ 15 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದರು.

ಕಾರ್ಯಕ್ರಮದ ನಂತರ ಮಕ್ಕಳೊಂದಿಗೆ ಸಚಿವರಾದ ಮಧು ಬಂಗಾರಪ್ಪ, ಚಲುವರಾಯಸ್ವಾಮಿ, ಶಾಸಕರು ಹಾಗೂ ಅಧಿಕಾರಿಗಳು ಊಟ ಸವಿದರು. ಕಾರ್ಯಕ್ರಮದಲ್ಲಿ ಶಾಸಕರಾದ ಗಣಿಗ ರವಿಕುಮಾರ್, ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ, ದರ್ಶನ್ ಪುಟ್ಟಣ್ಣಯ್ಯ, ವಿಧಾನ ಪರಿಷತ್ ಸದಸ್ಯರಾದ ಮಧು ಜಿ.ಮಾದೇಗೌಡ, ಮರಿತಿಬ್ಬೇಗೌಡ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್, ಶಾಲಾ ಶಿಕ್ಷಣ ಇಲಾಖೆ ಆಯುಕ್ತೆ ಬಿ.ಬಿ.ಕಾವೇರಿ, ಪ್ರಧಾನಮಂತ್ರಿ ಘೋಷಣ್ ಶಕ್ತಿ ನಿರ್ಮಾಣದ ನಿರ್ದೇಶಕ ಸುಬಕಲ್ಯಾಣ್, ಜಿಲ್ಲಾಧಿಕಾರಿ ಡಾ.ಕುಮಾರ್, ಎಸ್ಪಿ ಎನ್.ಯತೀಶ್, ಜಿಪಂ ಸಿಇಓ ಶೇಖ್ ತನ್ವೀರ್ ಆಸಿಫ್ ಸೇರಿದಂತೆ ಇನ್ನಿತರರಿದ್ದರು.



## ಐಶ್ವರ್ಯ ದೇಸಾಯಿ ಅವರಿಂದ ದಾಸವಾಣಿ

ಮೈಸೂರು, ಆ. 18– ಪರಮಪೂಜ್ಯ ವಿಶ್ವಪ್ರಸನ್ನ ತೀರ್ಥ ಶ್ರೀ ಪಾದಂಗಳವರ 36ನೇ ಚಾತುರ್ಮಾಸದ ಪ್ರಯುಕ್ತ ಐಶ್ವರ್ಯ ದೇಸಾಯಿ ಅವರಿಂದ ದಾಸ ವಾಣಿವನ್ನು ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ನಾಳೆ (ಆ. 19) ಸಂಜೆ 7 ಗಂಟೆಗೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಚಾತುರ್ಮಾಸ ಸಮಿತಿಯ ಕಾರ್ಯಾಧ್ಯಕ್ಷ ರವಿಶಾಸ್ತ್ರಿ ತಿಳಿಸಿದ್ದಾರೆ.

## ನಾಳೆ ಪಿ.ಲಂಕೇಶ್‌ರ 'ಮುಟ್ಟಿಸಿಕೊಂಡವನು' ನಾಟಕದ ಪ್ರಥಮ ಪ್ರದರ್ಶನ



ಮೈಸೂರು, ಆ.18– ನವ್ಯ ಸಾಹಿತ್ಯದ ಪ್ರಮುಖ ಲೇಖಕರಲ್ಲೊಬ್ಬರಾದ ಪಿ.ಲಂಕೇಶ್ ಅವರು ಬರೆದ ಹಲವಾರು ವಿಶೇಷ ಕಥೆಗಳಲ್ಲಿ 'ಮುಟ್ಟಿಸಿಕೊಂಡವನು' ಕಥೆಯು ಕೂಡ ಒಂದಾಗಿದೆ. ಜಾತಿ ಪದ್ಧತಿ ಶತಶತಮಾನಗಳ ಕಾಲದಿಂದಲೂ ಬೆಳೆದು ಬಂದಿರುವ ಕ್ರೂರ ಪದ್ಧತಿ. ಜಾತಿಯ ಹಿನ್ನೆಲೆಯಲ್ಲಿ ವ್ಯಕ್ತಿಗಳನ್ನು ನೋಡುವ ಮೌಢ್ಯ, ಆ ನೆಲೆಯಲ್ಲಿ ನಡೆದ ಶೋಷಣೆ ಸಂಪೂರ್ಣವಾಗಿ ಇನ್ನೂ ಹೋಗಿಲ್ಲ.

ಶಿಕ್ಷಣ, ನಗರೀಕರಣ, ವಿಜ್ಞಾನದ ಬೆಳವಣಿಗೆಗಳಿಂದಲೂ ನಮ್ಮ ದೇಶ ಜಾತಿ ಪದ್ಧತಿಯಿಂದ ಮುಕ್ತವಾಗದಿರುವುದು ನಮ್ಮ ದುರಂತ. ವ್ಯಕ್ತಿ ವ್ಯಕ್ತಿಯ ನಡುವಿನ ತಾರತಮ್ಯ ಭಾವವಳಿದು ಮಾನವೀಯವಾಗಿ ನೋಡುವ ಗುಣ ಬೆಳೆಯಬೇಕಾಗಿದೆ ಮತ್ತು ಶರಣರ, ಸಂತರ ಸಮಾನತೆಯ ಆಶಯ ಸಾಕಾರಗೊಳ್ಳಬೇಕಿದೆ. ಬದಲಾವಣೆಗಾಗಿ ಹಂಬಲಿಸುತ್ತಿರುವ ಸಮಾಜಕ್ಕೆ ಬಿಡುಗಡೆಯ ದಾರಿಯನ್ನು ತೋರಿಸುವ ದಿಕ್ಕಿನಲ್ಲಿ ಈ ಕತೆ ಮಹತ್ವದ್ದಾಗಿದೆ.

ಮೈಸೂರು ರಂಗಾಯಣವು ಸಮಾಜದಲ್ಲಿನ ಇಂತಹ ಅಸಮಾನತೆಯನ್ನು ಹೋಗಲಾಡಿಸಿ, ಸಮಸಮಾಜದ ನಿರ್ಮಾಣ ಮಾಡುವ ಆಶಯದಿಂದ ತನ್ನ ಸಾಂಸ್ಕೃತಿಕ ಜವಾಬ್ದಾರಿಯ ಮೂಲಕ ಕರ್ತವ್ಯ ನಿರ್ವಹಿಸಿಕೊಂಡು ಬಂದಿದೆ. ಈ ಹಿನ್ನೆಲೆಯಲ್ಲಿ ರಂಗಾಯಣದ ಹಿರಿಯ ಕಲಾವಿದರಾದ ಶ್ರೀಮತಿ ಕೆ.ಆರ್.ನಂದಿನಿ ಅವರ ನಿರ್ದೇಶನದಲ್ಲಿ ರಂಗಾಯಣದ ಹಿರಿಯ ಕಲಾವಿದರು ಪ್ರಸ್ತುಪಡಿಸುತ್ತಿರುವ 'ಮುಟ್ಟಿಸಿಕೊಂಡವನು' ನಾಟಕದ ಪ್ರಥಮ ಪ್ರದರ್ಶನವನ್ನು ಆ. 20 ರಂದು ಸಂಜೆ 6.30ಕ್ಕೆ ರಂಗಾಯಣದ ಭೂಮಿಗೀತ ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ.

**ಸಂಗೀತ ವಿನ್ಯಾಸ:** ಪ್ರಶಾಂತ್ ಹಿರೇಮಠ, ರಂಗವಿನ್ಯಾಸ ಹೆಚ್.ಕೆ.ದ್ವಾರಕಾನಾಥ್, ಬೆಳಕಿನ ವಿನ್ಯಾಸ: ಮಹೇಶ್ ಕಲ್ಲತ್ತಿ ಮತ್ತು ರಂಗರೂಪ, ನಿರ್ದೇಶನ: ಕೆ.ಆರ್.ನಂದಿನಿ.



**ಮೈಸೂರು ನಗರ ವಕೀಲರ ವಿವಿಧೋದ್ದೇಶ ಸಹಕಾರ ಸಂಘದ ನೂತನ ಅಧ್ಯಕ್ಷ ಸನತ್ ಕುಮಾರ್, ಉಪಾಧ್ಯಕ್ಷ ಮಂಜು ಕುಮಾರ್ ಅವರನ್ನು ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ ಅಯೂಬ್ ಖಾನ್, ಗಿರೀಶ್ ಅಭಿನಂದಿಸಿದರು.**

## ಕಾಂಗ್ರೆಸ್‌ನಿಂದ ಮನ್ಸೂರ್ ಖಾನ್ ಕಡೆಗಣನೆ: ಎಸ್‌ಡಿಪಿಐ ಆರೋಪ

ಮೈಸೂರು, ಆ. 18–ಕರ್ನಾಟಕ ವಿಧಾನ ಪರಿಷತ್‌ನ ಮೂರು ನಾಮ ನಿರ್ದೇಶಿತ ಸ್ಥಾನಗಳಿಗೆ ಕಳೆದ ಎರಡು ತಿಂಗಳ ಹಿಂದೆಯೇ ಅಂತಿಮವಾಗಿದ್ದ ಕಾಂಗ್ರೆಸ್ ಕಟ್ಟಾಳು ಕೆ.ರಹಮಾನ್ ಖಾನ್ ಪುತ್ರ ಮನ್ಸೂರ್ ಖಾನ್ ಹೆಸರನ್ನು ಕೈ ಬಿಡುವ ಮೂಲಕ ಕಾಂಗ್ರೆಸ್ ಪಕ್ಷ ಮುಸ್ಲಿಮರ ಪಾಲಿಗೆ ಹಿತಶತ್ರುವಾಗಿ ಪರಿಣಮಿಸಿದೆ ಎಂದು ಎಸ್‌ಡಿಪಿಐ ಜಿಲ್ಲಾಧ್ಯಕ್ಷ ರಫತ್ ಖಾನ್ ವ್ಯಂಗ್ಯವಾಡಿದ್ದಾರೆ.

ಮೈಸೂರಿನಲ್ಲಿ ಮಾಧ್ಯಮದವರೊಂದಿಗೆ ಅವರು ಮಾತನಾಡಿ, ಉಮಾಶ್ರೀ ಪರ ಮುಖ್ಯ ಮಂತ್ರಿ ಸಿದ್ದರಾಮಯ್ಯ ಮತ್ತು ನಿವೃತ್ತ ಇಡಿ ಅಧಿಕಾರಿ ಸುಧಾಮ್ ದಾಸ್ ಪರ ಡಿಸಿಎಂ ಡಿ.ಕೆ.ಶಿವಕುಮಾರ್ ಲಾಬಿ ನಡೆಸಿ ಅವರುಗಳ ಸ್ಥಾನ ಗಟ್ಟಿ ಮಾಡಿದ್ದಾರೆ. ಆದರೆ, ನಿಷ್ಠಾವಂತ ಹಿರಿಯ ಕಾಂಗ್ರೆಸ್ ಮುಖಂಡ ಕೆ. ರೆಹಮಾನ್ ಖಾನ್ ಪಕ್ಷ ಸೇವೆಯನ್ನು ಇಬ್ಬರೂ ಮುಖಂಡರು ಕಡೆಗಣಿಸಿ ಮನ್ಸೂರ್ ಖಾನ್ ಅವರನ್ನು ಕಡೆಗಣಿಸಲಾಗಿದೆ. ಇದರಿಂದ ಕಾಂಗ್ರೆಸ್ ಕೂಡ ಮುಸಲ್ಮಾನರನ್ನು ಅಧಿಕಾರದಿಂದ ದೂರವಿಡುವ ಪಕ್ಷವೆಂದು ಮತ್ತೊಮ್ಮೆ ಸಾಬೀತಾಗಿದೆ ಎಂದು ಕಿಡಿ ಕಾರಿದರು.

ಮನ್ಸೂರ್ ಖಾನ್ ಎಐಸಿಸಿ ಪದಾಧಿಕಾರಿ, ತೆಲಂಗಾಣ ಉಸ್ತುವಾರಿಯಾಗಿದ್ದವರು. ಮೇಲಾಗಿ ರಾಜ್ಯ ಸಭೆಯ ಮಾಜಿ ಉಪಸಭಾಪತಿ ಮತ್ತು ಮಾಜಿ ಕೇಂದ್ರ ಸಚಿವ ಕೆ.ರಹಮಾನ್ ಖಾನ್ ಅವರ ಪುತ್ರ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಜಯಭೇರಿಗೆ ಮುಸ್ಲಿಂ ಮತಗಳು ನಿರ್ಣಾಯಕ ಪಾತ್ರ ವಹಿಸಿದ್ದು, ಮುಸಲ್ಮಾನರಿಗೆ ಇನ್ನಿಲ್ಲದ ಆಮಿಷ ನೀಡಿದ್ದ ಮುಖಂಡರು ಈಗ ಅವರನ್ನು ಕಡೆಗಣಿಸುತ್ತಿದ್ದಾರೆ. ಕೆಲ ಆರೋಪ ಎದುರಿಸುತ್ತಿರುವ ಮತ್ತೊಬ್ಬ ನಾಮ ನಿರ್ದೇಶನ ಅಭ್ಯರ್ಥಿ ಸೀತಾರಾಮ್ ಅವರನ್ನು ಕಾಂಗ್ರೆಸ್ ಮುಖಂಡರು ಬೆಂಬಲಿಸಿದ್ದು, ಯಾವುದೇ ಆರೋಪವಿಲ್ಲದ ಶುದ್ಧ ಚಾರಿತ್ರ್ಯದ ಮನ್ಸೂರ್ ಖಾನ್ ಅವರನ್ನು ಯಾವ ಕಾರಣಕ್ಕೆ ಕೈ ಬಿಡಲಾಗಿದೆ ಎಂಬುದನ್ನು ಕಾಂಗ್ರೆಸ್ ಮುಖಂಡರು ಮುಸ್ಲಿಂ ಸಮುದಾಯಕ್ಕೆ ತಿಳಿಸಬೇಕು ಎಂದು ರಫತ್ ಖಾನ್ ಒತ್ತಾಯಿಸಿದರು.

## ನಿಧನ



### ಕೆ.ಅಜಿತ್ ನಾರಾಯಣ್

ಮೈಸೂರು, ಆ.18–ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ), ಮೈಸೂರು ಸೆಂಟರ್ ಸಂಸ್ಥಾಪಕ ಸದಸ್ಯರು, ಮಾಜಿ ಅಧ್ಯಕ್ಷರೂ ಹಾಗೂ ಮೈಸೂರಿನ ಟಿ.ಕೆ.ಬಡಾವಣೆ ನಿವಾಸಿ ಕೆ.ಅಜಿತ್ ನಾರಾಯಣ್ ಖಾಸಗಿ ಆಸ್ಪತ್ರೆಯಲ್ಲಿ ಗುರುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ, ಮೊಮ್ಮಕ್ಕಳು, ಸಹೋದರ ಕೆ.ಶ್ರೀರಾಮ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಜಯನಗರದ ರುದ್ರಭೂಮಿಯಲ್ಲಿ ಗುರುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಕಾಂತಮ್ಮ



ಮೈಸೂರು, ಆ.18–ದೇವರಾಜ ಮೊಹಲ್ಲಾ ಸೀಬಯ್ಯ ರಸ್ತೆ ನಿವಾಸಿ ದಿವಂಗತ ವೈ.ಎನ್.ನರಸಿಂಹಶೆಟ್ಟಿ ಅವರ ಧರ್ಮಪತ್ನಿ ಕಾಂತಮ್ಮ(88) ಶುಕ್ರವಾರ ರಾತ್ರಿ ತಮ್ಮ ನಿವಾಸದಲ್ಲಿ ನಿಧನರಾದರು.

ದಿವಂಗತರು ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶನಿವಾರ ಮಧ್ಯಾಹ್ನ 12 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ದಿವಂಗತರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ

### ವೆಂಕಟಮ್ಮ



ಮೈಸೂರು, ಆ.18– ಮೈಸೂರಿನ ಗಾಂಧಿನಗರ ನಿವಾಸಿ ಶ್ರೀಮತಿ ವೆಂಕಟಮ್ಮ(67) ಶುಕ್ರವಾರ ಸಂಜೆ ನಿಧನರಾದರು.

ಇವರು ಪತಿ ವೆಂಕಟಯ್ಯ, ಮೂವರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗಾಂಧಿನಗರದ ಆದಿ ಜಾಂಬವ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 12 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.


# ಸಂಗೊಳ್ಳಿ ರಾಯಣ್ಣ ಸರ್ಕಲ್‌ನಲ್ಲಿ ಇಂಟರ್‌ಲಾಕ್ ವ್ಯವಸ್ಥೆಗೆ ಚಾಲನೆ

ಮೈಸೂರು, ಆ.18(ಬಿಎಲ್‌ಯು)– ಮೈಸೂರಿನ ಚಾಮುಂಡಿಬೆಟ್ಟ ರಸ್ತೆಯ ಸಂಗೊಳ್ಳಿ ರಾಯಣ್ಣ ಸರ್ಕಲ್‌ನಲ್ಲಿ ನಿರ್ಮಾಣ ಮಾಡಿರುವ ಇಂಟರ್‌ಲಾಕ್ ವ್ಯವಸ್ಥೆಯನ್ನು ಸಂಸದ ಪ್ರತಾಪ್ ಸಿಂಹ ಉದ್ಘಾಟಿಸಿದರು. ಲೋಕಸಭಾ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ 10 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿರುವ ಇಂಟರ್‌ಲಾಕ್ ಸೌಲಭ್ಯವನ್ನು ಟೇಪ್ ಕತ್ತರಿಸುವ ಮೂಲಕ ಪ್ರತಾಪ್ ಸಿಂಹ ಉದ್ಘಾಟನೆ ಮಾಡಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ ಆಯೋಜಿಸಿದ್ದ ಸ್ವಾತಂತ್ರ್ಯೋತ್ಸವ ಹಾಗೂ ಸಂಗೊಳ್ಳಿ ರಾಯಣ್ಣ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಉಪ ಮೇಯರ್ ರೂಪ, ಮಾಜಿ ಕಾರ್ಪೊರೇಟರ್ ಕೆ.ಜೆ. ರಮೇಶ್, ರಾಜಶೇಖರ್ ದೊಡ್ಡಣ್ಣ, ಮೌರ್ಯ, ಶಿವಕುಮಾರ್, ಡಾ.ಬಾನುಪ್ರಕಾಶ್, ಅಪ್ಪುಗೌಡ, ಶಿವರಾಮ್, ಕ್ಯಾಂಟೀನ್ ನಾಗಣ್ಣ, ಪುನೀತ್ ರಾಯಣ್ಣ, ಮಹೇಂದ್ರ, ಕೃಷ್ಣನಾಯಕ, ಹರೀಶ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



## ತಹಸೀಲ್ದಾರ್, ಎಸಿ, ಡಿಸಿ ಕೋರ್ಟ್‌ನಲ್ಲಿರುವ ಪ್ರಕರಣಗಳು 4 ತಿಂಗಳಲ್ಲಿ ಇತ್ಯರ್ಥ ಆಗಬೇಕು



ಬೆಂಗಳೂರು, ಆ.18(ಕೆಎಂಶಿ)– ತಹಶೀಲ್ದಾರ್, ಎಸಿ ಹಾಗೂ ಡಿಸಿ ಮಟ್ಟದ ನ್ಯಾಯಾಲಯಗಳಲ್ಲಿ 6 ತಿಂಗಳಿನಿಂದ 5 ವರ್ಷಗಳವರೆಗೆ ನೂರಾರು ತಕರಾರು ಪ್ರಕರಣಗಳು ಬಾಕಿ ಉಳಿದಿದ್ದು, ಈ ಎಲ್ಲ ಪ್ರಕರಣಗಳನ್ನು 4 ತಿಂಗಳ ಕಾಲಮಿತಿಯಲ್ಲಿ ಇತ್ಯರ್ಥಪಡಿಸಬೇಕು ಎಂದು ಸಚಿವ ಕೃಷ್ಣ ಬೈರೇಗೌಡ ಅಧಿಕಾರಿಗಳಿಗೆ ಗಡುವು ನೀಡಿದ್ದಾರೆ.

ವಿಕಾಸಸೌಧದಲ್ಲಿ ಆಯೋಜಿಸಲಾಗಿದ್ದ ಕಂದಾಯ ಇಲಾಖೆ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದ ಅವರು, ಜನರಿಗೆ ಒಳಿತು ಕೆಡುಕು ಎರಡನ್ನೂ ಮಾಡುವ ಶಕ್ತಿ ಕಂದಾಯ ಇಲಾಖೆಗೆ ಇದೆ. ಆದರೆ, ಕಾಂಗ್ರೆಸ್ ಸರ್ಕಾರ ಉತ್ತಮ ಆಡಳಿತ ನೀಡಲಿದೆ ಎಂಬ ಭರವಸೆಯಲ್ಲಿ ಜನ ನಮಗೆ ಮತ ನೀಡಿದ್ದು, ಜನಸ್ನೇಹಿ ಆಡಳಿತ ನೀಡುವುದು ನಮ್ಮ ಆದ್ಯತೆಯಾಗಲಿ. ಕಳೆದ ಐದು ವರ್ಷಗಳಿಂದ ಇತ್ಯರ್ಥವಾಗದ ತಕರಾರು ಪ್ರಕರಣಗಳನ್ನು ಶೀಘ್ರದಲ್ಲೇ ವಿಲೇವಾರಿಗೊಳಿಸಿ ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

## 22ನೇ ಏಷಿಯನ್ ಮಾಸ್ಟರ್ ಆಥ್ಲೆಟಿಕ್ ಕ್ರೀಡಾಕೂಟಕ್ಕೆ ಮಾದಪ್ಪ ಯೋಗೇಂದ್ರ



ಮೈಸೂರು, ಆ. 18– ಅಂತರರಾಷ್ಟ್ರೀಯ ಅಥ್ಲೆಟ್ ಹಾಗೂ ಮೈಸೂರು ಅಥ್ಲೆಟಿಕ್ಸ್ ಕ್ಲಬ್ ಕಾರ್ಯದರ್ಶಿ ಮಾದಪ್ಪ ಯೋಗೇಂದ್ರ ಅವರು ನ. 8 ರಿಂದ 12 ರವರೆಗೆ ಫಿಲಿಫೈನ್ಸ್‌ನ ನ್ಯೂ ಕ್ಲಾಕ ಸಿಟಿ, ಕ್ಯಾಪಾಸ್, ತಾರ್ಲಾಕ್‌ನಲ್ಲಿ ನಡೆಯುವ 22ನೇ ಏಷಿಯನ್ ಮಾಸ್ಟರ್ ಆಥ್ಲೆಟಿಕ್ಸ್ ಕ್ರೀಡಾಕೂಟಕ್ಕೆ ಆಯ್ಕೆಯಾಗಿ ಭಾರತವನ್ನು ಪ್ರತಿನಿಧಿಸುತ್ತಿದ್ದಾರೆ

## ವೀರಶೈವ ಲಿಂಗಾಯಿತ ವಧು, ವರರ ಬೃಹತ್ ಸಮಾವೇಶ

ಮೈಸೂರು, ಆ. 18– ಮೈಸೂರಿನ ಗನ್‌ಹೌಸ್ ಹತ್ತಿರ, ಉತ್ತರಾದಿ ಮಠದ ರಸ್ತೆಯಲ್ಲಿರುವ ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪದಲ್ಲಿ ಸೆ. 3 ರಂದು ಮಧ್ಯಾಹ್ನ 12 ರಿಂದ 5 ಗಂಟೆಯವರೆಗೆ ವೀರಶೈವ ಲಿಂಗಾಯಿತ ವಧುವರರ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಸೆ. 2 ರೊಳಗೆ ನೋಂದಣಿ ಮಾಡಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9686205346 ಸಂಪರ್ಕಿಸಬಹುದು.

# ವಿದ್ಯಾರ್ಥಿಗಳಿಗೆ ದೈಹಿಕ, ಮಾನಸಿಕ, ಸಾಮಾಜಿಕ, ಆಧ್ಯಾತ್ಮಿಕ ಆರೋಗ್ಯ ಅಗತ್ಯ

### ನಿವೃತ್ತ ಪ್ರಾಧ್ಯಾಪಕ ಪ್ರೊ. ಎಂ.ಕೃಷ್ಣೇಗೌಡ ಕಿವಿಮಾತು



ಮೈಸೂರು, ಆ.18– ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ವಿದ್ಯಾರ್ಥಿಗಳ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡುತ್ತವೆ. ಕಲಿಕೆಯ ಹಂತದಲ್ಲಿ ಕೇವಲ ಪಠ್ಯಕ್ಕೆ ಮಾತ್ರವೇ ಸೀಮಿತವಾಗಬಾರದು. ವಿದ್ಯಾರ್ಥಿಗಳಿಗೆ ದೈಹಿಕ, ಮಾನಸಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಆರೋಗ್ಯ ಅಗತ್ಯ ಎಂದು ಖ್ಯಾತ ವಾಗ್ಮಿಗಳೂ ಆದ ಪ್ರೊ. ಎಂ. ಕೃಷ್ಣೇಗೌಡ ಹೇಳಿದರು.

ಮೈಸೂರಿನ ಊಟಿ ರಸ್ತೆಯ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಸ್ನಾತಕೋತ್ತರ ವಿಭಾಗದ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಸಮಾರಂಭದಲ್ಲಿ ಸಮಾರೋಪ ಭಾಷಣ ಮಾಡಿದ ಅವರು, ವಿದ್ಯಾರ್ಥಿಗಳ ಕನಸು ದೂರದೃಷ್ಟಿ ಉಳ್ಳದ್ದು ಹಿರಿದಾದದ್ದು ಆಗಿರಬೇಕು. ಪ್ರಾಪಂಚಿಕ ಜ್ಞಾನ ಸಂಪಾದನೆ ಈಗ ಬಲು ಸುಲಭ. ಜಗತ್ತು ಇಂದು ನಮ್ಮ ಅಂಗೈಯಲ್ಲಿಯೇ ಇದೆ. ನಾವು ನಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ ನಮ್ಮ ಮೊಬೈಲು ಫೋನುಗಳನ್ನು ಕ್ರಮಬದ್ಧವಾಗಿ ಬಳಸಿಕೊಳ್ಳಬೇಕು. ಕಾಲ ಕಳೆದಂತೆ ಶಿಕ್ಷಣದ ದೃಷ್ಟಿಕೋನವೂ ಬದಲಾಗಿದೆ. ಮುಂದಿನ ದಿನಗಳಲ್ಲಿ ಕೌಶಲ್ಯ ಉಳ್ಳವರಿಗೆ, ಪ್ರತಿಭಾನ್ವಿತರಿಗೆ ಗುರಿ ಮುಟ್ಟಲು ಹೆಚ್ಚು ಸಮಯ ಬೇಕಿಲ್ಲ. ಶಿಕ್ಷಣ ಸದೃಢವಾಗಿದ್ದರೆ ಜ್ಞಾನ, ಕೌಶಲ್ಯಗಳು ಸೂಕ್ತವಾಗಿದ್ದರೆ ಅವಕಾಶಗಳು ನೀವಿರುವಲ್ಲಿಗೇ ಹುಡುಕಿ ಬರುತ್ತವೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಲೋಕ ಸೇವಾ ಆಯೋಗದ ನಿವೃತ್ತ ಅಧ್ಯಕ್ಷ ಎಸ್. ಪಿ. ಷಡಕ್ಷರಿಸ್ವಾಮಿ ಮಾತನಾಡಿ, ಕನಸುಗಳಿಲ್ಲದೆ ಜೀವನ ಸಾಧನೆಯ ಕಡೆಗೆ ಹೋಗಲಾರದು. ಕನಸು ದೊಡ್ಡದಾಗಿರಬೇಕು. ಜೊತೆಗೆ ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಬೇಕು. ಸದಾ ಸಕಾರಾತ್ಮಕ ಮನೋಭಾವ ಬೆಳೆಸಿಕೊಳ್ಳಬೇಕು. ನಕಾರಾತ್ಮಕ ಚಿಂತನೆಗಳಿಂದ ಹಾಗೂ ಅವುಗಳನ್ನು ಹೊಂದಿರುವವರಿಂದ ದೂರವಿರಬೇಕು. ಶಿಕ್ಷಣ ನಮ್ಮಲ್ಲಿ ಸುಪ್ತವಾಗಿ ಅಡಗಿರುವ ಶಕ್ತಿ, ಸಾಮರ್ಥ್ಯ, ಪ್ರತಿಭೆಗಳನ್ನು ಅರಳಿಸುವ ಸಾಧನ. ಆ ಶಿಕ್ಷಣವು ವಿದ್ಯಾರ್ಥಿಗಳನ್ನು ಅಧ್ಯಯನಶೀಲರನ್ನಾಗಿ ಮಾಡಬೇಕು. ಕಲಿಕೆಯ ಪರಿಸರವೂ ವ್ಯಕ್ತಿಯನ್ನು ರೂಪಿಸುವಲ್ಲಿ ಮುಖ್ಯವಾಗುತ್ತದೆ ಎಂದರು.

ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, ಸಾಧನೆಗೆ ಬಡತನ, ಆರ್ಥಿಕ ಸ್ಥಿತಿಗತಿಗಳು ಕಾರಣವಾಗಲಾರವು ದೃಢ ನಿರ್ಧಾರ, ಸಾಧಿಸುವ ಛಲ ಮುಖ್ಯ ರಜನೀಕಾಂತ್, ಅಂಬಾನಿ, ಎಂ.ಎಸ್ ದೋನಿ, ಸಚಿನ್ ತೆಂಡುಲ್ಕರ್, ಅಕ್ಷಯ್ ಕುಮಾರ್‌ರಂತಹವರು ಶ್ರಮಪಟ್ಟು ಸಾಧಕರಾಗಿದ್ದಾರೆ. ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ವಿದ್ಯಾರ್ಥಿ ಜೀವನದ ಒಂದು ಭಾಗವಾಗಬೇಕು, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು. ಕ್ರೀಡೆಗಳಲ್ಲಿ ತೊಡಗಿಕೊಳ್ಳಬೇಕು. ಸೋಲು ಗೆಲುವು ಮುಖ್ಯವಲ್ಲ. ಭಾಗವಹಿಸುವಿಕೆ ಮುಖ್ಯ. ನಿರಂತರ ಪರಿಶ್ರಮದಿಂದ ಎಲ್ಲವೂ ಸಾಧ್ಯ. ಇದಕ್ಕಾಗಿ ನಾವು ಸಾಧನೆಗೈದ ಆದರ್ಶವ್ಯಕ್ತಿಗಳ ಜೀವನ ಹಿನ್ನೆಲೆಗಳನ್ನು ತಿಳಿಯಬೇಕು ಎಂದು ಅಭಿಪ್ರಾಯಪಟ್ಟರು.

ಪ್ರಾಂಶುಪಾಲೆ ಡಾ.ಎಸ್.ಪ್ರತಿಭಾ, ಸಾಂಸ್ಕೃತಿಕ ವೇದಿಕೆ ಸಂಚಾಲಕ ಡಾ. ಎಂ.ಪಿ. ಸೋಮಶೇಖರ್, ಕ್ರೀಡಾ ವೇದಿಕೆ ಸಂಚಾಲಕ ಎಂ.ಕಾರ್ತಿಕ್ ಉಪಸ್ಥಿತರಿದ್ದರು. ಅಗ್ನಿವೀರ್‌ಗೆ ಆಯ್ಕೆಯಾಗಿರುವ ಕಾಲೇಜಿನ ವಿದ್ಯಾರ್ಥಿಗಳಾದ ವಿಕ್ರಮ್ ನಾಯಕ್, ಹಾಗೂ ಸಾತ್ವಿಕ್ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

19.8.2023 ಶನಿವಾರ, ಮಳೆ ನಕ್ಷತ್ರ: ಮಖ 17.08.2023 ರಿಂದ 30.08.2023

ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಉತ್ತರಾಷಾಢ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ವಸ್ತ್ರ ಉತ್ಸವ–2023, ಸ್ಥಳ: ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10 ರಿಂದ ರಾತ್ರಿ 9 ರವರೆಗೆ.

■ **ವಿದ್ಯಾವರ್ಧಕ ಸಂಘ :** ಸ್ನಾತಕೋತ್ತರ ವಿದ್ಯಾರ್ಥಿಗಳ ವೇದಿಕೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಚಾಮರಾಜನಗರ ವಿವಿ ಕುಲಪತಿ ಪ್ರೊ. ಎಂ.ಆರ್. ಗಂಗಾಧರ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಅಧ್ಯಕ್ಷ ಟಿ. ನಾಗರಾಜು, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಮೈಸೂರು ಫೋಟೋಗ್ರಾಫಿಕ್ ಅಸೋಸಿಯೇಷನ್ :** ವಿಶ್ವ ಛಾಯಾಗ್ರಹಣ ದಿನ, ಉದ್ಘಾಟನೆ : ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಸ್ಥಳ: ಸುಚಿತ್ರ ಆರ್ಟ್ ಗ್ಯಾಲರಿ, ಕಲಾಮಂದಿರದ ಆವರಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್:** ಸಾಮೂಹಿಕ ಶ್ರೀ ಸತ್ಯನಾರಾಯಣಸ್ವಾಮಿ ಪೂಜೆ ಕಾರ್ಯಕ್ರಮ ಮತ್ತು ಧಾರ್ಮಿಕ ಸಭಾ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಶಿವಪ್ರಭು ಸ್ವಾಮೀಜಿ, ಅಧ್ಯಕ್ಷತೆ : ಸಾಮೂಹಿಕ ಸತ್ಯನಾರಾಯಣ ಸ್ವಾಮಿ ಸಮಿತಿ ಅಧ್ಯಕ್ಷ ಗಿರೀಶ, ಉದ್ಘಾಟನೆ : ಟ್ರಸ್ಟ್ ಪ್ರಾದೇಶಿಕ ನಿರ್ದೇಶಕ ಬಿ. ಜಯರಾಮ ನೆಲ್ಲಿತಾಯ, ಮುಖ್ಯ ಅತಿಥಿಗಳು : ಶಾಸಕರಾದ ಜಿ.ಟಿ. ದೇವೇಗೌಡ, ಟಿ.ಎಸ್. ಶ್ರೀವತ್ಸ, ಮಾಜಿ ಮೇಯರ್ ಎಸ್. ಸತೀಶ್, ಪಾಲಿಕೆ ಸದಸ್ಯ ಸಿ. ಶ್ರೀಧರ್, ಉಪಮೇಯರ್ ಡಾ. ಬಿ. ರೂಪ, ಪಾಲಿಕೆ ಸದಸ್ಯರಾದ ರಜನಿ ಅಣ್ಣಯ್ಯ, ಅಶ್ವಿನಿ ಅನಂತ್, ಸ್ಥಳ: ಸಮಸ್ತ ಕಲ್ಯಾಣ ಮಂಟಪ, ಆಲನಹಳ್ಳಿ, ಬೆಳಗ್ಗೆ 11 ರಿಂದ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ:** ವಿಶ್ವ ಛಾಯಾಗ್ರಹಣ ದಿನಾಚರಣೆ, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್.ಶ್ರೀವತ್ಸ, ಕಾವಾ ಪ್ರಭಾರ ಡೀನ್ ಎ. ದೇವರಾಜು, ಅಧ್ಯಕ್ಷತೆ : ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಸನ್ಮಾನಿತರು: ಹಿರಿಯ ಛಾಯಾಗ್ರಾಹಕ ಸುತ್ತೂರು ನಂಜುಂಡನಾಯಕ, ಸ್ಥಳ: ರಾಜಶೇಖರ ಕೋಟಿ ಸಭಾಂಗಣ, ಸಂಘದ ಆವರಣ, ಬೆಳಗ್ಗೆ 11.30ಕ್ಕೆ.

■ **ಮೈಸೂರು ಕನ್ನಡ ವೇದಿಕೆ:** ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತ್ಯೋತ್ಸವ, ಸಾಧಕರಿಗೆ ರಾಯಣ್ಣ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ಪ್ರಧಾನ ಭಾಷಣ: ನಿವೃತ್ತ ಕಮಾಂಡೋ ಅಧಿಕಾರಿ ದೇವೇಂದ್ರ ತೇನಗಿ, ಉಪಸ್ಥಿತರು: ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಟಿ.ಜಿ. ಆದಿಶೇಷನ್‌ಗೌಡ, ಡಾ.ಶ್ರೀಷಾಭಟ್, ಅಧ್ಯಕ್ಷತೆ: ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಪ್ರಾಸ್ತಾವಿಕ ನುಡಿ: ನಾಲಾಬೀದಿ ರವಿ, ಸ್ಥಳ:ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ, ಸುಬ್ಬರಾಯನಕೆರೆ, ಬೆಳಗ್ಗೆ 11.30ಕ್ಕೆ.

■ **ಪ್ರಣತಿ ಟ್ರಸ್ಟ್, ಮೈಸೂರು, ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ, ಪಪೆಟ್ ಹೌಸ್ ಧಾರವಾಡ, ಸಂಚಲನ ಮೈಸೂರು:** ಅದ್ಭುತ ರಾಮಾಯಣ ಛಾಯಾಚಲನೆ, ಪ್ರದರ್ಶನಕ್ಕೆ ಚಾಲನೆ:ಪ್ರಾಂಶುಪಾಲ ಕೆ.ಜಿ. ರಂಗಯ್ಯ, ಉಪಸ್ಥಿತರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಪ್ರಣತಿ ಟ್ರಸ್ಟ್ ಮ್ಯಾನೇಜಿಂಗ್ ಟ್ರಸ್ಟಿ ಪಿ.ರವಿಕುಮಾರ್, ರಂಗ ನಿರ್ದೇಶಕರಾದ ಶ್ರೀಮತಿ ರಜನಿ ಗರುಡ, ರಂಗ ನಿರ್ದೇಶಕ ದೀಪಕ್ ಮೈಸೂರು, ಸ್ಥಳ: ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ, ಮಧ್ಯಾಹ್ನ 2ಕ್ಕೆ

■ **ಗಾನಚಂದನ ಕಲಾಬಳಗ :** ಡಾ. ಎಸ್.ಪಿ.ಬಿ. ಗಾನ ರಸಾಯನ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ನಂಜುಮಳಿಗೆ ವೃತ್ತ, ಸಂಜೆ 5ಕ್ಕೆ.

■ **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿದ್ವಾನ್ ಸಿ.ಎಸ್.ಶ್ರೀನಿವಾಸಮೂರ್ತಿ ಆಚಾರ್ಯ ಅವರಿಂದ ಉತ್ತರಕಾಂಡ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಕೃಷ್ಣಮೂರ್ತಿಪುರಂ, ಸಂಜೆ 6ರಿಂದ 7ರವರೆಗೆ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ವಿಪ್ರಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಸಿಎಫ್‌ಟಿಆರ್‌ಐ ಶೋಧ ಅನುಶೋಧ– ಪ್ರಾಯೋಜಿತ ಕಾರ್ಯಕ್ರಮ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರ್ ಉಮೇಶ್, 7.15 ಭಾವಗೀತೆಗಳು–ಸುಲೋಚನ, ಶಿವಮೊಗ್ಗ ಸುಬ್ಬಣ್ಣ, ಮಾಲತಿ ಶರ್ಮ, 8.30 ವಿಶಿಷ್ಟ ವ್ಯಕ್ತಿ–ವಿಶೇಷ ಯತ್ನ, ಬಾನುಲಿ ಸರಣಿ– ದೇಸಿ ಹಸುಗಳನ್ನು ಸಾಕುತ್ತಿರುವ ಕೆ.ಆರ್. ನಗರ ತಾಲೂಕು ಹಂಪಾಪುರದ ಸ್ವರೂಪ ರಾಣಿ ಅವರೊಂದಿಗೆ ಸಂವಾದ ಅವರೊಂದಿಗೆ ಭಾಗವಹಿಸುವವರು– ದಿವಾಕರ ಹೆಗಡೆ, 9.05ವಸುಧೈವ ಕುಟುಂಬಕಂ – ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ಎಂ.ಎಸ್. ಸಂಗೀತ – ಹಾಡುಗಾರಿಕೆ, 11.00 "ಸ್ವರಾಜ್"– ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ತಾಥೆ

**ಮಧ್ಯಾಹ್ನ:** 12.30 ದೇವರನಾಮ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 12.45 ಜನಪದಗೀತೆ–ಬಸವನಹಳ್ಳಿ ತಂಬೂರಿ ರಾಚಪ್ಪ ಮತ್ತು ಸಂಗಡಿಗರು, 1.20 ಭಾವಗೀತೆ– ವೃಂದಗಾನ, ಕೆ.ಆರ್. ಸವಿತ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.30 ಮಕ್ಕಳ ಮಂಟಪ–ಮುಖಾಮುಖಿ–ರಂಗಶಿಕ್ಷಣ ಅಥವಾ ನಾಟಕಗಳಲ್ಲಿ ಅಭಿನಯ ಕುರಿತು ಮಕ್ಕಳಿಗೆಇ ತಿಳಿಸಿಕೊಡುತ್ತಾರೆ ಚಿತ್ರಾ ವೆಂಕಟರಾಜು, ಭಾಗವಹಿಸುವ ಮಕ್ಕಳು ಹೇಮಂತ್ ಜಿ.ಎಂ., ನಂದಿನಿ ಎಸ್., 4.00 ನಾಟಕ "ಬಿದ್ದು ಮೂಲೆಯಾದ ಹೂಗಳು" ರಚನೆ– ಬಿ.ಆರ್. ನಾಗೇಶ್, ನಿರ್ಮಾಣ– ದಾ.ಬಿ.ಎಂ. ಶರಭೇಂದ್ರ ಸ್ವಾಮಿ, 4.30 ನೆನಪಿನಂಗಳ–ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎ.ರಾಮಣ್ಣ ಅವರೊಂದಿಗೆ ಡಾ.ಎಂ.ಎಸ್. ವಿಜಯಾ ಹರನ್ ಅವರು ನಡೆಸಿದ್ದ ಸಂವಾದ. ಪ್ರಸಿದ್ಧ ಚಿತ್ರ ಕಲಾವಿದ ಪಿ.ಜಿ.ಎಸ್. ಆಚಾರ್ಯ ಅವರೊಂದಿಗೆ ಮಂಜುಳಾ ಅವರು ನಡೆಸಿದ್ದ ಸಂವಾದ, 6.50 ಕೃಷಿರಂಗ–ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ–ಎನ್.ಕೇಶವಮೂರ್ತಿ, ಡಾ. ಮೈಸೂರು ಉಮೇಶ್, ಆರ್. ಲೋಕೇಶ್ವರಿ, ಪರಾಗ–ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, 9.30 ಭಾಷಾನುವಾದಕ್ಕೆ ಗಣಿತೀಯ ಮಾದರಿ–ತೇಜಸ್ವಿನಿ ಹೆಗಡೆ ಅವರೊಂದಿಗೆ ಸಂದರ್ಶನ, ಸಂದರ್ಶಕರು–ದಿವಾಕರ ಹೆಗಡೆ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ– ಎನ್. ಅನಂತನಾರಾಯಣ – ವೀಣಾವಾದನ

■ **ಜೆಎಸ್‌ಎಸ್ ಕಾನೂನು ಕಾಲೇಜು :** ಪದವೀಧರರ ದಿನಾಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಭಾಷಣ : ಸುಪ್ರೀಂ ಕೋರ್ಟ್ ನ್ಯಾಯಾಧೀಶ ಪಂಕಜ್ ಮಿತ್ತಲ್, ಮುಖ್ಯ ಅತಿಥಿಗಳು : ಹೈಕೋರ್ಟ್ ನ್ಯಾಯಾಧೀಶ ಕೆ. ಸೋಮಶೇಖರ್, ಅಧ್ಯಕ್ಷತೆ : ಜೆಎಸ್‌ಎಸ್ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಸ್ಥಳ: ಕಾಲೇಜು ಆವರಣ, ಕುವೆಂಪುನಗರ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್, ಮೈಸೂರು:** ಸ್ವಾಮಿ ಗಹನಾನಂದ ಅವರಿಂದ ಜ್ಞಾನಯೋಗ (ಭಗವದ್ಗೀತೆಯ 4ನೇ ಅಧ್ಯಾಯ) ಕುರಿತು ಪ್ರವಚನ, ಸ್ಥಳ: ಶ್ರೀ ಗುರುದೇವ ದತ್ತ ಸನ್ನಿಧಿ, ಗೋಕುಲಂ 3ನೇ ಹಂತ, ಸಂಜೆ 6.30 ರಿಂದ.

■ **ಚಿನ್ಮಯ ಮಿಷನ್ :** ಸ್ವಾಮಿ ಗಹನಾನಂದ ಅವರಿಂದ ಜ್ಞಾನಯೋಗ (ಭಗವದ್ಗೀತೆಯ 4ನೇ ಅಧ್ಯಾಯ) ಕುರಿತು ಕನ್ನಡದಲ್ಲಿ ಪ್ರವಚನ, ಸ್ಥಳ: ಚಿನ್ಮಯ ಮಿಷನ್, 6ನೇ ಮುಖ್ಯ ರಸ್ತೆ, ಗೋಕುಲಂ 3ನೇ ಹಂತ, ಸಂಜೆ 6.30 ರಿಂದ.

■ **ಶ್ರುತಿಮಂಜರಿ ಪ್ರತಿಷ್ಠಾನ, ರೋಟರಿ ಮೈಸೂರು ಪಶ್ಚಿಮ :** 24ನೇ ಶ್ರಾವಣ ಯುವ ಸಂಗೀತೋತ್ಸವ, ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಈಶ್ವರ್ ಅಯ್ಯರ್ ಅವರಿಂದ ಗಾಯನ, ವಿದುಷಿ ಪೃಥ್ವಿ ಭಾಸ್ಕರ್–ಪಿಟೀಲು, ವಿದ್ವಾನ್ ಪವನ್ ಮಾಧವ್ ಮಾಸೂರ್–ಮೃದಂಗ, ಸ್ಥಳ:ರೋಟರಿ ವೆಸ್ಟ್ ಸಭಾಂಗಣ, ಕಾಮಾಕ್ಷಿ ಆಸ್ಪತ್ರೆ ಎದುರು, ಸರಸ್ವತಿಪುರಂ, ಸಂಜೆ 6ಕ್ಕೆ

■ **ನಟನ ರಂಗಶಾಲೆ :** ವಾರಾಂತ್ಯ ರಂಗ ಪ್ರದರ್ಶನ, ನಟರಾಜ ಪರ್ಫಾಮಿಂಗ್ ಆರ್ಟ್ ಸೆಂಟರ್ ಕಲಾವಿದರಿಂದ ಭಾಸನ ನಾಟಕಾಧಾರಿತ ರೂಪಕ 'ಸ್ವಪ್ನ ವಾಸವದತ್ತ' ನಾಟಕ ಪ್ರದರ್ಶನ, ನಿರ್ದೇಶನ: ಗಣೇಶ್ ಯಾಜಿ, ಸಂಗೀತ: ಅನುಷ್ ಶೆಟ್ಟಿ ಮತ್ತು ಮುನ್ನ, ಸಥಳ: ನಟನ ರಂಗ ಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಪುಷ್ಕರ ಪ್ರಕಾಶನ :** ಸುರೇಶ್ ಕರ್ತಾಳ್ ಸಾರಥ್ಯದಲ್ಲಿ ಲಾ ಫಾರ್ ಆಲ್, ಕನ್ನಡ ಕಾನೂನು ಮಾಸಪತ್ರಿಕೆ ಉದ್ಘಾಟನೆ ಹಾಗೂ ಪತ್ರಿಕೆ ಬಿಡುಗಡೆ ಸಮಾರಂಭ, ಉದ್ಘಾಟನೆ : ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಗುರುಸಿದ್ದಯ್ಯ ಬಸವರಾಜು, ಟಿ.ಬಿ. ಶಿವಶಂಕರೇಗೌಡ, ಪತ್ರಿಕೆ ಬಿಡುಗಡೆ : ಮಾಜಿ ಸಚಿವ ಜೆ.ಸಿ. ಮಾಧುಸ್ವಾಮಿ, ನಿವೃತ್ತ ಪೊಲೀಸ್ ಮಹಾನಿರ್ದೇಶಕ ಶಂಕರ್ ಮಹದೇವ ಬಿದರಿ, ಅಧ್ಯಕ್ಷತೆ: ಕರ್ನಾಟಕ ವಕೀಲರ ಪರಿಷತ್ ಮಾಜಿ ಅಧ್ಯಕ್ಷ ಜಯಕುಮಾರ್ ಎಸ್.ಪಾಟೀಲ್, ಉಪಸ್ಥಿತರು: ಗೌರವಾನ್ವಿತ 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಡಿ. ಪುಟ್ಟಸ್ವಾಮಿ, ಹಿರಿಯ ವಕೀಲ ಕೆ.ಆರ್. ಶಿವಶಂಕರ್, ಪ್ರಧಾನ ಸಂಪಾದಕ ಕೆ.ಬಿ. ಸುರೇಶ್, ಸ್ಥಳ: ಕರ್ನಾಟಕ ಕಲಾಮಂದಿರ, ಸಂಜೆ 6.30ಕ್ಕೆ.

**ಸುತ್ತೂರು ಶ್ರೀ ಕ್ಷೇತ್ರ, ನಂಜನಗೂಡು ತಾ.**

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ:** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ. ಅನಂತರಾಮು ಅವರಿಂದ ಲಕ್ಕಣ್ಣ ದಂಡೇಶ ವಿರಚಿತ ಶಿವತತ್ತ್ವ ಚಿಂತಾಮಣಿ ಕುರಿತು ಪ್ರವಚನ, ವಿದಾನ್ ಕೃ. ರಾಮಚಂದ್ರ ಅವರಿಂದ ವಾಚನ, ಸ್ಥಳ: ಸುತ್ತೂರು ಶ್ರೀ ಕ್ಷೇತ್ರ

# ಮೊದಲ ಟಿ20: ಭಾರತಕ್ಕೆ 2 ರನ್ ಜಯ



ಡಬ್ಲಿನ್, ಆ.18– ಐರ್ಲೆಂಡ್ ವಿರುದ್ಧದ ಮೊದಲ ಟಿ20 ಪಂದ್ಯದಲ್ಲಿ ಭಾರತ (ಡಿಎಲ್‌ಎಸ್) ಡಕ್ವರ್ತ್ ಲೂಯಿಸ್ ನಿಯಮದನ್ವಯ 2 ರನ್‌ಗಳ ಜಯ ದಾಖಲಿಸಿದೆ ಆ ಮೂಲಕ ಟಿ20 ಸರಣಿಯಲ್ಲಿ 1–0 ಅಂತರದ ಮುನ್ನಡೆ ಸಾಧಿಸಿದೆ.

ಇಲ್ಲಿನ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಐರ್ಲೆಂಡ್ ತಂಡದ ಮೊತ್ತ 31 ರನ್ ಆಗುವಷ್ಟರಲ್ಲಿ ಪ್ರಮುಖ ಐದು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಕರ್ಟಿಸ್ ಕ್ಯಾಂಫರ್ 39, ಬ್ಯಾರಿ ಮೆಕಾರ್ತಿ 33 ಎಸೆತಗಳಲ್ಲಿ ತಲಾ 4 ಸಿಕ್ಸರ್, ಬೌಂಡರಿ ಒಳಗೊಂಡ 51, ಮಾರ್ಕ್ ಅಡೇರ್ 16 ರನ್ ಗಳಿಸಿದರು. ಮೋಡ ಮುಚ್ಚಿದ ವಾತಾವರಣದ ಸಂಪೂರ್ಣ ಲಾಭ ಪಡೆದು ಭರ್ಜರಿ ಬೌಲಿಂಗ್ ದಾಳಿ ಸಂಘಟಿಸಿದ ಟೀಮ್ ಇಂಡಿಯಾ, ಐರ್ಲೆಂಡ್ ಅನ್ನು 7 ವಿಕೆಟ್ ನಷ್ಟಕ್ಕೆ 139 ರನ್‌ಗಳಿಗೆ ಕಟ್ಟಿ ಹಾಕುವಲ್ಲಿ ಯಶಸ್ವಿಯಾಯಿತು. ಭಾರತದ ಪರ ಬುಮ್ರಾ, ಪ್ರಸಿದ್ಧ್ ಕೃಷ್ಣ, ರವಿ ಬಿಷ್ಣೋಯಿ ತಲಾ 2, ಅರ್ಷದೀಪ್ ಸಿಂಗ್ 1 ವಿಕೆಟ್ ಪಡೆದರು.

140ರನ್‌ಗಳ ಸಾಧಾರಣ ಗುರಿ ಬೆನ್ನತ್ತಿದ ಭಾರತ 6.2 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 47 ರನ್ ಗಳಿಸಿದ್ದ ವೇಳೆ ಎಡೆ ಬಿಡದೇ ಸುರಿದ ಭಾರೀ ಮಳೆ ಬಿದ್ದ ಕಾಟ ಆಟವನ್ನು ಸ್ಥಗಿತಗೊಳಿಸಲಾಯಿತು. ಬಳಿಕ ಡಿಎಲ್‌ಎಸ್ ನಿಯಮದನ್ವಯ ಭಾರತ ತಂಡಕ್ಕೆ 2 ರನ್ ಜಯ ಘೋಷಿಸಲಾಯಿತು. ತಂಡದ ಪರ ಯಶಸ್ವಿ ಜೈಸ್ವಾಲ್ 24, ಋತುರಾಜ್ ಗಾಯಕ್ವಾಡ್ 19 ರನ್ ಗಳಿಸಿದರು. ಬೂಮ್ರಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.









## ಆ.21ರಂದು 'ಅನಂತಾಶ್ವಥ' ಭಾವಗೀತೆಗಳ ಕಾರ್ಯಕ್ರಮ

ಮೈಸೂರು,ಆ.18(ಎಂಟಿವೈ)– ಹೆಸರಾಂತ ಗಾಯಕರಾದ ದಿ.ಮೈಸೂರು ಅನಂತಸ್ವಾಮಿ, ದಿ.ಸಿ.ಅಶ್ವಥ್ ಹಾಗೂ ದಿ.ರಾಜು ಅನಂತಸ್ವಾಮಿ ಅವರ ಸ್ಮರಣಾರ್ಥ ಸಂಚಲನ ಮೈಸೂರು ಸಂಸ್ಥೆ ವತಿಯಿಂದ ಆ.21ರಂದು ಸಂಜೆ 6 ಗಂಟೆಗೆ ಕಲಾಮಂದಿರದ ಕಿರುರಂಗ ಮಂದಿರದಲ್ಲಿ 'ಅನಂತಾಶ್ವಥ' ಭಾವಗೀತೆಗಳ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಗಾಯಕ ರವಿ ಮೂರೂರು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಚಲನ ಮೈಸೂರು ಸಂಸ್ಥೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೆರವಿನಿಂದ 5 ದಿನಗಳ ಸುಗಮ ಸಂಗೀತ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಾಗಾರದ ಸಮಾರೋಪ ಅಂಗವಾಗಿ 'ಅನಂತಾಶ್ವಥ' ಗೀತ ಗಾಯನ ಕಾರ್ಯಕ್ರಮ ನಡೆಸಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ಹೆಸರಾಂತ ಗಾಯಕರಾದ ಮೈಸೂರು ಅನಂತಸ್ವಾಮಿ, ಸಿ.ಅಶ್ವಥ್ ಹಾಗೂ ರಾಜು ಅನಂತಸ್ವಾಮಿ ಅವರ ನೆನಪಿನಾರ್ಥವಾಗಿ ಭಾವಗೀತೆಗಳ ಕಾರ್ಯಕ್ರಮ ಏರ್ಪಡಿಸಲಾಗಿದೆ. ಈ ಹಿಂದೆ ನಡೆದ ಸುಗಮ ಸಂಗೀತ ತರಬೇತಿ ಶಿಬಿರದಲ್ಲಿ ಮೈಸೂರು ಅನಂತಸ್ವಾಮಿ ಹಾಗೂ ಸಿ.ಅಶ್ವಥ್ ಅವರ ಸ್ವರ ಸಂಯೋಜನೆಯ ಅಪರೂಪದ ಗೀತೆಗಳ ಗಾಯನದ ತರಬೇತಿ ನೀಡಲಾಗಿತ್ತು. ಶಿಬಿರದಲ್ಲಿ ಗಾಯಕನಿಗೆ ಇರಬೇಕಾದ ಗುಣಗಳ ಬಗ್ಗೆ ತಿಳಿಸಲಾಗಿದೆ. ಕವಿತೆಗಳ ಭಾವ, ಸಾಹಿತ್ಯದ ಪ್ರಾಮುಖ್ಯತೆ, ಪದಗಳ ಉಚ್ಚಾರ, ಯಾವ ಶಬ್ದಕ್ಕೆ ಎಷ್ಟು ಒತ್ತು ನೀಡುವುದೂ ಸೇರಿದಂತೆ ಇನ್ನಿತರ ಮಹತ್ತರ ವಿಷಯಗಳ ಬಗ್ಗೆ ಕಲಿಸಲಾಗಿದೆ ಎಂದು ತಿಳಿಸಿದರು.

ಅನಂತಾಶ್ವಥ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕವಿ ಡಾ.ಜಯಪ್ಪ ಹೊನ್ನಾಳಿ, ಗಾಯಕಿ ಶುಭ ರಾಘವೇಂದ್ರ, ರಂಗಾಯಣದ ಉಪನಿರ್ದೇಶಕಿ ನಿರ್ಮಲಾ ಮಠಪತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಸಂಚಲನ ಮೈಸೂರು ಸಂಸ್ಥೆಯ ಅಧ್ಯಕ್ಷ ದೀಪಕ್ ಮೈಸೂರು ಸೇರಿದಂತೆ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಚಲನ ಮೈಸೂರು ಸಂಸ್ಥೆಯ ದೀಪಕ್ ಮೈಸೂರು, ಸುಬ್ರಹ್ಮಣ್ಯ, ಮಂಜುನಾಥ್ ಇದ್ದರು.

## ಅವಧಿ ವಿಸ್ತರಣೆ

ಮೈಸೂರು, ಆ.18– ಮೈಸೂರು ಜಿಲ್ಲೆ ಜವಾಹರ್ ನವೋದಯ ವಿಶ್ವವಿದ್ಯಾಲಕ್ಕೆ 2023–24ನೇ ಸಾಲಿನ 6ನೇ ತರಗತಿ ಆಯ್ಕೆ ಬಯಸುವ ಅಭ್ಯರ್ಥಿಗಳ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ದಿನಾಂಕವನ್ನು ಆ.25 ರವರೆಗೆ ವಿಸ್ತರಿಸಿದ್ದು, ಆಸಕ್ತ ಅಭ್ಯರ್ಥಿಗಳು www.navodaya.gov.in ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಜವಾಹರ್ ನವೋದಯ ವಿದ್ಯಾಲಯದ ದೂ.ಸಂ:0821–297004 ಅನ್ನು ಸಂಪರ್ಕಿಸುವಂತೆ ಜವಾಹರ್ ನವೋದಯ ವಿದ್ಯಾಲಯದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




## ಕಾವೇರಿ ನೀರು ಹರಿಸುವಂತೆ ಕರ್ನಾಟಕಕ್ಕೆ ನಿರ್ದೇಶನ ಕೋರಿ ಸುಪ್ರೀಂ ಕೋರ್ಟ್‌ಗೆ ತಮಿಳುನಾಡು ಮನವಿ

**ಸೋಮವಾರ ವಿಚಾರಣೆ**

ನವದೆಹಲಿ, ಆ.18– ಬೆಳೆದು ನಿಂತಿರುವ ಬೆಳೆಗಳ ರಕ್ಷಣೆಗಾಗಿ ನಿತ್ಯ 24,000 ಕ್ಯೂಸೆಕ್ ನೀರು ಹರಿಸುವಂತೆ ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ತಮಿಳುನಾಡು ಸರ್ಕಾರ, ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಮನವಿಯನ್ನು ಸೋಮವಾರಕ್ಕೆ ಪಟ್ಟಿ ಮಾಡುವಂತೆ ಸರ್ವೋಚ್ಚ ನ್ಯಾಯಾಲಯ ಶುಕ್ರವಾರ ಸೂಚಿಸಿದೆ.

ಇಂದು ಸಿಜೆಐ ಡಿವೈ ಚಂದ್ರಚೂಡ್ ನೇತೃತ್ವದ ಪೀಠದ ಮುಂದೆ ಹಿರಿಯ ವಕೀಲ ಮುಕುಲ್ ರೋಹಟಗಿ ಅವರು ಮನವಿಯನ್ನು ಪ್ರಸ್ತಾಪಿಸಿದರು. ಕಾವೇರಿ ಜಲವಿವಾದದ ವಿಷಯದಲ್ಲಿ ನ್ಯಾಯಾಲಯವು ತನ್ನ ಅರ್ಜಿಯನ್ನು ಪಟ್ಟಿ ಮಾಡುವಂತೆ ಒತ್ತಾಯಿಸಿದ ರೋಹಟಗಿ, ಬೆಳೆದು ನಿಂತಿರುವ ಬೆಳೆಗಳಿಗೆ ತುರ್ತಾಗಿ ನೀರಿನ ಅಗತ್ಯವಿದೆ ಎಂದು ಹೇಳಿದರು.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ(ಸಿಡಬ್ಲ್ಯುಎಂಎ) ಆಗಸ್ಟ್ 11, 2023 ರಂದು ಕರ್ನಾಟಕದ ಕೆಆರ್‌ಎಸ್‌ನಿಂದ ಮುಂದಿನ 15 ದಿನಗಳವರೆಗೆ ಬಿಡುಗಡೆ ಮಾಡಬೇಕಿದ್ದ ನೀರಿನ ಪ್ರಮಾಣವನ್ನು 15000 ಕ್ಯೂಸೆಕ್‌ನಿಂದ 10000(ದಿನಕ್ಕೆ 0.864 ಟಿಎಂಸಿ) ಕ್ಯೂಸೆಕ್‌ಗೆ ಇಳಿಸಿದೆ ಎಂದು ಮನವಿಯಲ್ಲಿ ತಮಿಳುನಾಡು ವಾದಿಸಿದೆ.

ಬಿಳಿಗುಂಡ್ಲು ಮಾಪನ ಕೇಂದ್ರದಲ್ಲಿ ದಾಖಲಾಗಿರುವಂತೆ ಆಗಸ್ಟ್ 11ರಿಂದ 14ರವರೆಗೆ ಕ್ರಮವಾಗಿ 6,148, 4,852, 4,453 ಮತ್ತು 4,000 ಕ್ಯುಸೆಕ್ ನೀರು ಹರಿಸಲಾಗಿದೆ ಎಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ ತಮಿಳುನಾಡು ಉಲ್ಲೇಖಿಸಿದೆ.



## ಆಕ್ರೋಶಕ್ಕೆ ಹೆದರಿದ ಸರ್ಕಾರ: ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಅನುದಾನ ತಡೆ ಆದೇಶ ವಾಪಸ್!

ಬೆಂಗಳೂರು, ಆ.18– ಕರ್ನಾಟಕದ ದೇವಸ್ಥಾನಗಳ ಜೀರ್ಣೋದ್ಧಾರ ಅನುದಾನ ತಡೆ ಹಿಡಿದು ಆದೇಶ ಹೊರಡಿಸಿರುವುದು ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆಯೇ ಮುಜರಾಯಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ ಎಚ್ಚೆತ್ತುಕೊಂಡಿದ್ದು, ಕೂಡಲೇ ಅನುದಾನಕ್ಕೆ ತಡೆ ನೀಡಿದ್ದ ಆದೇಶ ಹಿಂಪಡೆಯಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಅನುದಾನ ತಡೆ ಹಿಡಿಯುವಂತೆ ಧಾರ್ಮಿಕ ದತ್ತಿ ಇಲಾಖೆ ಆದೇಶಿಸಿದೆ, 2022–23ನೇ ಸಾಲಿನಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ, ದೇವಸ್ಥಾನ ಜೀರ್ಣೋದ್ಧಾರ ಕಾಮಗಾರಿ ಇನ್ನೂ ಪ್ರಾರಂಭ ಆಗದಿದ್ದರೆ ಹಣ ಬಿಡುಗಡೆ ಮಾಡಬಾರದು, ಶೇ 50 ರಷ್ಟು ಹಣ ಬಿಡುಗಡೆಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದರೆ ತಕ್ಷಣ ಅನುದಾನ ತಡೆ ಹಿಡಿಯಬೇಕು, ಅನುದಾನದ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಕೆಯಾಗಿದ್ದರೆ ಆಡಳಿತಾತ್ಮಕ ಮಂಜೂರಾತಿಯನ್ನು ತಡೆಹಿಡಿಯಬೇಕು ಎನ್ನುವ ಮೂರು ವಿಷಯಗಳನ್ನು ಪ್ರಸ್ತಾಪಿಸಿ ದೇವಸ್ಥಾನಗಳ ಜೀರ್ಣೋದ್ಧಾರ ಅನುದಾನ ಬಿಡುಗಡೆ ತಡೆಹಿಡಿಯಬೇಕು ಎಂದು ಧಾರ್ಮಿಕ ದತ್ತಿ ಇಲಾಖೆ ಆದೇಶ ನೀಡಿತ್ತು.

ಬೆಂಗಳೂರಿನಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಮುಜರಾಯಿ ಖಾತೆ ಸಚಿವ ರಾಮಲಿಂಗಾರೆಡ್ಡಿ, ದೇಗುಲಗಳ ಅನುದಾನಕ್ಕೆ ತಡೆ ನೀಡಿದ್ದ ಆದೇಶ ವಾಪಸ್ ಪಡೆಯುವಂತೆ ಆಯುಕ್ತರಿಗೆ ಸೂಚನೆ ನೀಡಿದ್ದೇನೆ. ಮುಜರಾಯಿ ಇಲಾಖೆ ಆಯುಕ್ತರು ಕನ್‌ಫ್ಯೂಸ್ ಆಗಿದ್ದಾರೆ ಅಷ್ಟೇ.

ಇಲಾಖೆಯಲ್ಲಿ ಅಕ್ರಮ ನಡೆದಿದೆ ಎಂಬ ಯಾವ ಅನುಮಾನವೂ ಇಲ್ಲ. ಯಾವ ದೇವಸ್ಥಾನದ ಕೆಲಸವನ್ನೂ ನಿಲ್ಲಿಸುವುದಕ್ಕೆ ಹೋಗುವುದಿಲ್ಲ. ಸ್ಟೇಟಸ್ ರಿಪೋರ್ಟ್ ಕೇಳಿದ್ದಕ್ಕೆ ಕನ್‌ಫ್ಯೂಸ್ ಮಾಡಿಕೊಂಡಿಕೊಂಡು ನಮ್ಮ ಇಲಾಖೆಯ ಆಯುಕ್ತರು ತಪ್ಪಾಗಿ ಅರ್ಥ ಮಾಡಿಕೊಂಡಿದ್ದಾರೆ ಎಂದು ಸ್ಪಷ್ಟಪಡಿಸಿದರು.

## ಹಾಸನದಲ್ಲಿ ಆನೆ ದಾಳಿಗೆ ಮಹಿಳೆ ಬಲಿ

ಹಾಸನ, ಆ.18– ಕಾಡಾನೆ ದಾಳಿಗೆ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ 37 ವರ್ಷದ ಮಹಿಳೆಯೊಬ್ಬರು ಸಾವನ್ನಪ್ಪಿರುವ ಘಟನೆ ಶುಕ್ರವಾರ ನಡೆದಿದೆ. ಮೃತ ಮಹಿಳೆಯನ್ನು ಕವಿತಾ ಎಂದು ಗುರುತಿಸಲಾಗಿದೆ. ತನ್ನ ಪೋಷಕರನ್ನು ಭೇಟಿಯಾಗುವ ಸಲುವಾಗಿ ಮಹಿಳೆ ವಡೂರು ಗ್ರಾಮಕ್ಕೆ ಬಂದಿದ್ದರು. ಈ ಸಂದರ್ಭದಲ್ಲಿ ಮನೆ ಹಿಂದೆ ಇದ್ದ ಜಮೀನಿಗೆ ಹೋಗಿದ್ದಾಗ ಆನೆ ದಾಳಿ ಮಾಡಿದೆ. ತಕ್ಷಣ ಕುಟುಂಬಸ್ಥರು ಆಕೆಯನ್ನು ಹಾಸನದ ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದಾರೆ. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮಹಿಳೆ ಸಾವನ್ನಪ್ಪಿದ್ದಾಳೆ. ಈ ನಡುವೆ ಸುದ್ದಿ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ದೌಡಾಯಿಸಿದ ಅರಣ್ಯ ಇಲಾಖೆಯ ಅಧಿಕಾರಿಗಳು, ಕಾಡಾನೆಯನ್ನು ಪತ್ತೆ ಮಾಡಿ ಸ್ಥಳಾಂತರಿಸಲು ಕ್ರಮಗಳ ಕೈಗೊಂಡಿದ್ದಾರೆ. ಇದೇ ವೇಳೆ ಆನೆಗಳು ಪದೇ ಪದೆ ದಾಳಿ ಮಾಡುತ್ತಿರುವ ಬಗ್ಗೆ ಗ್ರಾಮದ ಜನರು ಆತಂಕ ವ್ಯಕ್ತಪಡಿಸಿದ್ದಾರೆ.



## ನಾಳೆ ವಿದ್ಯುತ್ ವ್ಯತ್ಯಯ

ಮೈಸೂರು,ಆ.18– ಆಗಸ್ಟ್ 20 ರಂದು ಬೆಳಗ್ಗೆ 10 ರಿಂದ ಸಂಜೆ 5:30 ರವರೆಗೆ ಕಾಮಗಾರಿ ನಿಮಿತ್ತ ರಾಜೀವನಗರ 2ನೇ ಹಂತ, ಕ್ರಿಶ್ಚಿಯನ್ ಕಾಲೋನಿ, ಯಾಸಿನ್ ಮಸ್ಜಿದ್, ಎಸ್.ಬಡಾವಣೆ, ಸೂರ್ಯನಾರಾಯಣ ದೇವಸ್ಥಾನ ರಸ್ತೆ, ಆಲ್ ಬಜಾರ್ ಮಸ್ಜಿದ್ ವೃತ್ತ, ಅಂಬೇಡ್ಕರ್ ಭವನ ರಸ್ತೆ, ಕ್ಯೂಬಾ ಮಸ್ಜಿದ್ ವೃತ್ತ, ನಾರಾಯಣ ಹೃದಯಾಲಯ ಆಸ್ಪತ್ರೆ, ಕಾಮನಕೆರೆಹುಂಡಿ, ಕೆ.ಹೆಚ್.ಬಿ. ಬಡಾವಣೆ, RTO-55, ಆಸೀನಾ ಬಡಾವಣೆ, ರಾಜೀವನಗರ 3ನೇ ಹಂತ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.




## 2024ರ ಲೋಕಸಭಾ ಚುನಾವಣೆಯಲ್ಲಿ ಅಮೇಥಿಯಿಂದ ರಾಹುಲ್ ಗಾಂಧಿ ಸ್ಪರ್ಧೆ



ಲಖನೌ, ಆ.18– ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಅಮೇಥಿಯಿಂದ ಕಾಂಗ್ರೆಸ್ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಅವರು ಸ್ಪರ್ಧಿಸಲಿದ್ದಾರೆ ಎಂದು ಉತ್ತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಅಜಯ್ ರೈ ಶುಕ್ರವಾರ ಹೇಳಿದ್ದಾರೆ.

ರಾಹುಲ್ ಗಾಂಧಿ ಅವರು ಖಂಡಿತವಾಗಿಯೂ ಮತ್ತೆ ಅಮೇಥಿಯಿಂದ ಲೋಕಸಭೆ ಚುನಾವಣೆಗೆ ಸ್ಪರ್ಧಿಸುತ್ತಾರೆ ಎಂದು ಇತ್ತೀಚೆಗೆ ರಾಜ್ಯ ಘಟಕದ ಅಧ್ಯಕ್ಷರಾಗಿ ನೇಮಕಗೊಂಡ ರೈ ವಾರಣಾಸಿಯಲ್ಲಿ ಸುದ್ದಿಗಾರರಿಗೆ ತಿಳಿಸಿದ್ದಾರೆ. 2004 ರಿಂದ ಅಮೇಥಿ ಸಂಸದರಾಗಿದ್ದ ರಾಹುಲ್ ಗಾಂಧಿ ಅವರು 2019ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯ ಸ್ಮೃತಿ ಇರಾನಿ ವಿರುದ್ಧ ಸೋಲು ಅನುಭವಿಸಿದ್ದರು.

ಇಂದು ದೆಹಲಿಯಿಂದ ಆಗಮಿಸುತ್ತಿದ್ದಂತೆ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ರೈ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಬಯಸಿದರೆ ವಾರಣಾಸಿ ಅಥವಾ ರಾಜ್ಯದ ಇನ್ನಾವುದೇ ಕ್ಷೇತ್ರದಿಂದ ಸ್ಪರ್ಧಿಸಬಹುದು ಎಂದು ಹೇಳಿದರು.

ಪ್ರಿಯಾಂಕಾ ಗಾಂಧಿ ಅವರಿಗೆ ವಾರಣಾಸಿಯಿಂದ ಪ್ರಧಾನಿ ಮೋದಿ ವಿರುದ್ಧ ಸ್ಪರ್ಧಿಸುವ ಹಂಬಲವಿದ್ದರೆ, ಪ್ರತಿಯೊಬ್ಬ ಕಾಂಗ್ರೆಸ್ ಕಾರ್ಯಕರ್ತನೂ ಅವರಿಗಾಗಿ ಮನಃಪೂರ್ವಕವಾಗಿ ಕೆಲಸ ಮಾಡುತ್ತಾರೆ ಎಂದು ಹೇಳಿದರು.

2014 ಮತ್ತು 2019ರ ಲೋಕಸಭೆ ಚುನಾವಣೆಯಲ್ಲಿ ವಾರಣಾಸಿಯಿಂದ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಸ್ಪರ್ಧಿಸಿದ್ದ ಅಜಯ್ ರೈ ಅವರನ್ನು ಯುಪಿ ಕಾಂಗ್ರೆಸ್ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿದೆ.

## ನಕ್ಕರೆ ಅದೇ ಸ್ವರ್ಗ

ಹನುಮ : ಯಾಕೋ ಬಸ್ಯಾ ಬಹಳ ದಿನ ಆಯಿತು ಸ್ಕೂಲ್‌ಗೆ ಬರ್ತಿಲ್ಲ... ಏನ್ ಪ್ರಾಬ್ಲಮ್?

ಬಸ್ಯಾ : ಆಗೇನಿಲ್ಲ! ನಮ್ಮಪ್ಪ ಹೇಳ್ಯನಾ ನಮ್ಗ ಎಲ್ಲಿ ಮರ್ಯಾದೆ ಸಿಗಲ್ವೊ ಅಂತಲ್ಲಿ ತಲೆ ಎತ್ತಿ ಸಹ ನೋಡಬಾರ್ದಂತ. ಅದಕ್ಕ ಸ್ಕೂಲ್‌ಗೆ ಬರ್ತಿಲ್ಲ.

ಮೈಸೂರು ಮಿತ್ರ

ಶನಿವಾರ, 19 ಆಗಸ್ಟ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

### ಅಮೃತವಾಹಿನಿ..........

ಸೋಲನ್ನು ಕಂಡು ಅಂಜುವವನಿಂದ ಗೆಲುವು ದೂರ ಸರಿಯುತ್ತದೆ.

–ಅಯಾರೆಸ್ಟನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಒಲ್ಲದ ಮನಸ್ಸಿನಲ್ಲಿ ಇಲ್ಲದ್ದು ಹುಟ್ಟುತ್ತದೆ

## ನಿಮ್ಮ ಪತ್ರಗಳು

### ಆನೆಗಳ ಸಂತತಿ ಒಳ್ಳೆಯ ಬೆಳವಣಿಗೆ

ಮಾನ್ಯರೆ,

ಹುಲಿಗಳ ಸಂಖ್ಯೆಯಲ್ಲಿ ದೇಶದಲ್ಲಿ ಎರಡನೆಯ ಸ್ಥಾನದಲ್ಲಿರುವ ನಮ್ಮ ರಾಜ್ಯ, ಆನೆಗಳ ಸಂತತಿಯಲ್ಲಿ ಕೂಡ ಮೊದಲ ಸ್ಥಾನ ಗಳಿಸಿರುವುದು ಸಂತೋಷದ ವಿಷಯವಾಗಿದೆ. ಸರ್ಕಾರಿ ಮೂಲಗಳ ಪ್ರಕಾರ ಪ್ರಸ್ತುತ ರಾಜ್ಯದಲ್ಲಿ 6395 ಆನೆಗಳಿದ್ದು, ಕಳೆದ ಆರು ವರ್ಷಗಳ ಅವಧಿಯಲ್ಲಿ ಇವುಗಳ ಸಂಖ್ಯೆ 346 ರಷ್ಟು ಹೆಚ್ಚಾಗಿದೆ. ಬಂಡೀಪುರ ಅಭಯಾರಣ್ಯದಲ್ಲಿ ರಾಜ್ಯದಲ್ಲೇ ಅತಿ ಹೆಚ್ಚು ಎಂದು ಹೇಳಬಹುದಾದ 1116 ರಷ್ಟು ಆನೆಗಳು ಇತ್ತೀಚಿನ ಗಣತಿ ವೇಳೆ ಪತ್ತೆಯಾಗಿದೆ ಎಂದು ರಾಜ್ಯ ಅರಣ್ಯ ಇಲಾಖೆ ತಿಳಿಸಿದೆ.

ಇದೊಂದು ಆಶಾದಾಯಕ ಬೆಳವಣಿಗೆಯಾಗಿದೆ. ಹೆಚ್ಚುತ್ತಿರುವ ನಗರೀಕರಣ, ಅರಣ್ಯ ನಾಶ ಮುಂತಾದ ಕಾರಣಗಳಿಂದ ವನ್ಯ ಜೀವಿಗಳ ಸಂಖ್ಯೆ ಈ ಹಿಂದೆ ಕಡಿಮೆಯಾಗುತ್ತಾ ಬಂದಿತ್ತು. ದಂತಗಳಿಗಾಗಿ ಆನೆಗಳನ್ನು ಹತ್ಯೆ ಮಾಡುವ ಗುಂಪು ಅರಣ್ಯ ಪ್ರದೇಶಗಳಲ್ಲಿ ಈಗಲೂ ಸಹ ಸಕ್ರಿಯವಾಗಿದ್ದರೂ ಸಹ ಆನೆಗಳ ಸಂಖ್ಯೆಗೆ ದಕ್ಕೆಯಾಗಿಲ್ಲ. ನಮ್ಮ ಪುರಾಣೇತಿಹಾಸಗಳಲ್ಲಿ ಅನೆಗೆ ಅಗ್ರ ಸ್ಥಾನ ನೀಡಲಾಗಿದೆ. ಆನೆಯ ಮುಖವನ್ನು ಹೊತ್ತ ವಿಘ್ನಹಾರಕ, ವರಸಿದ್ಧಿ ವಿನಾಯಕ ವಿಶ್ವವಂದ್ಯನಾಗಿದ್ದಾನೆ. ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಆನೆಗಳದ್ದೇ ಪಾರುಪತ್ಯ ದ್ರೋಣ, ಅರ್ಜುನ, ಅಭಿಮನ್ಯು ಮುಂತಾದ ಆನೆಗಳ ಹೆಸರು ಭಾರತೀಯ ಸಂಸ್ಕೃತಿ ಮತ್ತು ಇತಿಹಾಸಕ್ಕೆ ಪೂರಕವಾಗಿವೆ. ಅಷ್ಟೇ ಏಕೆ ಜಗದ್ ಜನನಿಯಾದ ತಾಯಿ ಚಾಮುಂಡೇಶ್ವರಿಯನ್ನು ಚಿನ್ನದ ಅಂಬಾರಿಯಲ್ಲಿ ಹೊತ್ತು ಸಾಗುವುದು ನಮ್ಮ ಆನೆಗಳೇ. ಅತ್ಯಂತ ಮನುಷ್ಯ ಸ್ನೇಹಿಯಾದ ಆನೆಗಳು ಅತ್ಯಂತ ಬಲಶಾಲಿಗಳಾಗಿವೆ. ಮರಿಯಾನೆಗಳಂತೂ ನೋಡಲು ನಯನ ಮನೋಹರ ವಾಗಿರುತ್ತದೆ. ಸರ್ಕಸ್‌ಗಳಲ್ಲಿ ಆನೆಗಳ ಸಾಹಸ ಪ್ರದರ್ಶನ, ಚಿನ್ನಾಟಗಳು ಮಕ್ಕಳಿಗೆ ಬಲು ಪ್ರಿಯ. ಹಲವಾರು ಪವಿತ್ರ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಹಾಗೂ ಮಠಮಾನ್ಯಗಳಲ್ಲಿ ಅನೆಗಳು ಇರುತ್ತದೆ. ಇಂತಹ ಶ್ರೇಷ್ಠವಾದ ಪ್ರಾಣಿಯಾದ. ಆನೆಗಳ ಸಂಖ್ಯೆ ಮತ್ತಷ್ಟು ಮಗದಷ್ಟು ಹೆಚ್ಚಲಿ ಎಂದು ಈ ಸಂದರ್ಭದಲ್ಲಿ ಆಶಿಸೋಣ

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

### ತಂಗುದಾಣಕ್ಕೆ ಬೆಳಕಿನ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ನಾನು ಓರ್ವ ಕಾಲೇಜು ವಿದ್ಯಾರ್ಥಿನಿ. ಪ್ರತಿದಿನ ಜೆ.ಪಿ. ನಗರದಿಂದ ಪಡುವಾರಹಳ್ಳಿಯ ಮಹಾರಾಣಿ ಕಾಲೇಜಿಗೆ ತೆರಳುತ್ತೇನೆ. ಕಾಲೇಜು ಮುಗಿದ ನಂತರ ಬಸ್ ಹತ್ತಲು ಯಾದವಗಿರಿಯ ಆಕಾಶವಾಣಿ ಹತ್ತಿರ ಬರಬೇಕು. ಯಾದವಗಿರಿ ಅಂಚೆ ಕಚೇರಿಯ ಎಡಭಾಗವಿರುವ ತಂಗುದಾಣ ಮತ್ತು ಎದುರಿಗಿರುವ ತಂಗುದಾಣದಲ್ಲಿ ಬೆಳಕಿನ ಸೌಲಭ್ಯವಿರುವುದಿಲ್ಲ. ಹೀಗಾಗಿ ನನ್ನಂತಹ ಅನೇಕ ವಿದ್ಯಾರ್ಥಿನಿಯರು, ಮಹಿಳಾ ಪ್ರಯಾಣಿಕರು ಕತ್ತಲಲ್ಲೇ ಬಸ್ಸಿಗಾಗಿ ಕಾಯುವಂತಾಗಿದೆ. ಕ್ಷೇತ್ರದ ಶಾಸಕರು ಇತ್ತ ಗಮನಹರಿಸಿ ಈ ಎರಡೂ ತಂಗುದಾಣಗಳಿಗೆ ಬೆಳಕಿನ ಸೌಲಭ್ಯ ಕಲ್ಪಿಸಬೇಕಾಗಿ ಮನವಿ.

–ಎಂ. ಅನುಷಾ, ಜೆ.ಪಿ.ನಗರ, ಮೈಸೂರು.

### ಎಂದಿನಂತೆ ರೂ.ನಂ.80 ಬಸ್ ಸಂಚರಿಸಲಿ

ಮಾನ್ಯರೆ,

ಮೈಸೂರು ನಗರ ಸಾರಿಗೆ ಬಸ್ ರೂಟ್ ನಂ.80, ಮೈಸೂರು ನಗರದ ವಿವೇಕಾನಂದ ಸರ್ಕಲ್‌ನಿಂದ ಕುವೆಂಪುನಗರದ ಹೋರಿ ಸುಬ್ಬೇಗೌಡ ಬಸ್ ನಿಲ್ದಾಣ, ಅಪೋಲೊ ಆಸ್ಪತ್ರೆಯ ಮುಖಾಂತರ ನಗರ ಬಸ್ ನಿಲ್ದಾಣಕ್ಕೆ ಬಂದು ಅಲ್ಲಿಂದ ಮೃಗಾಲಯ ಮುಖಾಂತರ ಸಿದ್ದಾರ್ಥ ಲೇ–ಔಟ್, ಡಾ.ರಾಜ್ ಕುಮಾರ್ ರಸ್ತೆ ಮೂಲಕ ಸಾತಗಳ್ಳಿ ಬಸ್ ಡಿಪೋ ಸೇರುತ್ತದೆ.

ಈ ರೂಟ್‌ನಲ್ಲಿ (ಬಸ್ ನಂ.80) ಪ್ರತಿ ಗಂಟೆಗೊಂದು ಬಸ್ ಬರುತ್ತಿತ್ತು. ಆದರೆ ಇತ್ತೀಚೆಗೆ ಬೆಳಗ್ಗೆ ಹತ್ತು ಗಂಟೆಯ ನಂತರ ಮತ್ತು ಸಂಜೆ ಐದು ಗಂಟೆ ನಂತರ ಆಗೊಮ್ಮೆ–ಈಗೊಮ್ಮೆ ಬರುತ್ತವೆ. ಈ ರೂಟ್‌ನಲ್ಲಿ ಪ್ರತಿದಿನ ಸಾವಿರಾರು ಜನರು ಮತ್ತು ವಿದ್ಯಾರ್ಥಿಗಳು ಓಡಾಡುವುದರಿಂದ ಹಿಂದೆ ಇದ್ದಂತೆ ಪ್ರತಿ ಗಂಟೆಗೆ ರೂಟ್ ನಂ 80 ಬಸ್ ಬರುವ ವ್ಯವಸ್ಥೆ ಮಾಡಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

### ಶೇ.50ರಂತೆ ಆಸನ ಮೀಸಲಿಡಲು ಮನವಿ

ಮಾನ್ಯರೆ,

'ಶಕ್ತಿ' ಯೋಜನೆಯಿಂದ ಎಲ್ಲಾ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಮಹಿಳಾ ಪ್ರಯಾಣಿಕರಿಂದ ಕಿಕ್ಕಿರಿದು ತುಂಬಿರುತ್ತಾರೆ. ಇದರಿಂದ ಹಿರಿಯ ನಾಗರಿಕರಿಗೆ, ವಿಕಲ ಚೇತನರಿಗೆ ಕುಳಿತುಕೊಳ್ಳಲು ಆಸನವೇ ಖಾಲಿ ಇಲ್ಲದಂತಾಗಿದೆ. ಹಣ ಕೊಟ್ಟು ಪ್ರಯಾಣಿಸುವವರು ನಿಂತುಕೊಳ್ಳಬೇಕು. ಉಚಿತವಾಗಿ ಪ್ರಯಾಣಿಸುವವರು ಆರಾಮವಾಗಿ ಕುಳಿತಿರುತ್ತಾರೆ. ಸಂಬಂಧಪಟ್ಟ ಅಧಿಕಾರಿಗಳು ಪ್ರತಿ ವಾಹನದಲ್ಲೂ ಶೇ.50ರಷ್ಟು ಆಸನಗಳನ್ನು ಮೀಸಲಿಡಬೇಕೆಂದು ಮನವಿ.

–ಜಿ.ಪಿ. ರಾಜೇಶ್, ವಿವಿ ಮೊಹಲ್ಲಾ, ಮೈಸೂರು.

### ಸಮರ್ಥನೆ!

ಮಾನ್ಯರೆ,

'ಇಸ್ರೋ'ದವರು ಮಾಡುವ ಪೂಜೆ ಪುನಸ್ಕಾರಗಳನ್ನು ಸಮರ್ಥಿಸಿ 'ಮಿತ್ರ'ನ ಈಚಿನ ಸಂಚಿಕೆಯೊಂದರಲ್ಲಿ ಜೆ.ಬಿ.ರಂಗಸ್ವಾಮಿ ಅವರು ಬರೆದ ಲೇಖನದ ಬಗೆಗೆ ಪ್ರತಿಕ್ರಿಯೆ.

ಇಂಥ ಸಮರ್ಥನೆ ಯಾವ ರೀತಿಯಲ್ಲೂ ಊರ್ಜಿತವಾಗದು. ಒಂದು ಕಡೆ ವೈಜ್ಞಾನಿಕ ದೃಷ್ಟಿಯನ್ನು ಬೆಳೆಸಿಕೊಳ್ಳಬೇಕೆಂಬ ಕರೆ. ಇನ್ನೊಂದು ಕಡೆ ಮೌಢ್ಯಾಚರಣೆಗಳು ಮತ್ತು ಅವುಗಳ ಸಮರ್ಥನೆ ಇಂಥ ದ್ವಂದ್ವಗಳಿಂದಲೇ ದೇಶಕ್ಕೆ ಹಿನ್ನಡೆ!

'ತರಗತಿಗಳಲ್ಲಿ ವಿಜ್ಞಾನ ಬೋಧಿಸುವ, ಮನೆಗೆ ಹೋಗಿ ರಾಹುಕಾಲ, ಗುಳಿಕಕಾಲ ನೋಡುವ ಪ್ರಾಧ್ಯಾಪಕರು ವಿಜ್ಞಾನವನ್ನು ಹೊತ್ತ ಕತ್ತೆಗಳಷ್ಟೆ!' ಎಂದು ಕಟುವಾಗಿ ಟೀಕಿಸುವ ಕುವೆಂಪು ಈಗ ಬದುಕಿದ್ದರೆ ಏನು ಹೇಳುತ್ತಿದ್ದರು? (ಅಥವಾ ನೆಹ್ರೂ ಬದುಕಿದ್ದರೆ ಏನನ್ನುತ್ತಿದ್ದರು!) ಅವರ 'ನಿರಂಕುಶಮತಿಗಳಾಗಿ ಆಗಿರಲಿ, 'ಸೃಷ್ಟಿನಮನ' ಪುಸ್ತಕದಲ್ಲಿರುವ 'ನೆಹ್ರೂ ಮತ್ತು ವೈಜ್ಞಾನಿಕ ದೃಷ್ಟಿ' ಎಂಬ ಲೇಖನ ತೀವ್ರಗಮನಾರ್ಹವಾಗಿದೆ.

ನೆಹ್ರೂ ಅವರನ್ನು 'ಆಧ್ಯಾತ್ಮ ವಿಜ್ಞಾನಗಳ ಸರ್ವಶ್ರೇಷ್ಠ ನಿಧಿ ಮತ್ತು ಪ್ರತಿನಿಧಿ' ಎಂದು ಪರಿಗಣಿಸುವ ಕುವೆಂಪು ಅವರ ಬಗೆಗೆ ಹೇಳುವ ಮಾತುಗಳು ನಮ್ಮಲ್ಲಿರುವ ಮೌಢ್ಯ ಪ್ರಕಾರಗಳನ್ನು ಸ್ವಾರಸ್ಯ ಪೂರ್ಣವಾಗಿ ವರ್ಣಿಸುತ್ತವೆ. 'ಜನಿವಾರ ಹಾಕಿಕೊಳ್ಳಲಿಲ್ಲ. ವಿಭೂತಿ ಬಳಿದುಕೊಳ್ಳಲಿಲ್ಲ. ದೇವಾಲಯಗಳಿಗೆ ಆರಾಧನೆಗಾಗಿ ಹೋಗಲಿಲ್ಲ, ತೀರ್ಥಗಳಿಗೆ ಯಾತ್ರೆ ಹೋಗಿ ಮೀಯಲಿಲ್ಲ... ರಾಹುಕಾಲ ಗುಳಿಕಕಾಲ ನೋಡಲಿಲ್ಲ. ಪಂಚಾಂಗ ತೆರೆಯಲಿಲ್ಲ, ಜೋತಿಷ್ಯ ನಂಬಲಿಲ್ಲ...' ಪೂಜಾರಿಗಳು ನಡೆಯಬೇಕಾದ್ದು ಮನ, ಮನೆಗಳೊಳಗೆ, ಹೊರಗಲ್ಲ!

– ಸಿಪಿಕೆ, ಹಿರಿಯ ಸಾಹಿತಿ, ಮೈಸೂರು.

## ದಿಕ್ಕುದೆಸೆ



ಕಾರ್ಕಳ ಆನಂದ ಭಟ್
ಮೊ : 7676554198
ಫ್ಲಾಟ್ ನಂ.204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, Opp. H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲ್ಲೆ

# ಪಶ್ಚಿಮ ಬಂಗಾಳದಲ್ಲಿ ಚುನಾವಣಾ ರಕ್ತ ಚರಿತೆ!



> 1977ರಲ್ಲಿ ಕಮ್ಯೂನಿಸ್ಟರು ಮೊದಲ ಬಾರಿ ಅಧಿಕಾರಕ್ಕೆ ಬಂದ ನಂತರ ವಿರೋಧಿಗಳ ಹತ್ಯೆ ನಿರಂತರ ಮುಂದುವರೆಯಿತು. 1982 ರಲ್ಲಿ ಕೊಲ್ಕತ್ತಾದಲ್ಲಿ ಆನಂದಮಾರ್ಗ ಸಂಘಟನೆಯ ಓರ್ವ ಸನ್ಯಾಸಿನಿ ಸಹಿತ 17 ಅನುಯಾಯಿಗಳು ಹತ್ಯೆಗೀಡಾದರು. ಈ ಅಮಾನುಷ ಕೃತ್ಯ ನಡೆಸಿದವರೆಂದು ಶಂಕಿಸಲಾದ ಮಾರ್ಕ್ಸ್‌ವಾದಿ ಪಕ್ಷದ ಗೂಂಡಾಗಳಿಗೆ ಯಾವುದೇ ಶಿಕ್ಷೆಯಾಗಲಿಲ್ಲ. 1979 ರಲ್ಲಿ ಸುಂದರ ಬನ್ಸ್ ಪ್ರದೇಶದಲ್ಲಿ ಬಾಂಗ್ಲಾದಿಂದ ನಿರಾಶ್ರಿತರಾಗಿ ಬಂದ ಹಿಂದುಳಿದ ನಾಮಶೂದ್ರ ಸಮುದಾಯಕ್ಕೆ ಸೇರಿದ ಬಂಗಾಳಿ ಹಿಂದೂಗಳು ಸರಸ್ವತಿ ಪೂಜೆಗಾಗಿ ಭಾರೀ ಸಂಖ್ಯೆಯಲ್ಲಿ ಸೇರಿದ್ದರು. ಅಂದು ಜ್ಯೋತಿಬಸುರವರ ಕಮ್ಯೂನಿಸ್ಟ್ ಸರಕಾರದ ಪೋಲೀಸರು ಮಾಡಿದ ಗೋಲಿಬಾರ್‌ನಲ್ಲಿ 500ಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದರು.

ಕಳೆದ ತಿಂಗಳು ದೇಶಾದ್ಯಂತ ಮುಂಗಾರು ಮಳೆ ಸುರಿಯುತ್ತಿದ್ದರೆ, ಪೂರ್ವದ ಪಶ್ಚಿಮ ಬಂಗಾಳದಲ್ಲಿ ಪೆಟ್ರೋಲ್ ಬಾಂಬ್, ಕಚ್ಚಾ ಬಾಂಬ್, ಗುಂಡಿನ ಮಳೆಯಾಗುತ್ತಿತ್ತು. ಅಂದು ಪಶ್ಚಿಮ ಬಂಗಾಳದಲ್ಲಿ ಪಂಚಾಯತ್ ಚುನಾವಣೆಗೆ ಮತದಾನ ನಡೆಯುತ್ತಿತ್ತು. ಪಶ್ಚಿಮ ಬಂಗಾಳದ ಯಾವುದೇ ಹಂತದ ಚುನಾವಣೆಗಳಲ್ಲಿ ಹಿಂಸೆಗೆ ತನ್ನದೇ ಆದ ಇತಿಹಾಸವಿದೆ. ಎಲ್ಲ ಸ್ತರದ ಚುನಾವಣೆಗೂ ಅಲ್ಲಿ ಹೊಡೆತ, ಕಡಿತ, ಹತ್ಯೆಗಳು ನಡೆಯಲೇಬೇಕು ಎಂಬ ಅನಿವಾರ್ಯತೆ ಇದೆ. ಅಲ್ಲಿನ ಚುನಾವಣಾ ರಾಜಕೀಯ ರಕ್ತರಂಜಿತವಾಗಿದೆ. ಈ ಬಾರಿಯ ಪಂಚಾಯತ್ ಚುನಾವಣೆಗಳಲ್ಲೂ ಭೀಕರ ಘಟನೆಗಳು ನಡೆದಿವೆ. ರಕ್ತದ ಓಕುಳಿಯಾಟ ಸಂಭವಿಸಿದೆ. ವಂಗಭೂಮಿ ನೆಲ ಮತ್ತೆ ಕೆಂಪಾಗಿದೆ.

**ಚುನಾವಣೆ ಹಿಂಸೆಯ ಇತಿಹಾಸ:** ಬಂಗಾಳದಲ್ಲಿ ಪ್ರಥಮತಃ ಕಮ್ಯೂನಿಸ್ಟರು ಹಿಂಸಾ ರಾಜಕೀಯ ಆರಂಭಿಸಿದರೆನ್ನುತ್ತಾರೆ. ದಶಕಗಳ ಹಿಂದೆ ವಾಮರು ಬರ್ಧಮಾನ ಜಿಲ್ಲೆಯ ಸಾಯಿಬಾಡಿ ಎಂಬಲ್ಲಿ ಕೇವಲ ಕಾಂಗ್ರೆಸ್ ಕಾರ್ಯಕರ್ತರೆಂಬ ಕಾರಣಕ್ಕೆ ಪ್ರಣವ್ ಸ್ವಾ, ಮಲಯ್ ಸ್ವಾ ಹಾಗೂ ಜಿತೇಂದ್ರನಾಥ ರೈ ಎಂಬುವವರನ್ನು ಕ್ರೂರವಾಗಿ ಹತ್ಯೆಗೈದರು. ವಾಮ ಕಾರ್ಯಕರ್ತರು ಅಲ್ಲಿಗೆ ತೃಪ್ತಿಪಡೆದೇ ಸ್ವಾ ಸಹೋದರರ ಶರೀರದ ರಕ್ತವನ್ನು ಅನ್ನಕ್ಕೆ ಬೆರೆಸಿ ಅವರ ತಾಯಿ ಮೃಗನಯಾನಾದೇವಿ ಹಾಗೂ ಪರಿವಾರದವರಿಗೆ ಉಣಿಸಿ ಕ್ರೌರ್ಯದ ಪರಮಾವಧಿ ಮೆರೆದಿದ್ದರು. ಈ ಘಟನೆ ಬಂಗಾಳದಲ್ಲಿ ಅಧಿಕಾರಸ್ಥರು ವಿರೋಧಿಗಳನ್ನು ಹುಡುಕಿ ಕೊಲ್ಲುವ ರಕ್ತರಂಜಿತ ರಾಜಕೀಯ ಶಕೆಗೆ ನಾಂದಿ ಹಾಡಿತು. 1972ರಲ್ಲಿ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿ ಸಿದ್ದಾರ್ಥ ಶಂಕರ ರೇ ಅವರು ಮೌನವಾಗಿ ರಾಜಕೀಯ ವಿರೋಧಿಗಳ ಹತ್ಯೆಯನ್ನು ಬೆಂಬಲಿಸುತ್ತಿದ್ದರೆಂದು ಆರೋಪಕ್ಕೀಡಾಗಿದ್ದರು.

1977 ರಲ್ಲಿ ಕಮ್ಯೂನಿಸ್ಟರು ಮೊದಲ ಬಾರಿ ಅಧಿಕಾರಕ್ಕೆ ಬಂದ ನಂತರ ವಿರೋಧಿಗಳ ಹತ್ಯೆ ನಿರಂತರ ಮುಂದುವರೆಯಿತು. 1982 ರಲ್ಲಿ ಕೊಲ್ಕತ್ತಾದಲ್ಲಿ ಆನಂದಮಾರ್ಗ ಸಂಘಟನೆಯ ಓರ್ವ ಸನ್ಯಾಸಿನಿ ಸಹಿತ 17 ಅನುಯಾಯಿಗಳು ಹತ್ಯೆಗೀಡಾದರು. ಈ ಅಮಾನುಷ ಕೃತ್ಯ ನಡೆಸಿದವರೆಂದು ಶಂಕಿಸಲಾದ ಮಾರ್ಕ್ಸ್‌ವಾದಿ ಪಕ್ಷದ ಗೂಂಡಾಗಳಿಗೆ ಯಾವುದೇ ಶಿಕ್ಷೆಯಾಗಲಿಲ್ಲ. 1979 ರಲ್ಲಿ ಸುಂದರ ಬನ್ಸ್ ಪ್ರದೇಶದಲ್ಲಿ ಬಾಂಗ್ಲಾದಿಂದ ನಿರಾಶ್ರಿತರಾಗಿ ಬಂದ ಹಿಂದುಳಿದ ನಾಮ ಶೂದ್ರ ಸಮುದಾಯಕ್ಕೆ ಸೇರಿದ ಬಂಗಾಳಿ ಹಿಂದೂಗಳು ಸರಸ್ವತಿ ಪೂಜೆಗಾಗಿ ಭಾರೀ ಸಂಖ್ಯೆಯಲ್ಲಿ ಸೇರಿದ್ದರು. ಅಂದು ಜ್ಯೋತಿಬಸುರವರ ಕಮ್ಯೂನಿಸ್ಟ್ ಸರಕಾರದ ಪೊಲೀಸರು ಮಾಡಿದ ಗೋಲಿಬಾರ್‌ನಲ್ಲಿ 500ಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದರು. ಬಡವರ, ತುಳಿತಕ್ಕೊಳಗಾದವರ ಪರ ಎನ್ನುವ ಪಕ್ಷದ ರಕ್ತದಾಹ ತಣಿಸಲು ಸರ್ವಸ್ವವನ್ನು ಕಳೆದುಕೊಂಡು ನಿರಾಶ್ರಿತರಾಗಿ ಬಂದವರ ಮಾರಣ ಹೋಮವಾಗಿತ್ತು. ಮೂವತ್ತನಾಲ್ಕು ವರ್ಷಗಳ ಕಾಲ ಸತತ ಆಡಳಿತ ನಡೆಸಿದ ಸಿಪಿಐ(ಎಂ) ನೇತೃತ್ವದ ವಾಮರ ಅವಧಿಯಲ್ಲಿ ವಾಮಸಿದ್ಧಾಂತ ವಿರೋಧಿಸಿದ ಲೆಕ್ಕವಿಲ್ಲದಷ್ಟು ರಾಜಕೀಯ ಪಕ್ಷಗಳ ಕಾರ್ಯಕರ್ತರನ್ನು ಹತ್ಯೆಗೈಯ್ಯಲಾಯಿತು. ಸಿಪಿಐ(ಎಂ)ನ ಗೂಂಡಾಗಳ ಕ್ರೌರ್ಯಕ್ಕೆ ಮಿತ್ರ ಪಕ್ಷಗಳ ಅನೇಕ ನಾಯಕರು, ಕಾರ್ಯಕರ್ತರು ಬಲಿಯಾಗಿದ್ದರು. ಸ್ವಪಕ್ಷೀಯ ಭಿನ್ನಮತೀಯ ನಾಯಕ ಗೌತಮ ಭಟ್ಟಾಚಾರ್ಯರು ನಿಗೂಢವಾಗಿ ಕೊಲೆಯಾದರು. 1989ರಲ್ಲಿ ಕೇಂದ್ರದ ಕಾಂಗ್ರೆಸ್ ಸರಕಾರದಲ್ಲಿ ಸಚಿವರಾಗಿದ್ದ ದಿ. ಸಂತೋಷ್ ಮೋಹನ ದೇವ್‌ರವರು ಕೊಲ್ಕತ್ತಾದ ಬೆಹಲಾ ಎಂಬ ಪ್ರದೇಶದಲ್ಲಿ ಕಮ್ಯೂನಿಸ್ಟರು ನಡೆಸಿದ್ದ ಹಲ್ಲೆಯಲ್ಲಿ ಬದುಕಿ ಉಳಿದಿದ್ದರು. 1971ರಲ್ಲಿ ಫಾರ್ವರ್ಡ್ ಬ್ಲಾಕ್‌ನ ಗೌರವಾನ್ವಿತ ನಾಯಕ ಹೇಮಂತ್ ಬಸು ಹತ್ಯೆಯಾಯಿತು. ಅನಂತರ ಬಸು ಸ್ಥಾನಕ್ಕೆ ಚುನಾವಣೆಯಲ್ಲಿ ಸ್ಪರ್ಧಿಸಿದ ಅದೇ ಪಕ್ಷದ ಅಜಿತ್ ಕುಮಾರ್ ಬಿಸ್ವಾಸ್‌ರನ್ನೂ ಹತ್ಯೆಗೈಯ್ಯಲಾಯಿತು. ಈ ಎರಡು ಕೃತ್ಯಗಳನ್ನು ಸಿಪಿಐ(ಎಂ) ಗೂಂಡಾಗಳು ನಡೆಸಿದ್ದರೆಂದು ಆರೋಪಿಸಲಾಗಿತ್ತು. 2011ರಲ್ಲಿ ಅಧಿಕಾರಕ್ಕೆ ಬಂದ ಮಮತಾ ಬ್ಯಾನರ್ಜಿಯವರ ತೃಣಮೂಲ ಕಾಂಗ್ರೆಸ್ ಪ್ರಸ್ತುತ ಸಿಪಿಐ(ಎಂ) ಮಾದರಿಯ ರಾಜಕೀಯ ಮುಂದುವರಿಸಿದೆ. ಒಂದು ಮಾಹಿತಿಯಂತೆ 1977 ರಿಂದ 2020ರವರೆಗೆ ಸುಮಾರು 43 ವರ್ಷಗಳ ಅವಧಿಯಲ್ಲಿ ಪಶ್ಚಿಮ ಬಂಗಾಳದಲ್ಲಿ ಒಂದು ಲಕ್ಷಕ್ಕೂ ಅಧಿಕ ರಾಜಕೀಯ ವಿರೋಧಿಗಳ ಹತ್ಯೆಯಾಗಿರುವುದಾಗಿ ಅಂದಾಜು ಮಾಡಲಾಗಿದೆ.

**ಮಮತಾ ಆಡಳಿತದಲ್ಲಿ ಮುಂದುವರಿದ ಹಿಂಸೆ :** 2011ರಲ್ಲಿ ಮಮತಾರ ತೃಣಮೂಲ ಕಾಂಗ್ರೆಸ್ ಅಧಿಕಾರಕ್ಕೇರಿದಾಗ ಬಂಗಾಳದಲ್ಲಿ ರಾಜಕೀಯ ಹತ್ಯೆಗಳು ನಿಂತು ವಿಕಾಸದಲ್ಲಿ ಸಾಗುವುದೆಂಬ ವಿಶ್ವಾಸ ಮೂಡಿತ್ತು. ಆದರೆ ವಾಮರಿಗಿಂತ ಹೆಚ್ಚು ಹಿಂಸೆ ಮಮತಾ ಆಡಳಿತದಲ್ಲಿ ನಡೆಯುತ್ತಿದೆ. ಕೋಲ್ಕತ್ತಾದ ಖ್ಯಾತ ಪತ್ರಕರ್ತ ಸುಮದ್ ಭಟ್ಟಾಚಾರ್ಯರು ಮಮತಾ ಬಗ್ಗೆ 'ಮಮತಾರವರು ವಾಮರ ಶಾಲೆಯಲ್ಲಿ ಪಿ.ಎಚ್.ಡಿ ಮಾಡಿರುತ್ತಾರೆ. ಇವರು ವಾಮರಿಗಿಂತ ಭಿನ್ನ ಹಾದಿಯಲ್ಲಿ ಕೆಲಸ ಮಾಡುವರೆಂದು ಭಾವಿಸುವುದು ಮೂರ್ಖತನ. ಮಮತಾರವರು ವಾಮರಂತೆ ತಮ್ಮ ವಿರೋಧಿಗಳನ್ನು ಹತ್ತಿಕ್ಕುವ ಯತ್ನ ಪ್ರಾರಂಭಿಸಿದ್ದಾರೆ. ಹೆಚ್ಚುತ್ತಿರುವ ಬಿಜೆಪಿಯ ವರ್ಚಸ್ಸು ಮತ್ತು ಮತಗಳಿಕೆ ಪ್ರಮಾಣ ಮಮತಾರ ನಿದ್ದೆಗೆಡಿಸಿದೆ. ಈ ಕಾರಣದಿಂದ ಬಿಜೆಪಿ ಕಾರ್ಯಕರ್ತರ ಹತ್ಯೆಯಾಗುತ್ತಿದೆ. ಹಾಗೂ ಮುಸ್ಲಿಂ ತುಷ್ಟಿಕರಣದಲ್ಲಿ ಮಮತಾ ಎಲ್ಲಾ ಮಿತಿಯನ್ನು ಮೀರಿದ್ದಾರೆ ಎಂದು ಹೇಳಿಕೆ ನೀಡಿದ್ದರು. 2013ರ ಹಾಗೂ 2018ರ ಪಂಚಾಯತ್ ಚುನಾವಣೆಯಲ್ಲಿ ಅನುಕ್ರಮವಾಗಿ ಹದಿನೈದು ಹಾಗೂ 27ಕ್ಕೂ ಹೆಚ್ಚು ಬಿಜೆಪಿ ಕಾರ್ಯಕರ್ತರ ಅಮಾನುಷವಾಗಿ ಹತ್ಯೆ ಮಾಡಲಾಗಿತ್ತು. ಪಶ್ಚಿಮ ಬಂಗಾಳದ 2020–21ರ ವಿಧಾನಸಭಾ ಚುನಾವಣೆಯಲ್ಲಿ ಐವತ್ತೆರಡು ರಾಜಕೀಯ ಕಾರ್ಯಕರ್ತರ ಹತ್ಯೆಯಾಗಿತ್ತು.

**ಈ ಬಾರಿಯ ಪಂಚಾಯತ್ ಚುನಾವಣಾ ಹಿಂಸೆ :** ದಿ.8.7.2023ರ ಬೆಳಗ್ಗೆ ಮತದಾನ ಆರಂಭದೊಂದಿಗೆ ಶುರುವಾದ ರಕ್ತದೋಕುಳಿಯಾಟ ಚುನಾವಣೆ ಮುಗಿದು ಆನೇಕ ಗಂಟೆಗಳವರೆಗೆ ಮುಂದುವರಿದು ಶಾಂತವಾದಾಗ 45ಕ್ಕೂ ಹೆಚ್ಚು ಜನರ ಕಗ್ಗೊಲೆಯಾಗಿತ್ತು. ನೂರಾರು ಜನ ಗಾಯಗೊಂಡಿದ್ದರು. ಚುನಾವಣೆಗಳು ಶಾಂತಿಪೂರ್ಣವಾಗಿರುವುದಿಲ್ಲ ಎಂದು ಅರಿತಿದ್ದರೂ ರಾಜ್ಯದ ಜನತೆ ಕೊಲ್ಕತ್ತಾ ಉಚ್ಚ ನ್ಯಾಯಾಲಯದ ಮೇಲ್ವನಿಖೆ, ರಾಜ್ಯ ಚುನಾವಣಾ ಆಯೋಗದ ಭರವಸೆಗಳು, ರಾಜ್ಯಪಾಲರಿಂದ ಭಯಮುಕ್ತ ಮತದಾನದ ಭರವಸೆ ಹಾಗೂ ಕೇಂದ್ರೀಯ ಪಡೆಗಳ 822 ಕಂಪನಿಗಳ ಆಗಮನವು ಮತದಾನ ಶಾಂತಿಪೂರ್ಣವಾಗಿ ನಡೆಯುವ ವಿಶ್ವಾಸ ಮೂಡಿಸಿತ್ತು. ಆದರೆ ಮತದಾನ ಆರಂಭವಾಗುತ್ತಿದ್ದಂತೆ ಎಲ್ಲ ಭರವಸೆಗಳು ಹುಸಿಯಾದವು. ವಾಮ ಪಕ್ಷಗಳು ಹಾಗೂ ತೃಣಮೂಲ ಬೆಂಬಲಿಗರು ನಿರ್ಭಯವಾಗಿ ಮಾಧ್ಯಮಗಳ ಕ್ಯಾಮರಾಗಳ ಎದುರು ಬಂದೂಕುಗಳನ್ನು ಪ್ರದರ್ಶಿಸುವುದು, ಬಾಂಬ್‌ಗಳನ್ನು ಎಸೆಯುವ ದೃಶ್ಯಗಳು ಕಂಡು ಬಂದವು. ಚುನಾವಣಾ ಹಿಂಸೆಗೆ ಸಾಕಷ್ಟು ಪೂರ್ವ ಸಾಕಷ್ಟು ಪೂರ್ವ ತಯಾರಿ ಆಗಿತ್ತು ಎಂದು ಸ್ಪಷ್ಟವಾಗುತ್ತಿತ್ತು. ತೃಣಮೂಲ ಕಾಂಗ್ರೆಸ್ಸಿಗರು ಅಧಿಕಾರ ದುರುಪಯೋಗದ ಎಲ್ಲಾ ಅವಕಾಶ ಬಳಸಿಕೊಂಡರು. ಚುನಾವಣಾ ಸಿಬ್ಬಂದಿಗಳು, ರಾಜ್ಯ ಪೊಲೀಸರು ಅಧಿಕಾರಸ್ತರ ಚೇಲಾಗಳಂತೆ ಕಾರ್ಯನಿರ್ವಹಿಸಿದರು. ಕೇಂದ್ರೀಯ ಪಡೆಗಳನ್ನು ಏನೂ ಮಾಡಲು ಸಾಧ್ಯವಾಗದಂತಹ ರೀತಿಯಲ್ಲಿ ನಿಯೋಜಿಸಲಾಗಿತ್ತು. ಮತಗಟ್ಟೆ ವಶ, ನಕಲಿ ಮತದಾನ, ಮತಪಟ್ಟಿಗೆ ಅಪಹರಣ, ವಿಪಕ್ಷೀಯರಿಗೆ ಮತದಾನದ ನಿರಾಕರಣೆಯಂತಹ ಘಟನೆಗಳಿಂದ ಪ್ರಜಾತಂತ್ರದ ಹಲವು ಒಂದು ಪ್ರಹಸನದಂತೆ ನಡೆಯಿತು.

ಮತದಾನದ ಅವಧಿಯುದ್ದಕ್ಕೂ ರಾಜ್ಯಾದ್ಯಂತ ನೂರಕ್ಕೂ ಅಧಿಕ ಸ್ಥಾನಗಳಲ್ಲಿ ಹಿಂಸೆ ನಡೆದಿತ್ತು. ಮುರ್ಶಿದಾಬಾದ್ ಜಿಲ್ಲೆಯಲ್ಲಿ ಮೂವರ ಹತ್ಯೆ, ಮಾಲ್ಡಾದಲ್ಲಿ ಓರ್ವ ಹಾಗೂ ಮತ್ತೊಂದು ಹತ್ಯೆ ಶೂಟ್ ಬಿಹಾರ್‌ನಲ್ಲಾಯಿತು. ಉಳಿದಂತೆ ನಾಡಿಯಾ ಬರ್ದವಾನ್, ಉತ್ತರ ಮತ್ತು ದಕ್ಷಿಣ 24 ಪರಗಣ ಜಿಲ್ಲೆಗಳಲ್ಲೂ ಭಾರಿ ಪ್ರಮಾಣದಲ್ಲಿ ಹಿಂಸೆ, ಹತ್ಯೆ, ಬೆಂಕಿ ಹಚ್ಚುವಿಕೆ, ಗುಂಡು ಹಾರಾಟದ ಪ್ರಕರಣಗಳು ನಡೆದವು. ಶೂಬ್ ಬಿಹಾರ್ ವಿಧಾನಸಭಾ ಕ್ಷೇತ್ರದ ಒಂದು ಪಂಚಾಯತ್ ಮತದಾನ ಕೇಂದ್ರದೊಳಗೆ ಬಾಂಬ್ ಸ್ಫೋಟಗೊಂಡು ಓರ್ವ ಮೃತನಾಗಿ ಉಳಿದವರು ಗಾಯಗೊಂಡರು. ಭೀಕರ ವಾತಾವರಣದ ನಡುವೆಯೂ ಮಧ್ಯಾಹ್ನದವರೆಗೆ ಶೇ.36.37 ರಷ್ಟು ಮತದಾನವಾಗಿತ್ತು. ಕೆಲವು ಸಮಾಜಘಾತುಕ ಶಕ್ತಿಗಳು ಮತಪಟ್ಟಿಗೆಗಳನ್ನು ಸೆಳೆದುಕೊಂಡು ಹೋದ ಘಟನೆಗಳು ನಡೆದವು. ಅನೇಕ ಕಡೆ ಕಾಲುವೆಗಳಲ್ಲಿ, ಚರಂಡಿಗಳಲ್ಲಿ ಎಸೆದ ಬ್ಯಾಲೆಟ್ ಬಾಕ್ಸ್‌ಗಳನ್ನು ಪೊಲೀಸರು ತೆಗೆಯುತ್ತಿರುವುದು ದಾಖಲಾಗಿದೆ. ಕೆಲವೆಡೆ ಮೊದಲೇ ಮುದ್ರಿಸಿ ತೃಣಮೂಲ ಅಭ್ಯರ್ಥಿ ಹೆಸರಿನ ಮುಂದ ಮೊಹರು ಹಾಕಲಾಗಿತ್ತು.

ಈ ಹಿಂಸಾಚಾರಗಳ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ರಾಜಕೀಯ ನಾಯಕರು ದೂರು ನೀಡಿದ್ದಾರೆ. ಬಂಗಾಳ ವಿರೋಧಿ ಪಕ್ಷದ ನಾಯಕಸುವೆಂದು ಅಧಿಕಾರಿ ಹಾಗೂ ಕಾಂಗ್ರೆಸ್ ನಾಯಕ ಆಧೀರರಂಜನ್ ಚೌಧರಿಯವರು ಪ್ರತ್ಯೇಕವಾಗಿ ದೂರು ನೀಡಿ ನಿಷ್ಪಕ್ಷಪಾತ ತನಿಖೆ ಹಾಗೂ ಪೀಡಿತ ಪರಿವಾರಗಳಿಗೆ ಪರಿಹಾರ ಧನದ ಬೇಡಿಕೆ ಸಲ್ಲಿಸಿದ್ದಾರೆ.

**ವಿಜಯ ಸಾಧಿಸಿದ ತೃಣಮೂಲ ಕಾಂಗ್ರೆಸ್**

ಈ ಬಾರಿಯು ಹಿಂಸೆ ಮೂಲಕ ಟಿಎಂಸಿಯ ಚುನಾವಣೆಯಲ್ಲಿ ಭಾರಿ ಜಯ ಗಳಿಸಿದೆ. ಕಾರ್ಯಕರ್ತರಿಗೆ ಸಂತಸ ತಂದಿರುವ ಈ ಫಲಿತಾಂಶ 83 ಟಿಎಂಸಿ ನಾಯಕರಲ್ಲಿ ಆತಂಕ ಸೃಷ್ಟಿಸಿದೆ. ಹೆಚ್ಚುತ್ತಿರುವ ಬಿಜೆಪಿ ಜನಪ್ರಿಯತೆ ಟಿಎಂಸಿ ನಾಯಕರ ನಿದ್ದೆಗೆಡಿಸಿದೆ. ರಾಜ್ಯದ ಒಟ್ಟು 63223 ಗ್ರಾಂ ಪಂಚಾಯತ್ ಸ್ಥಾನಗಳಲ್ಲಿ ತೃಣಮೂಲ ಪಕ್ಷವು 35500 (2018ರಲ್ಲಿ 38118) ಕ್ಕಿಂತ ಹೆಚ್ಚು ಸ್ಥಾನಗಳಲ್ಲಿ ಜಯಗಳಿಸಿದರೆ ಬಿಜೆಪಿಯು 9877 (2018ರಲ್ಲಿ 5779) ರಲ್ಲಿ ಜಯಗಳಿಸಿತು. 9730 ಪಂಚಾಯತ್ ಸಮಿತಿಗಳಲ್ಲಿ ಟಿಎಂಸಿ 6000ಕ್ಕೂ ಅಧಿಕ ಸ್ಥಾನ ಪಡೆದರೆ (2018ರಲ್ಲಿ 8062), ಬಿಜೆಪಿ 1038 ಸ್ಥಾನಗಳನ್ನು ಗಳಿಸಿತು. (2018ರಲ್ಲಿ 769). ಜಿಲ್ಲಾ ಪರಿಷತ್‌ಗಳ 928 ಸ್ಥಾನಗಳಲ್ಲಿ ಟಿಎಂಸಿ 880 (2018ರಲ್ಲಿ 795) ರಲ್ಲಿ ವಿಜಯ ಸಾಧಿಸಿದರೆ ಬಿಜೆಪಿ 31 (22) ಸ್ಥಾನ ಗಳಿಸಿತು. ಗ್ರಾಮೀಣ ಪ್ರದೇಶಗಳು ವರ್ಚಸ್ಸು, ಪ್ರಭಾವ ಸ್ಥಾಪಿಸುವ ಈ ಪ್ರಜಾಪ್ರಭುತ್ವದ ಉತ್ಸವದಲ್ಲಿ ಮೌಲ್ಯಗಳಿಗೆ ಸೋಲಾಗಿರುವುದು ವಿಷಾದನೀಯ ಹಾಗೂ ಖಂಡನಾರ್ಹವಾಗಿದೆ.

# ಬೆಂಗಳೂರಲ್ಲಿ ದೇಶದ ಮೊದಲ 3ಡಿ ಮುದ್ರಿತ ಅಂಚೆ ಕಚೇರಿ ಉದ್ಘಾಟನೆ

ಬೆಂಗಳೂರು, ಆ.18– ದೇಶದ ಮೊದಲ 3ಡಿ ಮುದ್ರಿತ ಅಂಚೆ ಕಚೇರಿಯನ್ನು ರೈಲ್ವೇ, ಸಂವಹನ, ಎಲೆಕ್ಟ್ರಾನಿಕ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಶುಕ್ರವಾರ ಉದ್ಘಾಟಿಸಿದರು.

ಬೆಂಗಳೂರಿನ ಕೆಂಬ್ರಿಡ್ಜ್ ಲೇಔಟ್‌ನಲ್ಲಿ ನಿರ್ಮಾಣವಾಗಿರುವ 3ಡಿ ಮುದ್ರಿತ ಅಂಚೆ ಕಚೇರಿಯನ್ನು ಅಶ್ವಿನಿ ವೈಷ್ಣವ್ ಉದ್ಘಾಟಿಸಿದ್ದು, ಬಳಿಕ ವಿಶೇಷ ಅಂಚೆ ಲಕೋಟೆ ಮತ್ತು ಅಂಚೆ ಕಚೇರಿಯ ಮಾದರಿ ಬಿಡುಗಡೆ ಮಾಡಿದರು.

ಬಳಿಕ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ನನಗೆ ಬೆಂಗಳೂರಿಗೆ ಬರಲು ಸಂತಸವಾಗುತ್ತದೆ. ಈ ನಗರವು ಸಾಕಷ್ಟು ಶಕ್ತಿಯನ್ನು ಹೊಂದಿದೆ. ಇಲ್ಲಿ ಸಕಾರಾತ್ಮಕ ಚಿಂತನೆ ಅಧಿಕವಾಗಿದೆ. ಬೆಂಗಳೂರು ಯಾವಾಗಲೂ ಭಾರತಕ್ಕೆ ಹೊಸ ಚಿತ್ರಣವನ್ನು ನೀಡುತ್ತಿರುತ್ತದೆ. ಈ 3ಡಿ ಮುದ್ರಿತ ಅಂಚೆ ಕಚೇರಿ ಕಟ್ಟಡ ನೀವು ನೋಡಿದ ಹೊಸ ಚಿತ್ರ ಭಾರತವು ಇಂದು ಅಭಿವೃದ್ಧಿಯಾಗುತ್ತಿದ್ದು, ದೇಶವು ನಿರ್ಣಾಯಕ ಮತ್ತು ನಮ್ಮ ಜನರ ಸಾಮರ್ಥ್ಯಗಳಲ್ಲಿ ವಿಶ್ವಾಸವನ್ನು ಹೊಂದಿರುವ ನಾಯಕತ್ವವನ್ನು ಹೊಂದಿರುವುದರಿಂದ ಇದೆಲ್ಲವೂ ಸಾಧ್ಯವಾಗಿದೆ ಎಂದರು.



ಈ ಅಂಚೆ ಕಚೇರಿಗೆ 'ಕೇಂಬ್ರಿಡ್ಜ್ ಲೇಔಟ್ ಪಿಒ' ಎಂದು ಹೆಸರಿಸಲಾಗಿದೆ. ಇದೇ ವರ್ಷ ಮಾರ್ಚ್ 21 ರಿಂದ ನಿರ್ಮಾಣದ ಕಾರ್ಯ ಆರಂಭವಾಗಿದ್ದು, 44 ದಿನಗಳಲ್ಲಿ ಕಾಮಗಾರಿ ಪೂರ್ಣಗೊಂಡಿದೆ.

ಕಟ್ಟಡದ ನಿರ್ಮಾಣ ಕಾರ್ಯ ಮೇ 3ರ ಒಳಗಡೆಯೇ ಪೂರ್ಣಗೊಂಡಿದ್ದರೂ, ಒಳಚರಂಡಿ ಮತ್ತು ನೀರಿನ ಸಂಪರ್ಕ ಸಂಬಂಧದ ಕಾಮಗಾರಿಗೆ ಎರಡು ತಿಂಗಳು ಸಮಯ ತೆಗೆದುಕೊಂಡಿತ್ತು. ಇನ್ನು ಉದ್ಘಾಟನೆಗೆ ಸಚಿವರ ಲಭ್ಯತೆಗಾಗಿ ಒಂದು ತಿಂಗಳು ಹಿಡಿದಿತ್ತು. ಈ ಕಚೇರಿ ಆರಂಭವಾದ ನಂತರ ಹಲಸೂರು ಬಜಾರ್‌ನಲ್ಲಿರುವ ಪ್ರಸ್ತುತ ಅಂಚೆ ಕಚೇರಿಯನ್ನು ಮುಚ್ಚಲಾಗುವುದು. ಮತ್ತು ಅಲ್ಲಿಯ ಸಿಬ್ಬಂದಿ ಮತ್ತು ಸಾಮಗ್ರಿಗಳನ್ನು ಇಲ್ಲಿಗೆ ಸ್ಥಳಾಂತರಿಸಲಾಗುವುದು ಎಂದು ಮೂಲಗಳು ತಿಳಿಸಿವೆ. 'ಎಲ್&ಟಿ (ಲಾರ್ಸನ್ ಮತ್ತು ಟೂಬ್ರೊ) ನಿರ್ಮಿಸಿರುವ ಕಟ್ಟಡವು ಸುಮಾರು 1,100 ಚದರ ಅಡಿ ವಿಸ್ತೀರ್ಣದಲ್ಲಿದೆ. 3ಡಿ ತಂತ್ರಜ್ಞಾನ ಅಳವಡಿಸಲು ತೆರಿಗೆ ಸೇರಿ ಸುಮಾರು 26 ಲಕ್ಷ ರೂ. ವೆಚ್ಚವಾಗಿದೆ.

ಡ್ರೈನೇಜ್ ಸಂಪರ್ಕ ಮತ್ತು ನೀರಿನ ಸಂಪರ್ಕದಂತಹ ಇತರ ವೆಚ್ಚಗಳು ಸೇರಿ ಸುಮಾರು 40 ಲಕ್ಷ ರೂಪಾಯಿ ವೆಚ್ಚವಾಗಿದೆ. ಈ ಮೂಲಕ ಸಾಂಪ್ರದಾಯಿಕ ಅಂಚೆ ಕಚೇರಿ ನಿರ್ಮಿಸಿದರೇ ಎಷ್ಟು ಖರ್ಚಾಗುತ್ತಿತ್ತು ಅದಕ್ಕೆ ಹೋಲಿಸಿದರೆ ಈ ಅಂಚೆ ಕಚೇರಿಯ ನಿರ್ಮಾಣ ವೆಚ್ಚದಲ್ಲಿ ಶೇ. 30ರಿಂದ 40ರಷ್ಟು ಹಣ ಇಳಿಕೆಯಾಗಿದೆ.

## ಇಂದು ಜೀವನೋಪಾಯ ವರ್ಷ–2023

ಮೈಸೂರು,ಆ.18– ಮೈಸೂರು ಮಹಾನಗರ ಪಾಲಿಕೆಯ ವತಿಯಿಂದ 'ಜೀವನೋಪಾಯ ವರ್ಷ–2023 ಆಚರಣೆ ಹಾಗೂ ವಿವಿಧ ಕಾರ್ಯಕ್ರಮಗಳನ್ನು ಆ.19 ರಂದು ಮಧ್ಯಾಹ್ನ 12 ಗಂಟೆಗೆ ಪುರಭವನ ದೊಡ್ಡ ಗಡಿಯಾರದ ಬಳಿ ಹಮ್ಮಿಕೊಳ್ಳಲಾಗಿದೆ.

ಕೇಂದ್ರ ಪುರಸ್ಕೃತ ಯೋಜನೆಗಳಾದ ದೀನ್ ದಯಾಳ್ ಅಂತ್ಯೋದಯ–ರಾಷ್ಟ್ರೀಯ ನಗರ ಜೀವನೋಪಾಯ(ಡೇ–ನಲ್ಮ್) ಅಭಿಯಾನದ ವಿವಿಧ ಉಪಘಟಕಗಳು, ಪ್ರಧಾನಮಂತ್ರಿ ಬೀದಿಬದಿ ವ್ಯಾಪಾರಿಗಳ ಆತ್ಮನಿರ್ಭರ ನಿಧಿ (ಪಿ.ಎಂ ಸ್ವ–ನಿಧಿ) ಮತ್ತು ಪ್ರಧಾನಮಂತ್ರಿ ಕಿರು ಆಹಾರ ಉದ್ದಿಮೆ ಯೋಜನೆಗಳ ಅಡಿ ಆಯ್ಕೆಯಾದ ಫಲಾನುಭವಿಗಳಿಗೆ ಉತ್ತಮ ಪ್ರಶಸ್ತಿ, ಬ್ಯಾಂಕ್ ಸಾಲ ವಿತರಣೆ, ಪ್ರಮಾಣ ಪತ್ರ ಮತ್ತು ಚೆಕ್ ವಿತರಣೆ ಮಾಡುವ ಉದ್ದೇಶದಿಂದ ಒಂದೇ ಸೂರಿನಡಿ ಫಲಾನುಭವಿಗಳಿಗೆ ಹಲವು ಸೌಲಭ್ಯಗಳನ್ನು ಕಲ್ಪಿಸಲು ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಮೈಸೂರು ಮಹಾನಗರ ಪಾಲಿಕೆಯ ಹೆಚ್ಚುವರಿ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

### ಹೋಂಡಾ ಬಿಗ್ ವಿಂಗ್: ಮೆಗಾ ಲೋನ್, ಎಕ್ಸ್ ಚೇಂಜ್ ಮೇಳ



ಮೈಸೂರು: ಈ ವಾರಾಂತ್ಯದಲ್ಲಿ ಮೈಸೂರಿಗರಿಗೆ ವಾಹನ ಕೊಳ್ಳುವ ವಿಶೇಷ ಅವಕಾಶ ದೊರೆತಿದೆ. ಹೋಂಡಾ ಬಿಗ್ ವಿಂಗ್, ಮೈಸೂರು ಸೆಂಟ್ರಲ್, ಇದೇ 19 ಮತ್ತು 20ರಂದು ಕುಕ್ಕರಹಳ್ಳಿ ಕೆರೆ ಎದುರು ದ್ವಿಚಕ್ರ ವಾಹನ ಖರೀದಿಗೆ ಮೆಗಾ ಲೋನ್ ಮತ್ತು ಎಕ್ಸ್‌ಚೇಂಜ್ ಮೇಳ ಆಯೋಜಿಸಿದೆ.

ಅತೀ ಕಡಿಮೆ ಮುಂಗಡ ಹಣ ಹಾಗೂ ಅತೀ ಕಡಿಮೆ ಬಡ್ಡಿ ಅಂದರೆ ಶೇ.5.99 ಹಾಗೂ ಶೇಕಡ 100ರಷ್ಟು ಸಾಲ ಒದಗಿಸಲಾಗುವುದು. ನಿಮ್ಮ ಹಳೆಯ ವಾಹನವನ್ನು ಹೊಸ ಹೋಂಡಾ ಸಿಬಿ350 ದ್ವಿಚಕ್ರ ವಾಹನದೊಂದಿಗೆ ವಿನಿಮಯಿಸಿಕೊಳ್ಳಬಹುದಾಗಿದೆ. ಇದಕ್ಕೆ ಉತ್ತಮ ಎಕ್ಸ್‌ಚೇಂಜ್ ದರವನ್ನು ಸ್ಥಳದಲ್ಲೇ ಪಡೆಯಬಹುದಾಗಿದೆ. ಇದಕ್ಕೆ ಕೆಲವು ಷರತ್ತುಗಳು ಅನ್ವಯವಾಗಲಿದೆ.

ಹೋಂಡಾ ಸಿಬಿ 350 H'ness ಮತ್ತು ಸಿಬಿ ಆರ್‌ಎಸ್ ಸಿಬಿ 350 ವಾಹನದ ಉಚಿತ ಟೆಸ್ಟ್ ರೈಡ್ ಮಾಡಬಹುದು. ಸ್ಥಳದಲ್ಲೇ ಬುಕ್ಕಿಂಗ್ ಮಾಡಿದರೆ 5,000 ರೂಪಾಯಿ ರಿಯಾಯಿತಿ ಕೂಡ ಸಿಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಸಂಗೀತ ಸಾಮ್ರಾಟ ಎಸ್‌ಪಿಬಿ ಸ್ವರಾಭಿಷೇಕ ಕಾರ್ಯಕ್ರಮ



ಮೈಸೂರು, ಆ.18(ಎಸ್‌ಪಿಎನ್)– ಸಂಗೀತ ಸಾಮ್ರಾಟ ಎಸ್.ಪಿ.ಬಾಲಸುಬ್ರಹ್ಮಣ್ಯಂ ಸ್ಮರಣಾರ್ಥ ಮೈಸೂರಿನ ಎಸ್‌ಪಿಬಿ ಇವೆಂಟ್ಸ್ ವತಿಯಿಂದ 'ಸ್ವರಾಭಿಷೇಕ' ಕಾರ್ಯಕ್ರಮ ಆಯೋಜಿಸಲಾಯಿತು.

ಗಾಯಕ ರಾಮಚಂದ್ರು ಸಾರಥ್ಯದಲ್ಲಿ ಎಸ್‌ಪಿಬಿ ಅವರ ಹಾಡಿರುವ ಹಾಡುಗಳನ್ನು ಪ್ರಸ್ತುತಪಡಿಸಿ ಶುಕ್ರವಾರ ನುಡಿನಮನ ಸಲ್ಲಿಸಲಾಯಿತು. ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಎಸ್‌ಪಿಬಿ ಭಾವಚಿತ್ರಕ್ಕೆ ಮಾಜಿ ಮೇಯರ್ ಪುರುಷೋತ್ತಮ್ ಪುಷ್ಪಾರ್ಚನೆ ಸಲ್ಲಿಸಿ ಸ್ವರಾಭಿಷೇಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಭಾರತ ಬಹುತ್ವದ ದೇಶ, ಇಲ್ಲಿ ಎಲ್ಲಾ ಬಗೆಯ ಕಲೆಗಳನ್ನು ಕಾಣಬಹುದು. ಹಾಗೆಯೇ ಖ್ಯಾತ ಸಂಗೀತ ಗಾಯಕ ಎಸ್‌ಪಿಬಿ ಅವರು ಹಿಂದಿ, ಕನ್ನಡ, ತಮಿಳು, ತೆಲುಗು ಸೇರಿದಂತೆ ಇತರೆ ಭಾಷೆಗಳ ಚಿತ್ರಗಳಲ್ಲಿ ಹಾಡಿ, ದೇಶದ ಜನತೆಯ ಮನಗೆದ್ದಿದ್ದಾರೆ. ಕನ್ನಡಿಗರು ಎಸ್‌ಪಿಬಿ ಅವರನ್ನು ಎಂದಿಗೂ ಮರೆಯಲಾರರು ಎಂದು ಅಭಿಪ್ರಾಯಪಟ್ಟರು.

ಕೊಳ್ಳೇಗಾಲ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ನಿರ್ಮಾತೃ ಪಿ.ಎಲ್.ಮಹದೇವ್, ಗಾಯಕ ರವಿಸಂತು, ಎಂ.ಶಿವಮಾದಯ್ಯ, ವಾಸನಹೊಳ್ಳ ಸೇರಿದಂತೆ ಇತರೆ ಸಾಧಕರನ್ನು ಸನ್ಮಾನಿಸಲಾಯಿತು.

ನಂತರ ಗುರು ರಾಘವೇಂದ್ರ ಸ್ವಾಮಿ ಕುರಿತಾದ ಭಕ್ತಿಗೀತೆಯನ್ನು ಹಾಡಲಾಯಿತು. ಎಸ್‌ಪಿಬಿ ಹಾಡಿರುವ ಕನ್ನಡ ಚಿತ್ರಗಳ ಹಲವಾರು ಗೀತೆಗಳನ್ನು ಹಾಡಿ ಪ್ರೇಕ್ಷಕರನ್ನು ರಂಜಿಸಿದರು.

ಗಾಯಕರಾದ ರಾಮಚಂದ್ರು ಪಿ.ಸುರೇಶ್, ಅಶ್ವಿನಿ, ಶಶಿಧರ್, ನಿಂಗರಾಜು, ಉಮೇಶ್, ಶಶಿಕುಮಾರ್, ವಾಸನಹೊಳ್ಳ, ರವಿಸಂತು, ಸರ್ವಮಂಗಳ, ಪವಿತ್ರಾ ಪ್ರಭಾಕರ್ ರೆಡ್ಡಿ, ಮಂಜು ಇತರೆ ಗಾಯಕರು ಗೀತೆಗಳನ್ನು ಹಾಡಿ ರಂಜಿಸಿದರು. ವೇದಿಕೆಯಲ್ಲಿ ನಗರ ಪಾಲಿಕೆ ಮಾಜಿ ಸದಸ್ಯ ಪಾರ್ಥಸಾರಥಿ (ಪಾತಿ), ನಗರ ಪಾಲಿಕೆ ಮಾಜಿ ಸದಸ್ಯ ಸುಹೇಲ್ ಬೇಗ್, ಸಿಂಧೂಗೌಡ, ಮಂಜುನಾಥ್, ವೆಂಕಟೇಶ್, ಮೈಸೂರು ನಗರ ಪಾಲಿಕೆ ಗುತ್ತಿಗೆದಾರರ ಸಂಘದ ಅಧ್ಯಕ್ಷ ವೆಂಕಟೇಶ್, ಮಂಜುಗೌಡ ಸೇರಿದಂತೆ ಇತರರಿದ್ದರು.



ಕರ್ನಾಟಕ ಪೋಲೀಸ್ ಅಕಾಡೆಮಿಯಲ್ಲಿ ಉಪ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿರುವ ಶಿವಶಂಕರ್ ಅವರಿಗೆ ರಾಷ್ಟ್ರಪತಿಗಳ ಸೇವಾ ಪದಕ ಲಭಿಸಿದ ಹಿನ್ನೆಲೆಯಲ್ಲಿ ಅವರನ್ನು ಎಸ್.ಎಂ. ಕೃಷ್ಣ ಅಭಿಮಾನಿ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಒಕ್ಕಲಿಗ ಸಮುದಾಯದ ಮುಖಂಡ ಬೀಡನಹಳ್ಳಿ ಸತೀಶ್ ಗೌಡ, ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕ ಒಂಟಿಕೊಪ್ಪಲು ಗುರುರಾಜ್, ದಂತ ವೈದ್ಯ ಡಾ.ಲೋಕೇಶ್ ಹಾಗೂ ಸಿ.ರವಿ ಆತ್ಮೀಯವಾಗಿ ಅಭಿನಂದಿಸಿದರು.

# ಮೈಸೂರಲ್ಲಿ ಸ್ವಚ್ಛತೆ ಕಾಯ್ದುಕೊಳ್ಳಬೇಕೆ... ಮೊದಲು ಪ್ಲಾಸ್ಟಿಕ್ ನಿರ್ಮೂಲನೆ ಮಾಡಿ

- ಸ್ವಚ್ಛ ಸರ್ವೇಕ್ಷಣೆ ಸಂಬಂಧಿತ ಸಭೆಯಲ್ಲಿ ಮುಖಂಡರ ಆಗ್ರಹ
- ಪರಿಣಾಮಕಾರಿ ಕ್ರಮಗಳ ಕೈಗೊಳ್ಳುವಲ್ಲಿ ಅಧಿಕಾರಿಗಳ ವೈಫಲ್ಯ
- ಕೋಟ್ಯಂತರ ರೂಪಾಯಿ ವ್ಯಯಿಸಿದರೂ ನಿರರ್ಥಕ
- ಸ್ವಚ್ಛತೆ ಸಂಬಂಧ ಅಧಿಕಾರಿಗಳು, ಜನಪ್ರತಿನಿಧಿಗಳಿಗೆ ಬದ್ಧತೆ ಇಲ್ಲ; ನಾಗರಿಕರ ತರಾಟೆ



ಮೈಸೂರು, ಆ.18(ಎಸ್‌ಬಿಡಿ)– ಸ್ವಚ್ಛತೆ ವಿಶೇಷ ದಿನ ಹಾಗೂ ಸ್ಪರ್ಧೆಗೆ ಸೀಮಿತವಾಗಬಾರದು. ನಿರಂತರ ಮೇಲ್ವಿಚಾರಣೆಗೆ ಪ್ರತ್ಯೇಕ ಸಮಿತಿ ರಚಿಸಬೇಕು. ಮೊದಲಿಗೆ ಪ್ಲಾಸ್ಟಿಕ್ ನಿರ್ಮೂಲನೆ ಮಾಡಿ. ಹೀಗೆ ಮೈಸೂರು ನಗರದ ಸ್ವಚ್ಛತೆ ಬಗ್ಗೆ ಹತ್ತು ಹಲವು ಮಹತ್ವದ ಸಲಹೆ, ಸೂಚನೆಗಳು ಸ್ವಚ್ಛ ಸರ್ವೇಕ್ಷಣೆ ಸಂಬಂಧಿತ ಸಭೆಯಲ್ಲಿ ವ್ಯಕ್ತವಾದವು.

ಸ್ವಚ್ಛ ಸರ್ವೇಕ್ಷಣೆ–2023ರ ಹಿನ್ನೆಲೆಯಲ್ಲಿ ಸಾರ್ವಜನಿಕರು, ಸಂಘ–ಸಂಸ್ಥೆಗಳ ಪ್ರತಿನಿಧಿಗಳ ಅಭಿಪ್ರಾಯ ಸಂಗ್ರಹಿಸಲು ಮೈಸೂರು ಮಹಾನಗರ ಪಾಲಿಕೆ ಜಯ ಚಾಮರಾಜೇಂದ್ರ ಸಭಾಂಗಣ(ಹಳೇ ಕೌನ್ಸಿಲ್)ದಲ್ಲಿ ಶುಕ್ರವಾರ ಮೇಯರ್ ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಸಲಹೆ–ಸೂಚನೆಗಳ ಜೊತೆಗೆ ಪಾಲಿಕೆ ಅಧಿಕಾರಿಗಳು ಹಾಗೂ ಸದಸ್ಯರು ನಿರ್ಲಕ್ಷ್ಯ ಹೊಂದಿದ್ದಾರೆಂಬ ಆರೋಪವೂ ಕೇಳಿಬಂದಿತು.

ನಗರದ ಸ್ವಚ್ಛತೆ ಬಗ್ಗೆ ಹಿಂದಿನ ಸಭೆಗಳಲ್ಲಿ ನೀಡಿದ್ದ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಿದಂತಿಲ್ಲ. ಸ್ವಚ್ಛತೆಗಾಗಿ ಸಂಪನ್ಮೂಲವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಲ್ಲೂ ವೈಫಲ್ಯವಾಗಿದೆ. ಪಾಲಿಕೆ ಸದಸ್ಯರೇ ಸ್ವಚ್ಛತಾ ಅಭಿಯಾನದ ಬಗ್ಗೆ ನಿರಾಸಕ್ತಿ ತೋರುತ್ತಿದ್ದಾರೆ. ಆರೋಗ್ಯ ಸ್ಥಾಯಿ ಸಮಿತಿ ಸದಸ್ಯರೂ ಸಭೆಗೆ ಗೈರಾಗಿದ್ದಾರೆ ಎಂದು ಸಭೆಯ ಆರಂಭದಲ್ಲೇ ಹಲವರು ಬೇಸರ ವ್ಯಕ್ತಪಡಿಸಿದರು.

**ಶಾಶ್ವತ ಸಮಿತಿ ರಚಿಸಿ:** ಸ್ವಚ್ಛತೆ ಅಭಿಯಾನ ವರ್ಷವಿಡೀ ನಡೆಯಬೇಕು. ವಿಶೇಷ ದಿನ ಅಥವಾ ನಿರ್ದಿಷ್ಟ ತಿಂಗಳಿಗೆ ಸೀಮಿತಗೊಳಿಸಬಾರದು. ಪ್ರತ್ಯೇಕ ಸಿಬ್ಬಂದಿಯನ್ನು ನಿಯೋಜಿಸುವ ಮೂಲಕ ಪಾಲಿಕೆಯ ಪರಿಸರ ಹಾಗೂ ಆರೋಗ್ಯ ನಿರೀಕ್ಷಕರ ಮೇಲಿನ ಒತ್ತಡ ಕಡಿಮೆ ಮಾಡಿ ಅವರನ್ನು ಮೂಲ ಉದ್ದೇಶಕ್ಕೆ ಬಳಸಿಕೊಳ್ಳಬೇಕು ಎಂಬ ಅಭಿಪ್ರಾಯ ಕೇಳಿಬಂದಿತು. ಇದಕ್ಕೆ ಪೂರಕವಾಗಿ ಮಾತನಾಡಿದ ನಿವೃತ್ತ ಪ್ರಾಧ್ಯಾಪಕ ಪ್ರೊ.ನಾಗಪತಿ, ಸ್ವಚ್ಛತೆಗಾಗಿ 10 ಜನರ ಶಾಶ್ವತ ಸಮಿತಿ ರಚಿಸಬೇಕು. ಆಗಾಗ್ಗೆ ಸಮಿತಿಯಿಂದ ವರದಿ ಪಡೆದುಕೊಂಡು, ಅದರ ಆಧಾರದಲ್ಲಿ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು. ಸ್ವಚ್ಛತೆ, ಸೌಂದರ್ಯ, ಪಾರಂಪರಿಕತೆ ರಕ್ಷಣೆಗೆ ಆದ್ಯತೆ ನೀಡಬೇಕು. ಈ ನಿಟ್ಟಿನಲ್ಲಿ ಮೇಯರ್, ಸದಸ್ಯರು ಹಾಗೂ ಅಧಿಕಾರಿಗಳು ಸಕ್ರಿಯರಾಗಬೇಕು ಎಂದು ಆಗ್ರಹಿಸಿದರು.

**ಸದಸ್ಯರ ಬಗ್ಗೆ ಅಸಮಾಧಾನ:** ಸ್ವಚ್ಛ ಸರ್ವೇಕ್ಷಣ್ ಮತ್ತು ನಗರದ ಸ್ವಚ್ಛತೆ ಬಗ್ಗೆ ಪಾಲಿಕೆ ಸದಸ್ಯರು ನಿರಾಸಕ್ತಿ ತೋರುತ್ತಿದ್ದಾರೆ. ಸ್ವಚ್ಛತೆ ಸಂಬಂಧಿತ ಕಾರ್ಯಕ್ರಮ, ಚಟುವಟಿಕೆಗಳಲ್ಲಿ ಜನಪ್ರತಿನಿಧಿಗಳ ಪಾಲ್ಗೊಳ್ಳುವಿಕೆ ವಿರಳವಾಗಿದೆ. ಹೀಗಾದರೆ ವಾರ್ಡ್ ಹಂತದಲ್ಲಿ ಜಾಗೃತಿ ಮೂಡಿಸಲು ಹೇಗೆ ಸಾಧ್ಯ? ಎಂದು ಮೈಸೂರು ಗ್ರಾಹಕರ ಪರಿಷತ್‌ನ ಡಾ.ಶೇಖರ್ ಅತೀವ ಬೇಸರ ವ್ಯಕ್ತಪಡಿಸಿದರು. ಪಾಲಿಕೆ ಆರೋಗ್ಯ ಸ್ಥಾಯಿ ಸಮಿತಿಯ ಅಧ್ಯಕ್ಷರು, ಸದಸ್ಯರು ಮುಂಚೂಣಿಯಲ್ಲಿರಬೇಕು. ಆದರೆ, ಅವರೆಲ್ಲ ಈ ಸಭೆಗೆ ಗೈರಾಗಿದ್ದಾರೆ. ವಾಣಿಜ್ಯ ಕಟ್ಟಡಗಳಿಗೆ ಭೇಟಿ ನೀಡುವುದಷ್ಟೇ ಅವರ ಕೆಲಸವೇ? ಎಂದು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಖಾರವಾಗಿ ಪ್ರಶ್ನಿಸಿದರು.

ಆಸ್ಪತ್ರೆಗಳ ಬಳಿ ಥರ್ಮಕೋಲ್ ಬೌಲ್‌ಗಳು ಬಿದ್ದಿರುತ್ತವೆ. ಸ್ಯಾನಿಟರಿ ಪ್ಯಾಡ್‌ಗಳನ್ನು ಸೂಕ್ತವಾಗಿ ವಿಲೇವಾರಿ ಮಾಡುತ್ತಿಲ್ಲ ಎಂದು ಸುಧಾಕರ್ ತಿಳಿಸಿದರು. ಪ್ರೊ.ವೆಂಕಟರಮಣ ಮಾತನಾಡಿ, ಸ್ವಚ್ಛತೆ ಹಾಗೂ ಕಸ ವಿಲೇವಾರಿ ಬಗ್ಗೆ ಶಾಲಾ–ಕಾಲೇಜುಗಳಲ್ಲಿ ಹೆಚ್ಚು ಅರಿವು ಮೂಡಿಸಬೇಕಿದೆ ಎಂದರು. ಸಂಶೋಧಕ ಪ್ರಭಾಕರನ್, ಅಡುಗೆ ಮನೆ ತ್ಯಾಜ್ಯವನ್ನು ಮೂಲದಲ್ಲೇ ವಿಲೇವಾರಿ ಮಾಡಿ ಗೊಬ್ಬರ ಮಾಡುವ ನಿಟ್ಟಿನಲ್ಲಿ ಪಾಲಿಕೆ ಗಮನಹರಿಸಬೇಕಿದೆ. ಹೆಚ್ಚು ಪ್ಲಾಸ್ಟಿಕ್ ಸಂಗ್ರಹ ಮಾಡಿದವರಿಗೆ ವಾರ್ಡ್‌ವಾರು ಬಹುಮಾನ ನೀಡುವ ಮೂಲಕ ಪ್ರೋತ್ಸಾಹಿಸಿ ಎಂದು ಸಲಹೆ ನೀಡಿದರು.

**ಸ್ವಚ್ಛತೆ ನಿರಂತರ:** ಮೇಯರ್ ಶಿವಕುಮಾರ್ ಮಾತನಾಡಿ, ಸ್ವಚ್ಛ ಸರ್ವೇಕ್ಷಣೆಯಲ್ಲಿ ಮೈಸೂರು 2014, 2015ರಲ್ಲಿ ನಂಬರ್ ಒನ್ ಸ್ಥಾನ ಪಡೆದಿತ್ತು. ನಂತರದ ವರ್ಷಗಳಲ್ಲಿ 3, 5ನೇ ಸ್ಥಾನಕ್ಕೆ ಕುಸಿಯಿತು. ಜನರಲ್ಲಿ ಸ್ವಚ್ಛತೆ ಅರಿವು ಮೂಡಬೇಕು. ಸ್ಪರ್ಧೆಗಾಗಿ ಮಾತ್ರವಲ್ಲದೆ ಸ್ವಚ್ಛತೆ ಎಂಬುದು ನಮ್ಮ ಜೀವನದ ಭಾಗವಾಗಬೇಕು. ಪ್ಲಾಸ್ಟಿಕ್ ಮರುಬಳಕೆಗೆ ಪಾಲಿಕೆ ಪಣತೊಟ್ಟಿದೆ. ಜೊತೆಗೆ ಪ್ರಾಣಿಗಳ ತ್ಯಾಜ್ಯವನ್ನು ಸೂಕ್ತವಾಗಿ ವಿಲೇವಾರಿ ಮಾಡಲು ಯೋಜನೆ ರೂಪಿಸಲಾಗಿದೆ. ಮೈಸೂರಿಗೆ ಉತ್ತಮ ಅಂಕ ಸಿಗುವುದಕ್ಕಾಗಿ ಸಾರ್ವಜನಿಕರ ಪ್ರತಿಕ್ರಿಯೆ ಮುಖ್ಯವಾಗಿದೆ ಎಂದು ಮನವಿ ಮಾಡಿದರು.

ಉಪ ಮೇಯರ್ ರೂಪಾ, ಪಾಲಿಕೆಯ ಉಪ ಆಯುಕ್ತ ಸೋಮಶೇಖರ್, ಆರೋಗ್ಯಾಧಿಕಾರಿ ಡಾ.ನಾಗರಾಜು, ದರ್ಶನ್, ಸುರೇಶ್ ಕುಮಾರ್ ಜೈನ್, ಸ್ವಚ್ಛ ಸರ್ವೇಕ್ಷಣೆಯ ಮೈಸೂರು ರಾಯಭಾರಿ ಫಾಲ್ಕಿಯಾ ಖಾನ್ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

### ಪ್ಲಾಸ್ಟಿಕ್ ಮಾರಾಟ ತಡೆಯುವುದಲ್ಲ; ಉತ್ಪಾದನೆ ಹತ್ತಿಕ್ಕಿ

ಸ್ವಚ್ಛತೆಗಾಗಿ ಕೋಟ್ಯಂತರ ರೂ. ವ್ಯಯಿಸಿದರೂ ನಿರೀಕ್ಷಿತ ಫಲ ದಕ್ಕಿಲ್ಲ. ಇನ್ನೂ ಪ್ಲಾಸ್ಟಿಕ್ ಬಳಕೆಗೆ ಕಡಿವಾಣ ಹಾಕಲು ಸಾಧ್ಯವಾಗಿಲ್ಲ. ಮಳಿಗೆ ಹಾಗೂ ಗೋಡೌನ್‌ಗಳ ಮೇಲೆ ದಾಳಿ ನಡೆಸಿ, ಪ್ಲಾಸ್ಟಿಕ್ ವಶಪಡಿಸಿಕೊಳ್ಳುವುದರಿಂದ ಪ್ರಯೋಜನವಾಗದು. ಬದಲಾಗಿ ಪ್ಲಾಸ್ಟಿಕ್ ವಸ್ತುಗಳನ್ನು ಉತ್ಪಾದನೆ ಮಾಡುವ ಘಟಕಗಳನ್ನೇ ಸ್ಥಗಿತಗೊಳಿಸಬೇಕು ಎಂದು ಸಿಎಫ್‌ಟಿಆರ್‌ಐ ಬಡಾವಣೆ ನಿವಾಸಿಗಳ ಸಂಘದ ಪ್ರತಿನಿಧಿ ಶಂಕರ್‌ರಾವ್ ಆಗ್ರಹಿಸಿದರು. ದಸರಾ ವೇಳೆಗೆ ಚಾಮುಂಡಿಬೆಟ್ಟ ಪ್ಲಾಸ್ಟಿಕ್ ಮುಕ್ತವಾಗಿರಬೇಕು ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಅಧ್ಯಕ್ಷರು ಸೂಚನೆ ನೀಡಿದ್ದಾರೆ. ಆದರೆ ನೀರಿನ ಬಾಟಲಿ ಹಾಗೂ ಪ್ಲಾಸ್ಟಿಕ್ ವಸ್ತುಗಳು ಚಾಮುಂಡಿಬೆಟ್ಟಕ್ಕೆ ಕಂಟಕವಾಗಿದೆ. ಇದನ್ನು ತಡೆಯುವ ನಿಟ್ಟಿನಲ್ಲಿ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು ಎಂದು ಶ್ರೀರಾಂಪುರದ ಅರುಣ್‌ಕುಮಾರ್ ಸಲಹೆ ನೀಡಿದರು.

ಪ್ಲಾಸ್ಟಿಕ್ ಬಳಕೆದಾರರಿಗೂ ದಂಡ ಹಾಕುವ ಮೂಲಕ ಬಿಸಿ ಮುಟ್ಟಿಸಬೇಕು. ಇಲ್ಲವಾದರೆ ಪ್ಲಾಸ್ಟಿಕ್ ನಿಯಂತ್ರಣ ಅಸಾಧ್ಯ. ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲೇ ಹೆಚ್ಚಿನ ಪ್ರಮಾಣದ ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಹೊರವಲಯದ ಬಡಾವಣೆಗಳಲ್ಲಿ ಯಾವ ಸ್ಥಳೀಯ ಸಂಸ್ಥೆ ವತಿಯಿಂದಲೂ ಕಸ ಸಂಗ್ರಹಿಸುವ ಕೆಲಸವಾಗುತ್ತಿಲ್ಲ. ಪರಿಣಾಮ ರಿಂಗ್ ರೋಡ್ ಇಕ್ಕೆಲಗಳಲ್ಲಿ ತ್ಯಾಜ್ಯವನ್ನು ರಾಶಿ ಹಾಕಲಾಗುತ್ತಿದೆ. ಇದು ಪರಿಹಾರ ಕಾಣದ ಸಮಸ್ಯೆಯಾಗಿ ಉಳಿದಿದೆ. ಇನ್ನು ಸ್ವಚ್ಛತೆ ಬಗ್ಗೆ ಅತೀವ ಕಾಳಜಿ ಹೊಂದಿರುವವರನ್ನು ರಾಯಭಾರಿಯಾಗಿ ನಿಯೋಜಿಸಿದರೆ ಅನುಕೂಲ ಎಂದು ಅಭಿಪ್ರಾಯಿಸಿದರು.

### ಮೈಗ್ರಾಪ ಪ್ರತಿಭಟನೆ; ಪ್ಲಾಸ್ಟಿಕ್ ನಿಯಂತ್ರಿಸದ್ದಕ್ಕೆ ಆಕ್ರೋಶ

ಸಭೆ ಆರಂಭವಾಗುತ್ತಿದ್ದಂತೆ ಮೈಸೂರು ಗ್ರಾಹಕರ ಪರಿಷತ್(ಮೈಗ್ರಾಪ) ಸದಸ್ಯರು ಎದ್ದುನಿಂತು ಭಿತ್ತಿಪತ್ರ ಪ್ರದರ್ಶಿಸಿ, ಪ್ಲಾಸ್ಟಿಕ್ ಬಳಕೆ ತಡೆಯುವಲ್ಲಿ ಪಾಲಿಕೆ ವಿಫಲವಾಗಿದೆ ಎಂದು ಪ್ರತಿಭಟಿಸಿದರು. ದಿಢೀರ್ ಪ್ರತಿಭಟನೆಯಿಂದ ಸಭೆಯಲ್ಲಿದ್ದವರು ಅವಕ್ಕಾದರು. ಮನೆ ಮನೆ ಕಸ ಸಂಗ್ರಹಣೆ ಸಮರ್ಪಕವಾಗಿ ನಡೆಯುತ್ತಿಲ್ಲ. ಪ್ಲಾಸ್ಟಿಕ್ ಬಳಕೆಗೆ ಕಡಿವಾಣ ಹಾಕುವಲ್ಲೂ ಪಾಲಿಕೆ ವಿಫಲವಾಗಿದೆ. ಕೆಲವರು ಕಸವನ್ನು ರಸ್ತೆಯಲ್ಲೇ ಹಾಕುತ್ತಿದ್ದಾರೆ. ಆದರೂ ಪಾಲಿಕೆ ಸಂಪೂರ್ಣ ನಿರ್ಲಕ್ಷ್ಯ ವಹಿಸಿದೆ. ಅಂತಹವರ ವಿರುದ್ಧ ಯಾವುದೇ ಕ್ರಮ ವಹಿಸುತ್ತಿಲ್ಲ. ಪರಿಣಾಮ ಕಸದ ಸಮಸ್ಯೆ ಬಿಗಡಾಯಿಸುತ್ತಲೇ ಇದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಆರೋಗ್ಯಾಧಿಕಾರಿ ಡಾ.ನಾಗರಾಜು ಪ್ರತಿಕ್ರಿಯಿಸಿ, ಮನೆ ಮನೆ ಕಸ ಸಂಗ್ರಹಣೆ ಪರಿಣಾಮಕಾರಿಯಾಗಿ ನಡೆದಿದೆ. ಆದಾಗ್ಯೂ ಈ ಸಂಬಂಧ ಸೂಕ್ತ ಸುಧಾರಣಾ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

### ಭಾರತ್ ಕೋಜಾನೊ ರಸಪ್ರಶ್ನೆ ಸ್ಪರ್ಧೆ

ಮೈಸೂರು, ಆ. 18– ಭಾರತ ವಿಕಾಸ ಪರಿಷದ್, ಭಾರದ್ವಾಜ ಶಾಖೆ, ಮೈಸೂರು ವತಿಯಿಂದ ವಿದ್ಯಾರ್ಥಿಗಳಿಗಾಗಿ ಭಾರತ್ ಕೋಜಾನೊ ರಸಪ್ರಶ್ನೆ ಸ್ಪರ್ಧೆ ಹಾಗೂ ರಾಷ್ಟ್ರೀಯ ಸಮೂಹ ಗಾಯನ ಸ್ಪರ್ಧೆಗಳನ್ನು ಆ. 26 ರಂದು ಬೆಳಗ್ಗೆ 10 ಗಂಟೆಗೆ ಲಕ್ಷ್ಮೀಪುರಂನಲ್ಲಿರುವ ಗೋಪಾಲ ಸ್ವಾಮಿ ಶಿಶು ವಿಹಾರ ವಿದ್ಯಾಸಂಸ್ಥೆ ಆವರಣದಲ್ಲಿ ಆಯೋಜಿಸಲಾಗಿದೆ. ನೋಂದಣಿಗೆ ಮೊ. 8618234832, 9449324348 ಸಂಪರ್ಕಿಸಬಹುದು.

### ಇಂದು ವಿಶ್ವ ಛಾಯಾಗ್ರಹಣ ದಿನಾಚರಣೆ

ಮೈಸೂರು, ಆ.18– ಮೈಸೂರು ಪತ್ರಿಕಾ ಛಾಯಾಗ್ರಾಹಕರ ಸಂಘದ ವತಿಯಿಂದ ವಿಶ್ವ ಛಾಯಾಗ್ರಹಣ ದಿನಾಚರಣೆ ಆಚರಿಸಲಾಗುತ್ತಿದ್ದು, ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರು ಅರಮನೆ ಆವರಣದಲ್ಲಿ ಶನಿವಾರ ಬೆಳಗ್ಗೆ 9 ಗಂಟೆಗೆ ಫೋಟೋ ಅನಾವರಣ ಮಾಡುವ ಮೂಲಕ ಉದ್ಘಾಟನೆ ನೆರವೇರಿಸಲಿದ್ದಾರೆ. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಛಾಯಾಗ್ರಾಹಕರ ಸಂಘದ ಹಂಗಾಮಿ ಅಧ್ಯಕ್ಷ ಎಸ್.ಆರ್.ಮಧುಸೂದನ್, ಪ್ರಧಾನ ಕಾರ್ಯದರ್ಶಿ ಹಂಪಾ ನಾಗರಾಜ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

### 12 ಕ್ಷೇತ್ರ ಶಿಕ್ಷಣಾಧಿಕಾರಿಗಳ ವರ್ಗಾವಣೆ

ಮೈಸೂರು, ಆ.18(ಎಸ್‌ಪಿಎನ್)– ಶಾಲಾ ಶಿಕ್ಷಣ ಇಲಾಖೆಯ ವಿವಿಧೆಡೆ ಕರ್ತವ್ಯ ನಿರ್ವಹಿಸುತ್ತಿದ್ದ 12ಕ್ಕೂ ಹೆಚ್ಚು ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ವರ್ಗಾವಣೆಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಮೈಸೂರು ಹೆಚ್.ಡಿ.ಕೋಟೆ ತಾಲೂಕಿನ ಬಿಇಓ ಎಂ.ಉದಯಕುಮಾರ್ ಅವರನ್ನು ಕೊಡಗಿನ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಹಿರಿಯ ಉಪನ್ಯಾಸಕರ ಹುದ್ದೆಗೆ ವರ್ಗಾಯಿಸಿದ್ದು, ಈ ಜಾಗಕ್ಕೆ ವಿಜಯಪುರ ಜಿಲ್ಲೆಯ ಚಡಚಣ ತಾಲೂಕು ಬಿಇಓ ಎಂ.ಮಾರಯ್ಯ ಅವರನ್ನು ವರ್ಗಾವಣೆಗೊಳಿಸಿದೆ. ಹಾಸನ, ಕೊಡಗು, ಚಾಮರಾಜನಗರ, ಮಂಡ್ಯ ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧೆಡೆಗೆ ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿದೆ.

## ಆ.22ರಂದು ಶ್ರೀ ವೀರಭದ್ರೇಶ್ವರ ಸ್ವಾಮಿ ಜನ್ಮೋತ್ಸವ; ಮಹಾರಥೋತ್ಸವ



ಮೈಸೂರು, ಆ.18– ಮೈಸೂರಿನ ಕೆ.ಆರ್. ಮೊಹಲ್ಲಾ, ಡಿ.ಬನುಮಯ್ಯ ರಸ್ತೆಯ ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಾಲಯದಲ್ಲಿ ಆ.22ರಂದು ಶ್ರೀ ವೀರಭದ್ರೇಶ್ವರಸ್ವಾಮಿ ಜನ್ಮೋತ್ಸವ ಹಾಗೂ ಮಹಾರಥೋತ್ಸವ ಜರುಗಲಿದೆ.

ಅಂದು ಬೆಳಗ್ಗೆ 6ಕ್ಕೆ ಪುಣ್ಯಾಹ ಹೋಮ, ಶ್ರೀ ರಥಕ್ಕೆ ಬಲಿಪೂಜೆ, ಶ್ರೀ ಗಂಗಾಪೂಜೆ, ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಭದ್ರಕಾಳಮ್ಮನವರಿಗೆ ತೈಲಾಭಿಷೇಕ, ಶ್ರೀ ಗಣಪತಿಪೂಜೆ, ಶ್ರೀ ರುದ್ರಕಳಶ ಸ್ಥಾಪನೆ, ಪೂರ್ವಕ, ಮಹಾರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಅಷ್ಟೋತ್ತರ, ಸಹಸ್ರನಾಮ ರಾಜೋಪಚಾರ ನೆರವೇರಲಿದೆ. ಬೆಳಗ್ಗೆ 10ಕ್ಕೆ ಬೇಬಿಬೆಟ್ಟದ ಶ್ರೀ ರಾಮಯೋಗೀಶ್ವರ ಮಠದ ಶ್ರೀ ಶಿವಬಸವ ಸ್ವಾಮೀಜಿ ಅವರನ್ನು ಶ್ರೀ ಮಂಟೇಸ್ವಾಮಿ ದೇವಸ್ಥಾನದಿಂದ ವೇದಘೋಷ, ಮಂಗಳವಾದ್ಯ, ನಂದಿಧ್ವಜ, ಕರಡಿಮೇಳ ಸಹಿತ ಉತ್ಸವದೊಂದಿಗೆ ಸ್ವಾಗತಿಸಲಾಗುವುದು. ಬೆಳಗ್ಗೆ 10.30ರಿಂದ 11.30ರ ನಡುವೆ ಅಭಿಜಿನ್ ಲಗ್ನದಲ್ಲಿ ರಥೋತ್ಸವಕ್ಕೆ ಶ್ರೀಗಳು ಚಾಲನೆ ನೀಡಲಿದ್ದಾರೆ. ಶಾಸಕ ಟಿ.ಎಸ್.ಶ್ರೀವತ್ಸ ಇನ್ನಿತರ ಅತಿಥಿಗಳು ಪಾಲ್ಗೊಳ್ಳಲಿದ್ದಾರೆ.

## ಬ್ರ್ಯಾಂಡಿಂಗ್ ಮೈಸೂರು ಸ್ಪರ್ಧೆ–2023

## ಪ್ರವಾಸೋದ್ಯಮ ಇಲಾಖೆಯಿಂದ ಪ್ರವೇಶಾತಿ ಆಹ್ವಾನ

ಮೈಸೂರು, ಆ. 18– ಪ್ರವಾಸೋದ್ಯಮ ಸಚಿವಾಲಯದ ಸ್ವದೇಶ್ ದರ್ಶನ್ 2.0 ಸಹಯೋಗದೊಂದಿಗೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮವು **"ಬ್ರ್ಯಾಂಡಿಂಗ್ ಮೈಸೂರು ಸ್ಪರ್ಧೆ–2023"**ಗೆ ಪ್ರವೇಶಾತಿಗಳನ್ನು ಆಹ್ವಾನಿಸಿದೆ.

ಮೈಸೂರಿನ ಭವ್ಯವಾದ ಅರಮನೆಗಳು, ಪ್ರವರ್ಧಮಾನಕ್ಕೆ ಬರುತ್ತಿರುವ ವನ್ಯಜೀವಿ ಅಭಯಾರಣ್ಯಗಳು ಮತ್ತು ರೋಮಾಂಚಕ ಸ್ಥಳೀಯ ಕರಕುಶಲತೆ, ರಾಜರ ಇತಿಹಾಸ, ಸೊಂಪಾದ ಜೀವವೈವಿಧ್ಯ ಮತ್ತು ಅಧಿಕೃತ ಸ್ಥಳೀಯ ಅನುಭವಗಳು ನಗರವನ್ನು ನಿಜವಾಗಿಯೂ ಅಸಾಧಾರಣವನ್ನಾಗಿ ಮಾಡುವ ಸಾಮ್ರಾಜ್ಯ. ಜಗತ್ತನ್ನು ಮೈಸೂರಿನ ಮನೆ ಬಾಗಿಲಿಗೆ ಸ್ವಾಗತಿಸುವ ಬ್ರ್ಯಾಂಡ್ ಗುರುತನ್ನು ಕಲ್ಪಿಸಿಕೊಳ್ಳಿ ಎಂದು ಸ್ಪರ್ಧಾರ್ಥಿಗಳಿಗೆ ತಿಳಿಸಲಾಗಿದೆ.

ಮೈಸೂರಿಗೆ ಸಾಮೂಹಿಕ ಪ್ರವಾಸೋದ್ಯಮ ಗುರುತನ್ನು ರೂಪಿಸಲು ಮತ್ತು ಅದರ ಜಾಗತಿಕ ಗ್ರಹಿಕೆಯನ್ನು ಪರಿವರ್ತಿಸಲು ಈ ಅಸಾಧಾರಣ ಸವಾಲನ್ನು ಸ್ವೀಕರಿಸಿ. ಮೈಸೂರಿನ ಐಕಾನಿಕ್ ಸಂಪತ್ತು ಮತ್ತು ಗುಪ್ತ ರತ್ನಗಳನ್ನು ಜಗತ್ತಿಗೆ ಅನಾವರಣಗೊಳಿಸುವ ನವೀನ ಬ್ರ್ಯಾಂಡಿಂಗ್ ಕಲ್ಪನೆಗಳನ್ನು ಹಂಚಿಕೊಳ್ಳಲು ಸಾರ್ವಜನಿಕರನ್ನು ಆಹ್ವಾನಿಸುತ್ತೇವೆ. ಮೈಸೂರಿನ ವೈಭವವನ್ನು ಹೇಳಲು, ಮೈಸೂರಿನ ಪ್ರವಾಸೋದ್ಯಮ ನಿರೂಪಣೆಯ ಭವಿಷ್ಯವನ್ನು ರೂಪಿಸಲು ನಿಮ್ಮ ಸೃಜನಶೀಲತೆಯನ್ನು ಪ್ರದರ್ಶಿಸಿ ಎಂದು ಇಲಾಖೆ ತಿಳಿಸಿದೆ.

ಸ್ಪರ್ಧೆಗೆ ಇಂಗ್ಲಿಷ್ ಮತ್ತು ಕನ್ನಡ ಎರಡರಲ್ಲೂ ನಮೂದುಗಳನ್ನು ಸಲ್ಲಿಸಬಹುದು. ನಿಮ್ಮ ಸಲ್ಲಿಕೆಯ ಥೀಮ್ ಅನ್ನು ಒಂದು, ಎರಡು, ಮೂರು ಅಥವಾ ಕೆಳಗೆ ಪಟ್ಟಿ ಮಾಡಲಾದ ಕೆಳಗಿನ ನಾಲ್ಕು ಅಂಶಗಳಲ್ಲಿ ಸೆರೆಹಿಡಿಯಬೇಕು ಎಂದು ಹೇಳಲಾಗಿದೆ.

**ಪ್ಯಾಕೇಜ್ ಒಂದು:** ಮೈಸೂರಿನ ರಾಜ ವೈಭವ, ಪರಿಸರ ಸಾಮರಸ್ಯ, ಮತ್ತು ಸ್ಥಳೀಯ ಕಲೆಗಾರಿಕೆಯನ್ನು ಸಂಕೇತಿಸುವ ಆಕರ್ಷಕ ಲೋಗೋ, ಮೈಸೂರಿಗಾಗಿ ಹಂಬಲವನ್ನು ಹುಟ್ಟು ಹಾಕುವ ಆಕರ್ಷಕ ಟ್ಯಾಗ್‌ಲೈನ್, ಮೈಸೂರಿನ ಅದ್ಭುತಗಳ ಸಾಮ್ರಾಜ್ಯಕ್ಕೆ ಒಂದು ಅಸಾಧಾರಣ ಪ್ರಯಾಣವನ್ನು ಪ್ರಾರಂಭಿಸಲು ಪ್ರಯಾಣಿಕರನ್ನು ಪ್ರೇರೇಪಿಸುವಂತಿರಬೇಕು.

**ಪ್ಯಾಕೇಜ್ ಎರಡು:** ಮೈಸೂರಿನ ಆತ್ಮಕ್ಕೆ ಮತ್ತು ಪ್ರತಿಯೊಬ್ಬ ಮೈಸೂರಿಗರಿಗೆ ಸಂಬಂಧಿಸಬಹುದಾದಂತಹ ಆತ್ಮೀಯ ಮ್ಯಾಸ್ಕಾಟ್.

**ಪ್ಯಾಕೇಜ್ ಮೂರು:** ಮೈಸೂರಿನ ಸ್ಥಳೀಯ ಕರಕುಶಲ ಮತ್ತು ಕುಶಲಕರ್ಮಿಗಳ ಉತ್ಪನ್ನಗಳ ಪ್ರಮಾಣಿತ ಬ್ರ್ಯಾಂಡಿಂಗ್ ಭಾಷೆಯೊಂದಿಗೆ ವಿನ್ಯಾಸಗೊಳಿಸಿದ ಸ್ಮಾರಕವನ್ನು ಪ್ರವಾಸಿಗರಿಗೆ ತಿಳಿಸುವುದು.

**ಪ್ಯಾಕೇಜ್ ನಾಲ್ಕು:** ಮೈಸೂರಿನಲ್ಲಿ ಭೇಟಿ ನೀಡಲು ನೆಚ್ಚಿನ ಸ್ಥಳವನ್ನು ವಿವರಿಸುವ ಬ್ಲಾಗ್. ಮೈಸೂರಿನಲ್ಲಿ ಇನ್ನೂ ಹೆಚ್ಚಿನ ಅನುಭವವಿದೆ ಎಂಬ ಸಾರವನ್ನು ಬರಹವು ಹೊರತರಬೇಕು.

**ಬಹುಮಾನದ ವಿವರ:** ಪ್ರತಿ ಪ್ಯಾಕೇಜ್‌ನ ಪ್ರಥಮ ಬಹುಮಾನ 20,000 ರೂ., ಎರಡನೇ ಬಹುಮಾನ 10,000 ರೂ., ಮೂರನೇ ಬಹುಮಾನ 5,000 ರೂ. ಎಲ್ಲಾ ಶಾರ್ಟ್‌ಲಿಸ್ಟ್ ಮಾಡಲಾದ ನಮೂದುಗಳು ತಮ್ಮ ಆಲೋಚನೆ ಗಳನ್ನು ನಗರದ ಅಧಿಕಾರಿಗಳಿಗೆ ಪ್ರಸ್ತುತಪಡಿಸಲು ಅವಕಾಶವನ್ನು ನೀಡಲಾಗುತ್ತದೆ. ವಿಜೇತ ನಮೂದುಗಳನ್ನು ಕರ್ನಾಟಕ ಪ್ರವಾಸೋದ್ಯಮ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ. ಎಲ್ಲಾ ಭಾಗವಹಿಸುವವರು ಪ್ರಾಧಿಕಾರದಿಂದ ಭಾಗವಹಿಸುವಿಕೆಯ ಡಿಜಿಟಲ್ ಪ್ರಮಾಣಪತ್ರವನ್ನು ಸ್ವೀಕರಿಸುತ್ತಾರೆ.

**ಸಲ್ಲಿಕೆ ಅಗತ್ಯತೆಗಳು:** (ಬ್ಲಾಗ್ ಹೊರತುಪಡಿಸಿ) ಭಾಗವಹಿಸಿದ ಪ್ಯಾಕೇಜ್‌ಗಳ ಸಂಖ್ಯೆಯನ್ನು ಅವಲಂಬಿಸಿ ಸಲ್ಲಿಕೆಯು A 5 ಶೀಟ್‌ಗಳಲ್ಲಿರುತ್ತದೆ. ಪ್ರತಿ ಸಲ್ಲಿಕೆಯು 200 ಪದಗಳ ಸಂಕ್ಷಿಪ್ತ ವಿವರಣೆಯನ್ನು ಒಳಗೊಂಡಿರಬೇಕು, ವಿನ್ಯಾಸಗಳು ಮೈಸೂರನ್ನು ಸಂಪೂರ್ಣವಾಗಿ ಭೇಟಿ ನೀಡಲೇಬೇಕಾದ ತಾಣವಾಗಿ ಹೇಗೆ ಪ್ರದರ್ಶಿಸುತ್ತವೆ ಮತ್ತು ವಿನ್ಯಾಸದ ಅಂಶಗಳು ಮೈಸೂರಿಗೆ ಒಂದು ಸಮ್ಮಿಶ್ರ ಬ್ರ್ಯಾಂಡ್ ಗುರುತಾಗಿ ಹೇಗೆ ಒಟ್ಟುಗೂಡುತ್ತವೆ ಎಂಬುದನ್ನು ವಿವರಿಸಿರಬೇಕು.

ಶೀಟ್‌ಗಳನ್ನು ಸಲ್ಲಿಕೆಗಾಗಿ ಗರಿಷ್ಠ 10 MB ಗಾತ್ರದ PDF ಫಾರ್ಮ್ಯಾಟ್‌ಗೆ ಕಂಪೈಲ್ ಮಾಡಬೇಕಾಗುತ್ತದೆ ಮತ್ತು ಇಮೇಲ್ ಮೂಲಕ ಕಳುಹಿಸಬೇಕು. ಶೀಟ್‌ನಲ್ಲಿ ಎಲ್ಲಿಯಾದರೂ ಬರೆಯಲಾದ ಹೆಸರುಗಳು, ಅಡ್ಡಹೆಸರುಗಳು ಅಥವಾ ಕೋಡ್‌ಗಳಂತಹ ಯಾವುದೇ ಗುರುತಿನ ರೂಪವು ಅನರ್ಹತೆಗೆ ಕಾರಣವಾಗುತ್ತದೆ.

100–ಪದಗಳ ಬರವಣಿಗೆಯು ಪ್ರತ್ಯೇಕ ಹಾಳೆಯಲ್ಲಿರಬೇಕು ಮತ್ತು ಒಂದು ಸುಸಂಬದ್ಧ ಬ್ರ್ಯಾಂಡಿಂಗ್ ಅಭಿಯಾನವಾಗಿ ಅಂಶಗಳನ್ನು ಒಟ್ಟಿಗೆ ಜೋಡಿಸುವ ಸ್ಪಷ್ಟ ಮತ್ತು ತಾರ್ಕಿಕ ವಿವರಣೆಯನ್ನು ಹೊಂದಿರಬೇಕು.

ಶೀಟ್‌ಗಳನ್ನು 4 ಸೆಪ್ಟೆಂಬರ್ 2023 ರೊಳಗೆ ಕಾಂಪಿಟೇಶನ್@karnatakatourism.orgಗೆ ಕಳುಹಿಸಬೇಕು. ಗಡುವನ್ನು ಮೀರಿದ ಯಾವುದೇ ಪ್ರವೇಶವನ್ನು ಯಾವುದೇ ಸಂದರ್ಭದಲ್ಲಿ ಪರಿಗಣಿಸಲಾಗುವುದಿಲ್ಲ. ಕೈಯಿಂದ ಮಾಡಿದ ವಿನ್ಯಾಸಗಳ ಸಂದರ್ಭದಲ್ಲಿ, ಸ್ಕ್ಯಾನ್ ಮಾಡಿದ ಶೀಟ್‌ಗಳು 3000px X 2200px ರೆಸಲ್ಯೂಶನ್ ಮತ್ತು ಕನಿಷ್ಠ 300 DPI ಆಗಿರಬೇಕು. ಶಾರ್ಟ್‌ಲಿಸ್ಟ್ ಮಾಡಲಾದ ನಮೂದುಗಳನ್ನು ಮಾತ್ರ ಶಾರ್ಟ್‌ಲಿಸ್ಟ್ ಮಾಡಿದ ನಂತರ ತೆರೆದ ಫೈಲ್‌ಗಳನ್ನು ಸಲ್ಲಿಸಲು ಕೇಳಲಾಗುತ್ತದೆ.

Competitions@karnatakatourism.orgನಲ್ಲಿ ಇಮೇಲ್ ಕಳುಹಿಸುವ ಮೂಲಕ ನೋಂದಾಯಿಸಿಕೊಳ್ಳಿ. ನಿಮ್ಮ ಪೂರ್ಣ ಹೆಸರು, ವಯಸ್ಸು ಮೊಬೈಲ್ ಸಂಖ್ಯೆ, ಪ್ಯಾಕೇಜ್, ವಾಸದ ವಿಳಾಸ ಮತ್ತು ವೃತ್ತಿ/ವಿದ್ಯಾರ್ಥಿ ವಿವರಗಳನ್ನು ಸೇರಿಸಿ. ನೋಂದಾಯಿಸಲು ಕೊನೆಯ ದಿನ ಆಗಸ್ಟ್ 31 ಆಗಸ್ಟ್, ಅರ್ಜಿ ಸಲ್ಲಿಕೆ ಕೊನೆಯ ದಿನ ಸೆಪ್ಟೆಂಬರ್ 4 ಎಂದು ಪ್ರವಾಸೋದ್ಯಮ ಇಲಾಖೆಯ ವೆಬ್‌ಸೈಟ್‌ನಲ್ಲಿ ತಿಳಿಸಲಾಗಿದೆ.

# ಜಲ ವಿವಾದ; ಸರ್ವಪಕ್ಷ ಸಭೆ ಕರೆಯುವ ಚಿಂತನೆ

- ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾಹಿತಿ
- ನ್ಯಾಯಾಲಯದ ಆದೇಶ ಗೌರವಿಸಿ ತಮಿಳ್ನಾಡಿಗೆ ನೀರು

ಬೆಂಗಳೂರು, ಆ. 18(ಕೆಂಶಿ)– ಕಾವೇರಿ ಹಾಗೂ ಮಹದಾಯಿ ಜಲ ವಿವಾದಕ್ಕೆ ಸಂಬಂಧಿಸಿದಂತೆ ಸರ್ವಪಕ್ಷಗಳ ನಾಯಕರ ಸಭೆ ಕರೆಯುವ ಬಗ್ಗೆ ಚಿಂತನೆ ನಡೆದಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುತ್ತಿರುವುದಕ್ಕೆ ತೀವ್ರ ವಿರೋಧ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ಸರ್ವಪಕ್ಷಗಳ ಸಭೆ ಕರೆಯುವ ಮಾತನಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಮೈತ್ರಿ ಉದ್ದೇಶದಿಂದ ತಮಿಳುನಾಡಿಗೆ ನೀರು ಹರಿಸಿಲ್ಲ. ನ್ಯಾಯಾಲಯದ ಆದೇಶ ಗೌರವಿಸಿ, ಅದನ್ನು ಪಾಲಿಸಿದ್ದೇವೆ. ಜೊತೆಗೆ ನಮ್ಮ ರೈತರ ಹಿತವನ್ನು ಕಾಯಲು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ತನ್ನ ನಿರ್ಧಾರ ಪುನರ್‌ಪರಿಶೀಲಿಸುವಂತೆ ಮನವಿ ಮಾಡಿದ್ದೇವೆ ಎಂದರು.

ಕಾವೇರಿ ವಿಚಾರದಲ್ಲಿ ನಾವು ಕಾನೂನು, ಸಂವಿಧಾನ ಹಾಗೂ ಕೋರ್ಟ್ ಆದೇಶಕ್ಕೆ ಗೌರವ ನೀಡಬೇಕು. ಈ ಹಿಂದೆ ಇದ್ದ ಸರ್ಕಾರಗಳು ನ್ಯಾಯಾಲಯದ ಆದೇಶಗಳನ್ನು ಇದೇ ರೀತಿ ಪಾಲಿಸಿವೆ. ನೀರು ಬಿಡುಗಡೆ ಮಾಡಿವೆ. ಆದರೆ ನಮ್ಮ ರೈತರ ಹಿತ ಕಾಪಾಡುವುದು ನಮ್ಮ ಮೇಲಿರುವ ದೊಡ್ಡ ಜವಾಬ್ದಾರಿ. ನೀರು ಬಿಟ್ಟಿರುವುದನ್ನು ಪ್ರಶ್ನಿಸಿ ವಿರೋಧ ಮಾಡುತ್ತಾರೆ. ಅದು ಸಹಜ. ಸರ್ಕಾರ ಇಂತಹ ಸಮಯದಲ್ಲಿ ಸಮತೋಲಿತವಾಗಿ ಕೆಲಸ ಮಾಡಬೇಕಿದೆ.

ಮಳೆ ಕಡಿಮೆ ಆಗಿರುವುದರಿಂದ ಕೃಷಿಗೆ ಮಾತ್ರವಲ್ಲ, ಕುಡಿಯಲು ನೀರಿಲ್ಲ. ಇದೇ ಕಾರಣಕ್ಕೆ ಪ್ರಾಧಿಕಾರಕ್ಕೆ ತನ್ನ ನಿರ್ಧಾರ ಪುನರ್ ಪರಿಶೀಲಿಸಲು ಮನವಿ ಮಾಡಿದ್ದೇವೆ ಎಂದು ಹೇಳಿದರು.



ಈ ಹಿಂದೆ ಇಂತಹ ಪರಿಸ್ಥಿತಿಯಲ್ಲಿ ಜನತಾದಳ ಹಾಗೂ ಬಿಜೆಪಿ ಸರ್ಕಾರಗಳು ಎಷ್ಟು ನೀರು ಬಿಟ್ಟಿದ್ದವು ಎಂಬ ಅಂಕಿ ಅಂಶ ನೀಡಬಲ್ಲೆ. ಆದರೆ ಈ ವಿಚಾರದಲ್ಲಿ ರಾಜಕೀಯ ಮಾಡಲು ಇಷ್ಟವಿಲ್ಲ.

ಕಾವೇರಿ, ಮಹದಾಯಿ, ಕೃಷ್ಣಾ ವಿಚಾರದಲ್ಲಿ ಸರ್ವಪಕ್ಷ ಸಭೆ ಕರೆಯಲು ಆಲೋಚಿಸಿದ್ದೇವೆ. ಕೇಂದ್ರದಲ್ಲಿ ಬಲಿಷ್ಠ ಸರ್ಕಾರ ಅಧಿಕಾರದಲ್ಲಿದ್ದರೂ ಮಹದಾಯಿ, ಕೃಷ್ಣ ವಿಚಾರ ಇತ್ಯರ್ಥವಾಗಿಲ್ಲ. ಈ ಬಗ್ಗೆಯೂ ಸರ್ವಪಕ್ಷ ಸಭೆಯಲ್ಲಿ ಚರ್ಚೆ ಮಾಡುತ್ತೇವೆ ಎಂದು ತಿಳಿಸಿದರು.

ಎನ್‌ಇಪಿ ರದ್ದು ವಿಚಾರವಾಗಿ ಕೇಳಿದ ಪ್ರಶ್ನೆಗೆ, ನಾವು ಎನ್‌ಇಪಿ ಜಾರಿ ಆರಂಭದಲ್ಲೇ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ರದ್ದು ಮಾಡುವುದಾಗಿ ಹೇಳಿದ್ದೆವು. ಈಗ ಆ ಬಗ್ಗೆ ಚಿಂತನೆ ಮಾಡಿದ್ದೇವೆ. ಬಿಜೆಪಿ ಸರ್ಕಾರ ಬಹಳ ತರಾತುರಿಯಲ್ಲಿ ಮೂಲ ಸೌಕರ್ಯ ಇಲ್ಲದೆ ಇದನ್ನು ಜಾರಿಗೆ ತಂದಿತ್ತು. ಈ ಎನ್‌ಇಪಿಯನ್ನು ಕೇವಲ ಕರ್ನಾಟಕದಲ್ಲಿ ಮಾತ್ರ ಯಾಕೆ ಜಾರಿ ಮಾಡಿದರು?

ಬಿಜೆಪಿ ಸರ್ಕಾರ ಇರುವ ಮಧ್ಯಪ್ರದೇಶ, ಉತ್ತರ ಪ್ರದೇಶ, ಹರ್ಯಾಣ ಹಾಗೂ ಗುಜರಾತ್‌ನಲ್ಲಿ ಯಾಕೆ ಮಾಡಲಿಲ್ಲ? ನಮ್ಮಲ್ಲಿರುವ ಶಿಕ್ಷಣ ವ್ಯವಸ್ಥೆ ಸರಿ ಇರಲಿಲ್ಲವೇ? ಇಡೀ ಪ್ರಪಂಚದಲ್ಲಿನ ಜನ ಬೆಂಗಳೂರನ್ನು ಐಟಿ, ಶಿಕ್ಷಣ ರಾಜಧಾನಿ, ಸಿಲಿಕಾನ್ ವ್ಯಾಲಿ ಎಂದು ಕರೆಯುತ್ತಾರೆ.

ನಮ್ಮಲ್ಲಿರುವ ಶಿಕ್ಷಣ ಗುಣಮಟ್ಟ ಇದಕ್ಕೆ ಕಾರಣ. ಎನ್‌ಇಪಿಯಲ್ಲಿ ಉತ್ತಮ ಅಂಶ ಇದ್ದರೆ ಅದನ್ನು ಪರಿಗಣಿಸುತ್ತೇವೆ. ಇದು ಬಿಜೆಪಿಯ ರಾಜಕೀಯ ಅಜೆಂಡಾ. ಎನ್‌ಇಪಿ ಎಂದರೆ ನಾಗಪುರ ಶಿಕ್ಷಣ ನೀತಿ ಆಗಿದೆ. ಶಿಕ್ಷಣ ರಾಜ್ಯ ವ್ಯಾಪ್ತಿ ವಿಚಾರವೇ ಹೊರತು ಕೇಂದ್ರ ಸರ್ಕಾರದ ವಿಚಾರವಲ್ಲ ಎಂದು ತಿಳಿಸಿದರು.

ಬೇರೆ ಪಕ್ಷದವರು ಕಾಂಗ್ರೆಸ್ ಸೇರುವ ವಿಚಾರವಾಗಿ ಕೇಳಿದಾಗ, ಪಕ್ಷದ ಮತ ಪ್ರಮಾಣ ಹೆಚ್ಚಿಸಿಕೊಳ್ಳಿ ಎಂದು ನಮ್ಮ ಕಾರ್ಯಕರ್ತರಿಗೆ ಸಂದೇಶ ನೀಡಿದ್ದೇವೆ. ಹೀಗಾಗಿ ಸ್ಥಳೀಯ ಮಟ್ಟದಲ್ಲಿ ಕಾರ್ಯಕರ್ತರ ಸೇರ್ಪಡೆ ಮಾಡಿಕೊಳ್ಳಲು ತಿಳಿಸಿದ್ದೇನೆ. ಉಳಿದಂತೆ ನನ್ನವರೆಗೂ ಯಾರದೇ ಪಕ್ಷ ಸೇರ್ಪಡೆ ವಿಚಾರ ಬಂದಿಲ್ಲ ಎಂದು ತಿಳಿಸಿದರು.

ನೀವು ಬೇರೆ ಪಕ್ಷದ ಶಾಸಕರ ಜೊತೆ ಖುದ್ದಾಗಿ ಮಾತನಾಡಿದ್ದೀರಿ ಎಂಬ ಮಾತಿದೆಯಲ್ಲ ಎಂದು ಕೇಳಿದಾಗ, ನಿಮ್ಮ ಮಾಹಿತಿ ಸಂಪೂರ್ಣ ಸುಳ್ಳು. ಬಿಜೆಪಿಯವರು ಯಾರ ಜೊತೆ ಮಾತನಾಡಿದ್ದಾರೆ ಎಂಬುದರ ಬಗ್ಗೆ ನೀವು ಚರ್ಚೆ ಮಾಡುತ್ತಿಲ್ಲ.

ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದರೆ ಯಾರಿಗೂ ಗೊತ್ತಾಗುವುದಿಲ್ಲ ಎಂದು ಅವರು ಭಾವಿಸಿದ್ದಾರೆ. ಅವರು ಕಲಿಸಿ ಕೊಟ್ಟಿರುವ ಪಾಠ ನಮಗೆ ನೆನಪಿದೆ. ಜನ ನಮಗೆ 135 ಸಂಖ್ಯಾಬಲ ನೀಡಿದ್ದಾರೆ. ನಾವು ಜನರಿಗೆ ಕೊಟ್ಟ ಮಾತು ಉಳಿಸಿಕೊಳ್ಳಬೇಕು.

ಬಿಜೆಪಿ ಹಾಗೂ ದಳದವರಿಗೆ ನೆಮ್ಮದಿ ಇಲ್ಲ. ಅದಕ್ಕೆ ಅವರೇ ಔಷಧಿ ಕಂಡುಕೊಳ್ಳಬೇಕು. ಗೆದ್ದಿರುವವರು, ಸೋತಿರುವವರು ಮಾತನಾಡುತ್ತಿದ್ದಾರೆ. ಯಾರು ಏನು ಮಾತನಾಡುತ್ತಿದ್ದಾರೆ ಎಂದು ನಾವು ಗಮನಿಸುತ್ತಿದ್ದೇವೆ. ನಾವು ಯಾರ ಮಾತಿಗೂ ಬೀಗ ಹಾಕುವುದಿಲ್ಲ ಎಂದು ತಿಳಿಸಿದರು.

ಬಿಜೆಪಿ ನಾಯಕರು ಸರ್ಕಾರ ಬೀಳಿಸುವ ಪ್ರಯತ್ನ ಮಾಡುತ್ತಿದ್ದಾರೆಯೇ ಎಂದು ಕೇಳಿದಾಗ, ತಾವು ರಾಜಕೀಯವಾಗಿ ಬದುಕಿದ್ದೇವೆ ಎಂದು ಸಾಬೀತುಪಡಿಸಲು ಅವರು ಪ್ರಯತ್ನಿಸುತ್ತಿದ್ದಾರೆ.

ಜೆಡಿಎಸ್‌ನ 13 ಶಾಸಕರು ನಿಮ್ಮ ಸಂಪರ್ಕದಲ್ಲಿದ್ದು, ಮುಂದೆ ಅವರು ನಿಮಗೆ ಬೆಂಬಲ ನೀಡಲಿದ್ದಾರೆ ಎಂಬ ಮಾಹಿತಿ ಇದೆಯಲ್ಲ ಎಂಬ ಪ್ರಶ್ನೆಗೆ, ಈ ವಿಚಾರ ನನಗೆ ಗೊತ್ತಿಲ್ಲ. ನಿಮ್ಮಿಂದಲೇ ಈಗ ಮಾಹಿತಿ ಕೇಳುತ್ತಿದ್ದೇನೆ. ನನಗೆ 224 ಶಾಸಕರು ಪರಿಚಯಸ್ಥರು. ಎಲ್ಲರ ಜತೆ ರಾಜಕೀಯವಾಗಿ ಅಲ್ಲದಿದ್ದರೂ ವೈಯಕ್ತಿಕ ಸಂಬಂಧ ಇದೆ. ಅವರ ಹೆಸರಿಗೆ ನಾವು ಧಕ್ಕೆ ಯಾಕೆ ತರೋಣ? ಎಂದರು.

ಪಕ್ಷ ಬಿಟ್ಟು ಹೋದವರು ಬಂದರೆ ಪಕ್ಷದ ಬಾಗಿಲು ತೆರೆದಿರುತ್ತದೆಯೇ ಎಂದು ಕೇಳಿದಾಗ, ರಾಜಕಾರಣದಲ್ಲಿ ಏನು ಬೇಕಾದರೂ ಆಗಬಹುದು ಎಂದರು.

40% ಕಮಿಷನ್ ವಿಚಾರ ತನಿಖೆಗೆ ನ್ಯಾ. ನಾಗಮೋಹನ್ ದಾಸ್ ಅವರ ನೇತೃತ್ವದ ಸಮಿತಿ ರಚನೆ ಬಗ್ಗೆ ಕೇಳಿದಾಗ, ಈ ವಿಚಾರವಾಗಿ ನಾನು ಏನನ್ನೂ ಹೇಳುವುದಿಲ್ಲ. ಮುಖ್ಯಮಂತ್ರಿಗಳು ಈ ಬಗ್ಗೆ ಉತ್ತರ ನೀಡಲಿದ್ದಾರೆ. ಪಾಲಿಕೆ ವ್ಯಾಪ್ತಿಯಲ್ಲಿ ತನಿಖೆಗೆ ಸಮಿತಿ ರಚನೆ ಮಾಡಿದ್ದು, ಅವರು ತನಿಖೆ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಮೈಸೂರು ಮಿತ್ರ ಶನಿವಾರ 19 ಆಗಸ್ಟ್ 2023

# ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಾಗಲಿ

## ಕೆಡಿಪಿ ಸಭೆಯಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ



ಮಂಡ್ಯ, ಆ.18– ಸರ್ಕಾರ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ರೂಪಿಸಿ ಅನುದಾನ ನೀಡುತ್ತಿದೆ. ಹೀಗಾಗಿ ಅಧಿಕಾರಿಗಳು ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಿಸಲು ಕ್ರಮ ವಹಿಸಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಶುಕ್ರವಾರ ಜಿಪಂ ಕಾವೇರಿ ಸಭಾಂಗಣದಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು, ಶಾಲಾ ಕ್ಲಸ್ಟರ್ ಜಿಲ್ಲೆಯಲ್ಲಿ 0–5 ಮಕ್ಕಳು ಇರುವ ಶಾಲೆಯಲ್ಲಿ ಮಕ್ಕಳಿಗೆ ಶಾಲಾ ವಾತಾವರಣ ದೊರಕಿಸುವುದು ಕಷ್ಟವಾಗುತ್ತದೆ. ಇಂತಹ ಶಾಲೆಗಳನ್ನು ಗುರುತಿಸಿ ಜನಪ್ರತಿನಿಧಿಗಳು ಹಾಗೂ ಪೋಷಕರೊಂದಿಗೆ ಚರ್ಚಿಸಿ ಮಕ್ಕಳನ್ನು ಹತ್ತಿರದ ಬೇರೆ ಶಾಲೆಗೆ ವರ್ಗಾಯಿಸಿದರೆ, ಎರಡೂ ಶಾಲೆಗೆ ಸೇರಿದಂತೆ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಬಹುದು ಹಾಗೂ ಮಕ್ಕಳಿಗೆ ಶಾಲೆಗೆ ಹೋಗಿ ಬರಲು ವೆಚ್ಚದ ವ್ಯವಸ್ಥೆ ಸಹ ಮಾಡಲಾಗುವುದು. ಈ ಬಗ್ಗೆ ಚಿಂತಿಸಲಾಗುತ್ತಿದ್ದು, ಇದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಷರತ್ತು ಹಾಗೂ ನಿಯಮಗಳನ್ನು ಕಳುಹಿಸಿಕೊಡಲಾಗುವುದು ಎಂದರು.

ಸರ್ವೇ ಮೂಲಕ ಶಾಲೆಯಿಂದ ಹೊರಗುಳಿದ ಮಕ್ಕಳು ಹಾಗೂ SATS ಅಂಕಿ ಅಂಶಗಳ ಪ್ರಕಾರ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆಯಲ್ಲಿ ಹೆಚ್ಚಿನ ವ್ಯತ್ಯಾಸವಿದ್ದು, ಶಿಕ್ಷಣ ಇಲಾಖೆ ಅಧಿಕಾರಿಗಳು ಶಾಲೆಯಿಂದ ಹೊರಕ್ಕೆ ಹೋದ ಮಕ್ಕಳು ಯಾವ ಶಾಲೆಯಲ್ಲಿ ದಾಖಲಾತಿ ಪಡೆದುಕೊಂಡಿದ್ದಾರೆ ಎಂದು ಮಾಹಿತಿ ಪಡೆದು 15 ದಿನದೊಳಗಾಗಿ ವರದಿ ನೀಡಬೇಕು. ಯಾವುದೇ ಮಗು ಶಾಲೆಯಿಂದ ಹೊರಗುಳಿಯಬಾರದು ಎಂದು ಹೇಳಿದರು.

ಸರ್ಕಾರಿ ಶಾಲೆಗಳಲ್ಲಿ ಶೌಚಾಲಯಗಳಿದ್ದು, ಬಳಕೆಗೆ ಯೋಗ್ಯವಾಗಿಲ್ಲ. ಇದರಿಂದ ಮಕ್ಕಳ ದಾಖಲಾತಿ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದಾಗ, ಸಚಿವರು ಜಿಲ್ಲೆಯ ಶಾಲೆಗಳಿಗೆ ಜಿಲ್ಲಾಧಿಕಾರಿಗಳು ಹಾಗೂ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿ ಸಣ್ಣ ಪುಟ್ಟ ದುರಸ್ತಿ ಕೆಲಸಗಳಿದ್ದಲ್ಲಿ ಸರಿಪಡಿಸಿ ಎಂದು ಸೂಚನೆ ನೀಡಿದರು. ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲಿಸಿ, ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳ ದಾಖಲಾತಿ ಹೆಚ್ಚಿಸಲು ಹೊಸ ಯೋಜನೆಗಳನ್ನು ಜಾರಿಗೆ ತರಲಾಗುವುದು. ಶಿಕ್ಷಕರು ಸಹ ಓದಿನಲ್ಲಿ ಹಿಂದಿರುವ ಮಕ್ಕಳಿಗೆ ಹೆಚ್ಚಿನ ತರಬೇತಿ ನೀಡಿ ಮುಂದೆ ತರಲು ಶ್ರಮಿಸಬೇಕು ಎಂದರು.

ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಮೂಲ ಸೌಕರ್ಯ ಕೊರತೆ ಇರುವ ಶಾಲೆಗಳಿಗೆ ಅನುದಾನ ನೀಡುವಂತೆ ಮನವಿ ಮಾಡಿದರು. ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಮಾತನಾಡಿ, ಶಾಲೆಗೆ ದಾಖಲಾಗಿ ಶಾಲೆಯಿಂದ ದೂರ ಉಳಿದ ವಿದ್ಯಾರ್ಥಿಗಳನ್ನು ಶಾಲೆಗೆ ಸೇರಿಸಲು ಸರ್ಕಾರ ವಿಶೇಷ ರೂಪರೇಷೆ ಸಿದ್ಧಪಡಿಸಬೇಕು. ಕೆಲವು ಶಾಲೆಗಳಲ್ಲಿ ಮೂಲ ಸೌಕರ್ಯಗಳ ಕೊರತೆ ಇದೆ. ಕೆಲವು ಕಡೆ ಸೌಲಭ್ಯ ಇದ್ದರೂ, ಅದರ ನಿರ್ವಹಣೆ ಸರಿಯಾಗಿ ನಡೆಯುತ್ತಿಲ್ಲ. ಕೆಲವು ಕಡೆ ಅಡುಗೆ ಕೆಲಸ, ಶೌಚಾಲಯ ಸ್ವಚ್ಛಗೊಳಿಸುವುದನ್ನು ಶಿಕ್ಷಕರೆ ಮಾಡುತ್ತಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಇವುಗಳನ್ನು ಸರಿಪಡಿಸುವಂತೆ ಸಚಿವರಿಗೆ ಮನವಿ ಸಲ್ಲಿಸಿದರು.

ಸಭೆಯಲ್ಲಿ ಶಾಸಕರಾದ ಗಣಿಗ ರವಿಕುಮಾರ್, ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ, ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್‌ಕುಮಾರ್ ಸಿಂಗ್, ಶಾಲಾ ಶಿಕ್ಷಣ ಇಲಾಖೆ ಆಯುಕ್ತ ಬಿ.ಬಿ.ಕಾವೇರಿ, ಜಿಲ್ಲಾಧಿಕಾರಿ ಡಾ.ಕುಮಾರ್, ಜಿಪಂ ಸಿಇಓ ಶೇಖ್ ತನ್ವೀರ್ ಆಸಿಫ್ ಇತರರಿದ್ದರು.

# ಮಂಡ್ಯ ಜೆಡಿಎಸ್‌ನ ಕೆಲ ಮಾಜಿ ಶಾಸಕರು ಶೀಘ್ರ ಕಾಂಗ್ರೆಸ್‌ಗೆ



ಮಂಡ್ಯ, ಆ.18– ಜಿಲ್ಲೆಯ ಜೆಡಿಎಸ್ ಪಕ್ಷದ ಕೆಲ ಮಾಜಿ ಶಾಸಕರು ಶೀಘ್ರ ಕಾಂಗ್ರೆಸ್ ಪಕ್ಷಕ್ಕೆ ಬರಲಿದ್ದು, ಎಷ್ಟು ಜನ ಬರುತ್ತಾರೆ ಎಂಬುದನ್ನು ನಾನೇ ಹೇಳುತ್ತೇನೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಶುಕ್ರವಾರ ನಗರದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಜಿಲ್ಲೆಯ ಕೆಲ ಮಾಜಿ ಶಾಸಕರು ನಮ್ಮ ಸಂಪರ್ಕದಲ್ಲಿದ್ದಾರೆ. ಮುಂದಿನ ಲೋಕಸಭಾ ಚುನಾವಣೆ ದೃಷ್ಟಿಯಿಂದ ಪಕ್ಷಕ್ಕೆ ಬರುವವರನ್ನು ನಾವು ಸ್ವಾಗತಿಸುತ್ತೇವೆ ಎಂದರು. ಬಿಜೆಪಿ ಹಾಗೂ ಜೆಡಿಎಸ್‌ನಿಂದ ಕಾಂಗ್ರೆಸ್ ಸೇರಲು ಅನೇಕರು ಇಚ್ಚಿಸಿದ್ದಾರೆ. ಹಾಲಿ, ಮಾಜಿ ಶಾಸಕರು ಕಾಂಗ್ರೆಸ್‌ಗೆ ಬರಲು ನಿರ್ಧರಿಸಿದ್ದು, ಕಾಂಗ್ರೆಸ್‌ನಿಂದ ಬಿಜೆಪಿಗೆ ಹೋದ ಕೆಲವು ಮಂದಿ ಸಹ ನಮ್ಮ ಪಕ್ಷಕ್ಕೆ ಬರಲಿದ್ದಾರೆ ಎಂದರು.

ಲೋಕಸಭಾ ಚುನಾವಣೆ ಗೆಲುವಿಗೆ ಈಗಾಗಲೇ ತಂತ್ರಗಾರಿಕೆ ಮಾಡುತ್ತಿದ್ದು, ಚುನಾವಣಾ ಸಿದ್ಧತೆ ಸಹ ಆರಂಭವಾಗಿದೆ. ಚುನಾವಣೆ ರೂಪುರೇಷೆಯನ್ನು ಸೆಪ್ಟೆಂಬರ್ ಒಳಗೆ ಅಂತಿಮ ಮಾಡುತ್ತೇವೆ. ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ಅಭ್ಯರ್ಥಿ ಯಾರು ಎಂದು ನಾನು ಹೇಳಲ್ಲ. ಹೈಕಮಾಂಡ್ ಯಾರು ಎಂದು ತೀರ್ಮಾನ ಮಾಡುತ್ತದೆ. ಜಿಲ್ಲೆಯಲ್ಲಿ ಕನಿಷ್ಟ 10 ಮಂದಿ ಆಕಾಂಕ್ಷಿಗಳಿದ್ದು, ಜಿಲ್ಲೆಯ ಪ್ರಮುಖರು ಸಭೆ ನಡೆಸಿ ಒಂದಷ್ಟು ಹೆಸರನ್ನು ಅಂತಿಮ ಮಾಡಿ ಹೈಕಮಾಂಡ್‌ಗೆ ಕಳುಹಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.

**ಕಾವೇರಿ ವಿಚಾರದಲ್ಲಿ ಸರ್ಕಾರ ರೈತರ ಪರ:** ಕಾವೇರಿ ನೀರಿನ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರ ಸದಾ ರೈತರ ಪರವಿದ್ದು, ಸಿಡಬ್ಲ್ಯೂಎಸ್ ಕಮಿಟಿ ಕೇಂದ್ರ ಸರ್ಕಾರದ ಸುಪರ್ದಿಯಲ್ಲಿರುವ ಕಾರಣ ನೀರು ಬಿಡುಗಡೆ ವಿಚಾರದಲ್ಲಿ ಅವರದ್ದೇ ಅಂತಿಮ ನಿರ್ಧಾರ. ಆದಾಗ್ಯೂ ಕೇಂದ್ರ ಸರ್ಕಾರದ ಮನವೊಲಿಸಿ ರೈತರ ರಕ್ಷಣೆಗೆ ಮುಂದಾಗಿದ್ದೇವೆ. ಕಮಿಟಿಯಲ್ಲಿ ರಾಜ್ಯ ಸರ್ಕಾರ, ನೀರಾವರಿ ಇಲಾಖೆ ಸಮರ್ಥವಾಗಿ ವಾದ ಮಂಡಿಸಿದೆ. ಕಮಿಟಿ ತೀರ್ಮಾನ ಒಪ್ಪದೇ ತಮಿಳುನಾಡು ಸುಪ್ರೀಂಕೋರ್ಟ್‌ಗೆ ಹೋಗಿದೆ. ಸುಪ್ರೀಂಕೋರ್ಟ್‌ನಲ್ಲಿ ಕೇಸ್ ದಾಖಲಾಗಿದೆ. ಇನ್ನೂ ತೀರ್ಪು ಬಂದಿಲ್ಲ ಎಂದರು.

ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿರುವ ಬೆಳೆಗಳ ರಕ್ಷಣೆಗೆ ಹಾಗೂ ಕುಡಿಯುವ ನೀರಿಗೆ ಕ್ರಮ ವಹಿಸಿದ್ದೇವೆ. ಕೋರ್ಟ್ ತೀರ್ಮಾನದ ಮೇಲೆ ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆ. ಸರ್ವ ಪಕ್ಷಗಳ ಸಭೆ ಕರೆಯುವ ಬಗ್ಗೆ ಸಿಎಂ ತೀರ್ಮಾನ ಮಾಡುತ್ತಾರೆ. ಈ ಹಿಂದೆ ಕಾವೇರಿ ವಿಚಾರದಲ್ಲಿ ಅನೇಕ ಬಾರಿ ಸರ್ವಪಕ್ಷಗಳ ಸಭೆ ಕರೆದಿದ್ದಾರೆ. ಆ ಸಂದರ್ಭ ಬಂದಾಗ ಸಿಎಂ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದು ಸ್ಪಷ್ಟಪಡಿಸಿದರು.

ನಾಲೆಗೆ ನೀರು ಬಿಡಲು ತೀರ್ಮಾನಿಸಿದಾಗ ಅರೆಕುಷ್ಕಿ ಬೆಳೆ ಬೆಳೆಯುವಂತೆ ರೈತರಲ್ಲಿ ಮನವಿ ಮಾಡಿದ್ದೆವು. ಒಂದು ಕಡೆ ತಮಿಳುನಾಡು ನೀರು ಕೇಳುತ್ತಿದ್ದು, ಇನ್ನೊಂದು ಡ್ಯಾಂನಲ್ಲಿ ಅಗತ್ಯದಷ್ಟು ನೀರಿಲ್ಲ. ಮಳೆ ಬೀಳದೆ ಒಳಹರಿವು ಹೆಚ್ಚಾಗುತ್ತಿಲ್ಲ. ರೈತರು ಪರಿಸ್ಥಿತಿಗೆ ಸಹಕಾರ ನೀಡಬೇಕು. ಇರುವ ಬೆಳೆಗಳಿಗೆ ನಾವು ನೀರು ಕೊಡಲು ಚಿಂತನೆ ಮಾಡಿದ್ದೇವೆ. ಕುಡಿಯುವ ನೀರನ್ನು ಗಮನದಲ್ಲಿಟ್ಟುಕೊಂಡು ಬೆಳೆಗೆ ಹಾಗೂ ತಮಿಳುನಾಡುಗೆ ನೀರು ಬಿಡಬೇಕಾಗಿದೆ ಎಂದರು.

# ಇಬ್ಬರು ಹಂತಕರಿಗೆ ಜೀವಾವಧಿ ಶಿಕ್ಷೆ

ಪಾಂಡವಪುರ, ಆ.18– ಹಾಡಹಗಲೇ ಯುವಕನೊರ್ವನನ್ನು ಹತ್ಯೆ ಮಾಡಿದ್ದ ಇಬ್ಬರು ಹಂತಕರಿಗೆ ಶ್ರೀರಂಗಪಟ್ಟಣದ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಟಿ.ಗೋಪಾಲಕೃಷ್ಣ ರೈ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ.

ಪಾಂಡವಪುರ ನಿವಾಸಿ ಲೇ.ಗೌಸ್ ಮಹಮ್ಮದ್ದಿನ್ ಖಮರ್ ಪುತ್ರ ಮಹಮ್ಮದ್ ಸುಹೈಲ್ ಮತ್ತು ವಾಜೀದ್ ಪಾಷ ಪುತ್ರ ವಸೀಂ ಪಾಷ ಜೀವಾವಧಿ ಶಿಕ್ಷೆಗೆ ಒಳಗಾದವರು. ಇವರಿಬ್ಬರು 2017ರ ಫೆ.10ರಂದು ಪಟ್ಟಣದ ಕೆಎಸ್‌ಆರ್‌ಟಿಸಿ ಡಿಪೋ ಎದುರಿನ ಎ1 ಬೈಕ್ ಗ್ಯಾರೇಜ್ ಬಳಿ ಕ್ಷುಲ್ಲಕ ಕಾರಣಕ್ಕೆ ಎ.ಶಹಬುದ್ದೀನ್ ಅಲಿಯಾಸ್ ಲುಕ್ಮಾನ್ ಎಂಬ ಯುವಕನನ್ನು ಚಾಕುವಿನಿಂದ ಇರಿದು ಕೊಲೆ ಮಾಡಿದ್ದರು. ಈ ಸಂಬಂಧ ಅಂದಿನ ಪಾಂಡವಪುರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಎ.ಕೆ.ದೀಪಕ್ ದೂರು ದಾಖಲಿಸಿಕೊಂಡು, ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣದ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಟಿ.ಗೋಪಾಲಕೃಷ್ಣ ರೈ ಹಂತಕರಿಗೆ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರ ಸರ್ಕಾರಿ ಅಭಿಯೋಜಕರಾದ ಎಂ.ಕೆ.ಪ್ರಫುಲ್ಲಾ ವಾದ ಮಂಡಿಸಿದ್ದರು.

# ಸಚಿವ ಚಲುವರಾಯಸ್ವಾಮಿ ವಿರುದ್ಧ ಜೆಡಿಎಸ್ ಪ್ರತಿಭಟನೆ



ನಾಗಮಂಗಲ, ಆ.18– ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಜೆಡಿಎಸ್ ಮುಖಂಡರ ವಿರುದ್ಧ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮತ್ತು ಸ್ಥಳೀಯ ಕಾಂಗ್ರೆಸ್ ಮುಖಂಡರು ಬಹಿರಂಗ ಹೇಳಿಕೆ ನೀಡುತ್ತಿರುವುದನ್ನು ಖಂಡಿಸಿ ಜೆಡಿಎಸ್ ಕಾರ್ಯಕರ್ತರು ಶುಕ್ರವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಶ್ರೀಸೌಮ್ಯಕೇಶವಸ್ವಾಮಿ ದೇವಾಲಯದ ಮುಂಭಾಗದಿಂದ ಸಚಿವ ಚಲುವರಾಯಸ್ವಾಮಿ ಹಾಗೂ ಕಾಂಗ್ರೆಸ್ ವಿರುದ್ಧ ಘೋಷಣೆ ಕೂಗುತ್ತಾ, ಅಲ್ಲಲ್ಲೇ 'ಪೇಸಿಎಸ್' ಪೋಸ್ಟರ್ ಅಂಟಿಸುತ್ತಾ ಹೊರಟ ಪ್ರತಿಭಟನಾ ಮೆರವಣಿಗೆ ಮಿನಿ ವಿಧಾನಸೌಧ ತಲುಪಿತು. ಬಳಿಕ ಕೆಲಕಾಲ ಪ್ರತಿಭಟನೆ ನಡೆಸಿ ಶಿರಸ್ತೇದಾರ್ ಮಲ್ಲಿಕಾರ್ಜುನಸ್ವಾಮಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಮನ್‌ಮುಲ್ ನಿರ್ದೇಶಕ ನೆಲ್ಲಿಗೆರೆ ಬಾಲು ಮಾತನಾಡಿ, ದೆಹಲಿಯ ಕೆಂಪುಕೋಟೆ ಮೇಲೆ ತ್ರಿವರ್ಣ ಧ್ವಜಾರೋಹಣ ಮಾಡಿದ ದಕ್ಷಿಣ ಭಾರತದ ಏಕೈಕ ವ್ಯಕ್ತಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಬಗ್ಗೆ ಚಲುವರಾಯಸ್ವಾಮಿ ಹಾಗೂ ಕಾಂಗ್ರೆಸ್ಸಿಗರು ಟೀಕೆ ಮಾಡುತ್ತಾರೆ. ಜೊತೆಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಆದಿಚುಂಚನಗಿರಿ ಮಠದ ಬಗ್ಗೆ ಲಘುವಾಗಿ ಮಾತನಾಡುವ ನೈತಿಕತೆ ಈ ಕಾಂಗ್ರೆಸ್ಸಿಗರಿಗಿಲ್ಲ ಎಂದು ಕಿಡಿಕಾರಿದರು.

ಮಹಾಜನತೆ ನೀಡಿರುವ ಅವಕಾಶದಿಂದ ಸಚಿವರಾಗಿರುವ ಚಲುವರಾಯಸ್ವಾಮಿ ಅವರು ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ಮಾಡಲು ಸಾಕಷ್ಟು ಕೆಲಸಗಳಿವೆ. ಆದರೆ ನಿಮ್ಮನ್ನು ರಾಜಕೀಯವಾಗಿ ಪರಿಚಯಿಸಿದ ಪಕ್ಷದ ನಾಯಕರ ವಿರುದ್ಧ ಮಾತನಾಡುವಾಗ ಬಳಸುವ ಪದಗಳ ಬಗ್ಗೆ ಎಚ್ಚರವಹಿಸಿ. ಈ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಒಳಸಂಚಿನಿಂದ ನಾವು ಸೋತಿರಬಹುದು. ಈ ಕಾಲಚಕ್ರದಲ್ಲಿ ಎಲ್ಲವೂ ಬದಲಾವಣೆ ಆಗುವ ಉದಾಹರಣೆಗಳ ನೆನಪಿರಲಿ. ಅದೇನೆಲ್ಲಾ ಮರೆತು ಈ ರೀತಿ ವರ್ತನೆ ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಾವು ವಿಪಕ್ಷವಾಗಿ ಏನು ಮಾಡಬೇಕೋ ಅದ ಮಾಡುತ್ತಿದ್ದೇವೆ. ಆದರೆ ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡಂತೆ ನಿಮ್ಮಗ್ಯಾಕೆ ಭಯ. ಕೆಲ ಕಾಂಗ್ರೆಸ್‌ನವರು ನಮ್ಮ ಮಠದ ಬಗ್ಗೆ ಮಾತನಾಡುವ ನೈತಿಕತೆ ಏನಿದೆ? ಇನ್ನೂ ಮುಂದಾದರೂ ನಿಮ್ಮಗಳ ವರ್ತನೆ ಮತ್ತು ನಿಮ್ಮ ಕಾರ್ಯಕರ್ತರ ನಡೆ ಸರಿಯಾಗದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟದ ಸ್ವರೂಪ ತೀವ್ರಗೊಳಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಜೆಡಿಎಸ್ ತಾಲೂಕು ಅಧ್ಯಕ್ಷ ಡಿ.ಟಿ.ಶ್ರೀನಿವಾಸ್, ಜಿಪಂ ಮಾಜಿ ಸದಸ್ಯ ಚಂದ್ರು, ಯದುರಾಜ್, ಮುಖಂಡರಾದ ಮುಳುಕಟ್ಟೆ ಶಿವರಾಮಯ್ಯ, ಕೆಂಪೇಗೌಡ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

# ಅಗ್ರಹಾರಬಾಚಹಳ್ಳಿ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷೆ ಅಧಿಕಾರ ಸ್ವೀಕಾರ



ಕೆ.ಆರ್.ಪೇಟೆ, ಆ.18– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಪಂ ನೂತನ ಅಧ್ಯಕ್ಷ ಎ.ಸಿ.ದಿವಿಕುಮಾರ್ ಹಾಗೂ ಉಪಾಧ್ಯಕ್ಷೆ ಸುನೀತಾ ದ್ಯಾವಯ್ಯ ಗ್ರಾಮ ಸದಸ್ಯರು ಹಾಗೂ ಪಿಡಿಓ ಹರ್ಷವರ್ಧನ್ ಸಮ್ಮುಖದಲ್ಲಿ ಅಧಿಕಾರ ಸ್ವೀಕರಿಸಿದರು.

ಅಧಿಕಾರ ಸ್ವೀಕರಿಸಿ ಮಾತನಾಡಿದ ನೂತನ ಅಧ್ಯಕ್ಷ ದಿವಿಕುಮಾರ್, ನನ್ನ ಅಧಿಕಾರ ಅವಧಿಯಲ್ಲಿ ಎಲ್ಲಾ ಸದಸ್ಯರು ಹಾಗೂ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರು, ಚರಂಡಿ, ಬೀದಿದೀಪ ಸೇರಿದಂತೆ ಮೂಲ ಸೌಕರ್ಯ ಒದಗಿಸಲಾಗುವುದು. ಅಲ್ಲದೇ ಉದ್ಯೋಗ ಖಾತ್ರಿ ಕಾಮಗಾರಿ ಅನುಷ್ಠಾನಗೊಳಿಸಿ ಪ್ರತಿ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಗ್ರಾಪಂ ವ್ಯಾಪ್ತಿಯ ಎಲ್ಲಾ ನೀರುಗಂಟಿಗಳು ತಮ್ಮ ವ್ಯಾಪ್ತಿಯ ನೀರಿನ ಟ್ಯಾಂಕ್‌ಗಳನ್ನು ವಾರದೊಳಗೆ ಸ್ವಚ್ಛಗೊಳಿಸಬೇಕು. ಬಳಿಕ ಅದರ ಫೋಟೋ ಮತ್ತು ವಿಡಿಯೋವನ್ನು ಗ್ರಾಪಂ ಸದಸ್ಯರು ಮತ್ತು ನೌಕರರ ಗುಂಪಿಗೆ ಹಾಕುವಂತೆ ತಿಳಿಸಿದರು.

ವಾರಕ್ಕೊಮ್ಮೆ ಗ್ರಾಮ ಸಂಚಾರ ಮಾಡಿ ಜನರ ಸಮಸ್ಯೆಗಳನ್ನು ಸದಸ್ಯರೊಂದಿಗೆ ಆಲಿಸುತ್ತೇನೆ. ಆಗ ಜನರು ತಮ್ಮ ಸಮಸ್ಯೆಗಳನ್ನು ತಮ್ಮ ಗಮನಕ್ಕೆ ತಂದರೆ ಅದಕ್ಕೆ ಸೂಕ್ತ ಪರಿಹಾರ ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಈ ವೇಳೆ ಪಿಡಿಓ ಹರ್ಷವರ್ಧನ್, ಸದಸ್ಯರಾದ ನಂಜೇಗೌಡ, ಆಶಾ, ಆನಂದ್, ನೇತ್ರಾವತಿ, ಸಿ.ಆರ್.ಪಿ.ಕುಮಾರ್, ರೇವತಿ, ನೇತ್ರಾ.ಡಿ.ರಮೇಶ್, ಶ್ರೀನಿವಾಸ್.ಆರ್, ಮಾಜಿ ಗ್ರಾಪಂ ಅಧ್ಯಕ್ಷ ಎ.ಪಿ.ಶ್ರೀಧರ್, ಎ.ಬಿ.ಕುಮಾರ್, ಹರೀಶ್ ಸೇರಿದಂತೆ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು. ಈ ಸಂದರ್ಭ ಅಧ್ಯಕ್ಷ ಎ.ಸಿ.ದಿವಿಕುಮಾರ್ 200 ಸಸಿಗಳನ್ನು ವಿತರಿಸಿದರು.

# ಡಿ.ದೇವರಾಜ ಅರಸು ಪ್ರಶಸ್ತಿಗೆ ಹಿರಿಯ ರಾಜಕಾರಣಿ ಕಾಗೋಡು ತಿಮ್ಮಪ್ಪ ಆಯ್ಕೆ



ಬೆಂಗಳೂರು, ಆ.18– ಹಿರಿಯ ರಾಜಕಾರಣಿ, ಮಾಜಿ ವಿಧಾನಸಭಾಧ್ಯಕ್ಷ ಕಾಗೋಡು ತಿಮ್ಮಪ್ಪ ಅವರನ್ನು ಈ ಬಾರಿಯ ಡಿ.ದೇವರಾಜ ಅರಸು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಸಾಹಿತಿ ಹಿ.ಶಿ. ರಾಮಚಂದ್ರೇಗೌಡ ಅವರ ನೇತೃತ್ವದ ಆಯ್ಕೆ ಸಮಿತಿಯು ಕಾಗೋಡು ತಿಮ್ಮಪ್ಪ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್.ತಂಗಡಗಿ ತಿಳಿಸಿದ್ದಾರೆ. ಪ್ರಶಸ್ತಿಯು 5 ಲಕ್ಷ ರೂಪಾಯಿ ನಗದು ಹಾಗೂ ಫಲಕವನ್ನು ಒಳಗೊಂಡಿದೆ. ಆ.20ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಬೆಳಗ್ಗೆ 11 ಗಂಟೆಗೆ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ 108ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾಗೋಡು ತಿಮ್ಮಪ್ಪ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಗೋಡು ತಿಮ್ಮಪ್ಪ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದನೆ ಸಲ್ಲಿಸಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಮುಖ್ಯಮಂತ್ರಿ, ದೇವರಾಜ ಅರಸು ಅವರ ಗರಡಿಯಲ್ಲಿಯೇ ಬೆಳೆದಿರುವ ತಿಮ್ಮಪ್ಪನವರು ಭೂ ಸುಧಾರಣಾ ಕಾಯ್ದೆಯಷ್ಟೇ ಕ್ರಾಂತಿಕಾರಿಯಾದ "ವಾಸಿಸುವವನನ್ನೇ ಮನೆ ಒಡೆಯ" ನನ್ನಾಗಿ ಮಾಡುವ ಕ್ರಾಂತಿಕಾರಿ ಕಾಯ್ದೆಯ ರೂವಾರಿ ಎಂದಿದ್ದಾರೆ.

# ಎರಡನೇ ಹಂತದ ನಗರಗಳಲ್ಲಿಯೂ ಬಂಡವಾಳ ಹೂಡಿಕೆಗೆ ಅವಕಾಶ




ಬೆಂಗಳೂರು, ಆ.18– ತುಮಕೂರು, ದಾವಣಗೆರೆ ಮತ್ತಿತರ ಎರಡನೇ ಹಂತದ ನಗರಗಳಲ್ಲಿಯೂ ಹೂಡಿಕೆ ಮಾಡಲು ಅವಕಾಶವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.


ತಮ್ಮನ್ನು ಭೇಟಿಯಾದ ಚೆನ್ನೈನಲ್ಲಿನ ಅಮೆರಿಕ ದೂತಾವಾಸದ ಕಾನ್ಸಲ್ ಜನರಲ್ ಕ್ರಿಸ್ಟೋಫರ್ ಡಬ್ಲ್ಯು ಹಾಡ್ಜಸ್ ಅವರೊಂದಿಗೆ ವಿವಿಧ ವಿಷಯಗಳ ಕುರಿತು ಚರ್ಚಿಸಿದ ಮುಖ್ಯಮಂತ್ರಿ, ಕರ್ನಾಟಕ ರಾಜ್ಯ ದೇಶದಲ್ಲಿಯೇ ಎರಡನೇ ಅತಿ ಹೆಚ್ಚು ತೆರಿಗೆ ಪಾವತಿ ಮಾಡುವ ರಾಜ್ಯವಾಗಿದ್ದು, ಹೂಡಿಕೆದಾರ ಸ್ನೇಹಿ ವಾತಾವರಣವನ್ನು ಹೊಂದಿದೆ. ಕಾನೂನು ಮತ್ತು ಶಾಂತಿ ಸುವ್ಯವಸ್ಥೆ ಅತ್ಯುತ್ತಮವಾಗಿದ್ದು, ಕೌಶಲ್ಯಯುಕ್ತ ಮಾನವ ಸಂಪನ್ಮೂಲ ಲಭ್ಯವಿದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಇನ್ನಷ್ಟು ಹೂಡಿಕೆ ಮಾಡುವಂತೆ ಮುಖ್ಯಮಂತ್ರಿಯವರು ತಿಳಿಸಿದರು.

**ಬೆಂಗಳೂರಿನಲ್ಲಿ ಅಮೆರಿಕಾ ದೂತಾವಾಸ ಕಚೇರಿ:** ಬೆಂಗಳೂರಿನಲ್ಲಿ ಅಮೆರಿಕಾ ದೂತಾವಾಸ ಕಚೇರಿ ಪ್ರಾರಂಭಿಸುವ ತೀರ್ಮಾನವನ್ನು ಸ್ವಾಗತಿಸಿದ ಮುಖ್ಯಮಂತ್ರಿ, ಇದಕ್ಕೆ ಎಲ್ಲ ಅಗತ್ಯ ಬೆಂಬಲ, ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಇದೇ ವೇಳೆ ಮಾತನಾಡಿದ ಕ್ರಿಸ್ಟೋಫರ್ ಹಾಡ್ಜಸ್ ಅವರು, ಬೆಂಗಳೂರು ಪ್ರವಾಸ ಹಾಗೂ ಭಾರತ – ಅಮೆರಿಕಾ ಭಾಗೀದಾರಿಕೆಯ ಬಗ್ಗೆ ಇಲ್ಲಿರುವ ಉತ್ಸಾಹ, ಆಶಾವಾದ ಹೊಸ ಚೈತನ್ಯ ಮೂಡಿಸಿದೆ. ಇಲ್ಲಿರುವ ಸುಮಾರು 650 ಅಮೆರಿಕನ್ ಕಂಪನಿಗಳು ಮತ್ತು 30 ವರ್ಷಗಳಿಂದ ಅಮೇರಿಕದ ಕಚೇರಿ ಇಲ್ಲಿ ಕೆಲಸ ಮಾಡುತ್ತಿರುವುದು ನಮ್ಮ ಬದ್ಧತೆಗೆ ಸಾಕ್ಷಿ. ನಮ್ಮ ಸಹಭಾಗಿತ್ವವನ್ನು ಇನ್ನಷ್ಟು ಮುಂದೆ ಹೇಗೆ ಕೊಂಡೊಯ್ಯಬಹುದು ಎಂಬುದರ ಬಗ್ಗೆ ಚರ್ಚೆ ನಡೆಸಿದ್ದು ಖುಷಿ ತಂದಿದೆ ಎಂದರು.

ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜು ಹಾಗೂ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಡಾ. ರಜನೀಶ್ ಗೋಯಲ್ ಮತ್ತಿತರರು ಉಪಸ್ಥಿತರಿದ್ದರು.

# ದಾಭೋಲ್ಕರ್, ಪನ್ಸಾರೆ, ಎಂಎಂ ಕಲಬುರ್ಗಿ, ಗೌರಿ ಲಂಕೇಶ್, ಹತ್ಯೆಗಳಲ್ಲಿ ಸಾಮ್ಯತೆ ಇದೆಯೇ: ಸಿಬಿಐಗೆ 'ಸುಪ್ರೀಂ' ಪ್ರಶ್ನೆ


ನರೇಂದ್ರ ದಾಭೋಲ್ಕರ್


ಗೋವಿಂದ ಪನ್ಸಾರೆ


ಎಂಎಂ ಕಲಬುರ್ಗಿ


ಗೌರಿ ಲಂಕೇಶ್

ನವದೆಹಲಿ, ಆ.18– ವಿಚಾರವಾದಿ ನರೇಂದ್ರ ದಾಭೋಲ್ಕರ್, ಸಿಪಿಐ ನಾಯಕ ಗೋವಿಂದ್ ಪನ್ಸಾರೆ, ಪತ್ರಕರ್ತೆ ಗೌರಿ ಲಂಕೇಶ್ ಮತ್ತು ಸಾಹಿತಿ ಎಂಎಂ ಕಲಬುರ್ಗಿ ಅವರ ಹತ್ಯೆಯಲ್ಲಿ ಯಾವುದೇ "ಸಾಮಾನ್ಯ ಎಳೆ" ಇದೆಯೇ ಎಂದು ಸುಪ್ರೀಂ ಕೋರ್ಟ್, ಸಿಬಿಐ ಅನ್ನು ಪ್ರಶ್ನಿಸಿದೆ.

ಮೂಢನಂಬಿಕೆಯ ವಿರುದ್ಧ ಹೋರಾಡಿದ ದಾಭೋಲ್ಕರ್ ಅವರನ್ನು 2013ರ ಆಗಸ್ಟ್ 20ರಂದು ಪುಣೆಯಲ್ಲಿ ವಾಕಿಂಗ್ ವೇಳೆ ದ್ವಿಚಕ್ರವಾಹನದಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಗುಂಡಿಕ್ಕಿ ಕೊಂದಿದ್ದರು. ನಂತರ 2015ರ ಫೆಬ್ರವರಿ 20ರಂದು ಪನ್ಸಾರೆ ಹತ್ಯೆಯಾಗಿತ್ತು. 2015ರ ಆಗಸ್ಟ್ 30ರಂದು ಎಂಎಂ ಕಲಬುರ್ಗಿ ಅವರನ್ನು ಹತ್ಯೆ ಮಾಡಲಾಗಿತ್ತು. 2017ರ ಸೆಪ್ಟೆಂಬರ್ 5ರಂದು ಲಂಕೇಶ್ ಅವರನ್ನು ಅವರ ಮನೆ ಮುಂದೆ ಗುಂಡಿಕ್ಕಿ ಹತ್ಯೆ ಮಾಡಲಾಗಿತ್ತು.


ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಸುಧಾಂಶು ಧುಲಿಯಾ ಅವರ ಪೀಠವು ಈ ವರ್ಷದ ಏಪ್ರಿಲ್ 18ರ ಬಾಂಬೆ ಹೈಕೋರ್ಟ್ ಆದೇಶಕ್ಕೆ ತಡೆಯಾಜ್ಞೆ ನೀಡುವಂತೆ ಕೋರಿ ನರೇಂದ್ರ ದಾಭೋಲ್ಕರ್ ಅವರ ಪುತ್ರಿ ಮುಕ್ತಾ ದಾಭೋಲ್ಕರ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ ಕೇಂದ್ರೀಯ ತನಿಖಾ ದಳ(ಸಿಬಿಐ)ಗೆ ಕೇಳಿದೆ. ಮುಕ್ತಾ ದಾಭೋಲ್ಕರ್ ಪರ ವಾದ ಮಂಡಿಸಿದ ಹಿರಿಯ ವಕೀಲ ಆನಂದ್ ಗ್ರೋವರ್, ನಾಲ್ಕು ಕೊಲೆಗಳ ಹಿಂದೆ ದೊಡ್ಡ ಪಿತೂರಿ ಇದೆ ಎಂದು ಪೀಠಕ್ಕೆ ತಿಳಿಸಿದರು. ಲಭ್ಯವಿರುವ ಪುರಾವೆಗಳು ಈ ಪ್ರಕರಣಗಳನ್ನು ಜೋಡಿಸಬಹುದು ಎಂದು ಸೂಚಿಸಿವೆ. ಮುಕ್ತಾ ದಾಭೋಲ್ಕರ್ ಅವರು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

ನಿಮ್ಮ ಪ್ರಕಾರ, ವಿಚಾರಣೆ ಎದುರಿಸುತ್ತಿರುವ ಆರೋಪಿಗಳ (ದಾಭೋಲ್ಕರ್ ಪ್ರಕರಣದಲ್ಲಿ) ಆ ನಾಲ್ಕು ಕೊಲೆಗಳಲ್ಲಿ ಯಾವುದೇ ಸಾಮಾನ್ಯ ಎಳೆ ಇಲ್ಲವೇ? ಸರಿ, ನೀವು ಹೇಳುತ್ತಿರುವುದು ಅದನ್ನೇ. ನ್ಯಾಯಮೂರ್ತಿ ಧುಲಿಯಾ ಅವರು ಸಿಬಿಐ ಪರವಾಗಿ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ (ಎಎಸ್‌ಜಿ) ಐಶ್ವರ್ಯಾ ಭಾಟಿ ಅವರನ್ನು ಕೇಳಿದರು.

ಗ್ರೋವರ್ ಅವರು ಪ್ರಕರಣಕ್ಕೆ ಸಂಬಂಧಿಸಿದ ವಿಷಯಗಳನ್ನು ವಾದಿಸಲು ಪ್ರಾರಂಭಿಸಿದಾಗ, ದಾಭೋಲ್ಕರ್ ಹತ್ಯೆ ಪ್ರಕರಣದ ವಿಚಾರಣೆ ನಡೆಯುತ್ತಿದೆ ಮತ್ತು ಈಗಾಗಲೇ ಕೆಲವು ಸಾಕ್ಷಿಗಳನ್ನು ಪರೀಕ್ಷಿಸಲಾಗಿದೆ ಎಂದು ಹೈಕೋರ್ಟ್ ಹೇಳಿದೆ ಎಂದು ಪೀಠವು ಅವರಿಗೆ ತಿಳಿಸಿದೆ. ಆದ್ದರಿಂದ ಹೈಕೋರ್ಟ್ ಇದನ್ನು ಇನ್ನು ಮುಂದೆ ಮೇಲ್ವಿಚಾರಣೆ ಮಾಡಲು ಬಯಸುವುದಿಲ್ಲ. ಅಂತಹ ಹೇಳಿಕೆಗಳಲ್ಲಿ ತಪ್ಪೇನು? ಎಂದು ಪೀಠವು ಅವರನ್ನು ಕೇಳಿತು. ವಿಚಾರಣೆ ನಡೆಯುತ್ತಿದ್ದರೂ ಇಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದು, ಇನ್ನೂ ಬಂಧಿಸಲಾಗಿಲ್ಲ ಎಂದು ಗ್ರೋವರ್ ಹೇಳಿದ್ದಾರೆ.

ದಾಭೋಲ್ಕರ್ ಹತ್ಯೆ ಪ್ರಕರಣದ ಸ್ಥಿತಿಯನ್ನು ವಿವರಿಸಿದ ಭಾಟಿ, ವಿಚಾರಣೆಯ ಸಮಯದಲ್ಲಿ ಇದುವರೆಗೆ 20 ಸಾಕ್ಷಿಗಳನ್ನು ಪರೀಕ್ಷಿಸಲಾಗಿದೆ ಎಂದು ಪೀಠಕ್ಕೆ ತಿಳಿಸಿದರು. ಹತ್ಯೆಗಳ ಹಿಂದೆ ದೊಡ್ಡ ಪಿತೂರಿ ಇದೆ ಎಂದು ಅರ್ಜಿದಾರರು ಆರೋಪಿಸಿದ್ದಾರೆ ಎಂದು ಪೀಠವು ಭಾಟಿಗೆ ತಿಳಿಸಿತು. ಇನ್ನು ಸಂಬಂಧಿತ ಭಾಗಗಳ ಅನುವಾದದೊಂದಿಗೆ ಕೆಲವು ದಾಖಲೆಗಳನ್ನು ಸಲ್ಲಿಸಲು ಎರಡು ವಾರಗಳ ಕಾಲಾವಕಾಶ ಬೇಕು ಎಂದು ಅರ್ಜಿದಾರರ ಪರ ವಕೀಲರು ಸಲ್ಲಿಸಿದ್ದಾರೆ ಎಂಬುದನ್ನು ಪೀಠವು ಗಮನಿಸಿದೆ. ಮೇಲಿನ ಸಮಸ್ಯೆಯನ್ನು ಪರಿಶೀಲಿಸಲು ಎಎಸ್‌ಜಿಗೆ ನಾಲ್ಕು ವಾರಗಳ ಕಾಲಾವಕಾಶ ನೀಡಲಾಗಿದೆ ಎಂದು ಪೀಠ ಹೇಳಿದೆ. ಅಲ್ಲದೆ ಎಂಟು ವಾರಗಳ ನಂತರ ಈ ವಿಷಯವನ್ನು ಪಟ್ಟಿ ಮಾಡುವಂತೆ ಆದೇಶಿಸಿದೆ. ದಾಭೋಲ್ಕರ್, ಪನ್ಸಾರೆ ಮತ್ತು ಲಂಕೇಶ್ ಹತ್ಯೆಗಳ ನಡುವೆ ಸಾಮಾನ್ಯ ಸಂಬಂಧವಿದೆ ಎಂದು ಸಿಬಿಐ ಶಂಕಿಸಿದೆ ಎಂದು ಗ್ರೋವರ್ ಮೇ 18ರಂದು ಸುಪ್ರೀಂಕೋರ್ಟ್‌ಗೆ ತಿಳಿಸಿದ್ದರು.

# ಚಂದ್ರಯಾನ–3: ವಿಕ್ರಮ್ ಲ್ಯಾಂಡರ್ ಸೆರೆ ಹಿಡಿದ ಚಂದ್ರನ ಮೇಲ್ಮೈ ವಿಡಿಯೋ ಹಂಚಿಕೊಂಡ ಇಸ್ರೋ!



ನವದೆಹಲಿ, ಆ.18– ಇಸ್ರೋ ತನ್ನ ಟ್ವಿಟರ್ ಹ್ಯಾಂಡಲ್‌ನಲ್ಲಿ ವಿಕ್ರಮ್ ಲ್ಯಾಂಡರ್ ಸೆರೆ ಹಿಡಿದಿರುವ ಚಂದ್ರನ ಮೇಲ್ಮೈಯ ಹೊಸ ವೀಡಿಯೊವನ್ನು ಬಿಡುಗಡೆ ಮಾಡಿದೆ.

ವಿಕ್ರಮ್ ಲ್ಯಾಂಡರ್‌ನಲ್ಲಿ ಅಳವಡಿಸಿರುವ ಲ್ಯಾಂಡರ್ ಪೊಸಿಷನ್ ಡಿಟೆಕ್ಷನ್ ಕ್ಯಾಮೆರಾ(LPDC) ಈ ವೀಡಿಯೊವನ್ನು ಸೆರೆಹಿಡಿದಿದೆ. ವಿಕ್ರಮ್ ಲ್ಯಾಂಡರ್‌ನ ಕೆಳಭಾಗದಲ್ಲಿ LPDC ಅಳವಡಿಸಲಾಗಿದೆ. ವಿಕ್ರಮ್ ತನಗಾಗಿ ಸರಿಯಾದ ಮತ್ತು ಸಮತಟ್ಟಾದ ಲ್ಯಾಂಡಿಂಗ್ ಸ್ಥಳವನ್ನು ಕಂಡುಕೊಳ್ಳಲು ಇದನ್ನು ಸ್ಥಾಪಿಸಲಾಗಿದೆ. ಈ ಕ್ಯಾಮೆರಾದ ಸಹಾಯದಿಂದ ವಿಕ್ರಮ್ ಲ್ಯಾಂಡರ್ ಯಾವುದೇ ಉಬ್ಬು ಪ್ರದೇಶಕ್ಕೆ ಇಳಿಯುತ್ತಿಲ್ಲ ಎಂಬುದನ್ನು ನೋಡಬಹುದು.

ಲ್ಯಾಂಡಿಂಗ್‌ಗೂ ಮೊದಲು ಈ ಕ್ಯಾಮೆರಾವನ್ನು ಮತ್ತೆ ಆನ್ ಮಾಡಬಹುದು. ಏಕೆಂದರೆ ಈಗ ಬಂದಿರುವ ಚಿತ್ರವನ್ನು ನೋಡಿದರೆ ಈ ಕ್ಯಾಮೆರಾವನ್ನು ಪ್ರಯೋಗಕ್ಕಾಗಿ ಆನ್ ಮಾಡಲಾಗಿದೆ ಎಂದು ತೋರುತ್ತದೆ ಇದರಿಂದ ಅದು ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿದೆ ಎಂಬುದನ್ನು ಚಿತ್ರಗಳು ಅಥವಾ ವೀಡಿಯೊಗಳಿಂದ ತಿಳಿಯಬಹುದು. ಈ ಸಂವೇದಕವನ್ನು ಚಂದ್ರಯಾನ–2 ರಲ್ಲೂ ಬಳಸಲಾಗಿತ್ತು.

LPDCಯ ಕೆಲಸವೆಂದರೆ ವಿಕ್ರಮ್‌ಗೆ ಸರಿಯಾದ ಲ್ಯಾಂಡಿಂಗ್ ಸ್ಥಳವನ್ನು ಕಂಡುಹಿಡಿಯುವುದು. ಲ್ಯಾಂಡರ್ ಅಪಾಯ ಪತ್ತೆ ಮತ್ತು ತಪ್ಪಿಸುವ ಕ್ಯಾಮರಾ (LHDAC), ಲೇಸರ್ ಆಲ್ಟಿಮೀಟರ್ (LASA), ಲೇಸರ್ ಡಾಪ್ಲರ್ ವೆಲಾಸಿಟಿಮೀಟರ್ (LDV) ಮತ್ತು ಲ್ಯಾಂಡರ್ ಹಾರಿಜಾಂಟಲ್ ವೆಲಾಸಿಟಿ ಕ್ಯಾಮೆರಾ (LHVC) ಈ ಪೇಲೋಡ್‌ನೊಂದಿಗೆ ಒಟ್ಟಿಗೆ ಕೆಲಸ ಮಾಡುತ್ತದೆ. ಇದರಿಂದ ಲ್ಯಾಂಡರ್ ಅನ್ನು ಸುರಕ್ಷಿತ ಮೇಲ್ಮೈಯಲ್ಲಿ ಇಳಿಸಬಹುದು.

ಯಾವಾಗ ವಿಕ್ರಮ್ ಲ್ಯಾಂಡರ್ ಚಂದ್ರನ ಮೇಲೆ ಇಳಿಯುತ್ತದೆಯೋ ಆ ಸಮಯದಲ್ಲಿ ಅದರ ವೇಗ ಸೆಕೆಂಡಿಗೆ 2 ಮೀಟರ್ ಆಗಿರುತ್ತದೆ. ಆದರೆ ಸಮತಲ ವೇಗವು ಸೆಕೆಂಡಿಗೆ 0.5 ಮೀಟರ್ ಆಗಿರುತ್ತದೆ. ವಿಕ್ರಮ್ ಲ್ಯಾಂಡರ್ 12 ಡಿಗ್ರಿ ಇಳಿಜಾರಿನಲ್ಲಿ ಇಳಿಯಬಹುದು. ಈ ಎಲ್ಲಾ ಉಪಕರಣಗಳು ಈ ವೇಗ, ದಿಕ್ಕು ಮತ್ತು ಸಮತಟ್ಟಾದ ನೆಲವನ್ನು ಕಂಡುಹಿಡಿಯಲು ವಿಕ್ರಮ್ ಲ್ಯಾಂಡರ್‌ಗೆ ಸಹಾಯ ಮಾಡುತ್ತವೆ. ಈ ಎಲ್ಲಾ ಉಪಕರಣಗಳನ್ನು ಲ್ಯಾಂಡಿಂಗ್ ಮೊದಲು ಸುಮಾರು 500 ಮೀಟರ್ ಇರುವಾಗಲೇ ಸಕ್ರಿಯಗೊಳಿಸಲಾಗುತ್ತದೆ.

# ರಾಜ್ಯಸಭೆಯ ಶೇ.12 ರಷ್ಟು ಸಂಸದರು ಕೋಟ್ಯಾಧಿಪತಿಗಳು

## 75 ಸದಸ್ಯರ ವಿರುದ್ಧ ಕ್ರಿಮಿನಲ್ ಪ್ರಕರಣ

ನವದೆಹಲಿ, ಆ.18– ರಾಜ್ಯಸಭೆಯ ಶೇ.12 ರಷ್ಟು ಹಾಲಿ ಸಂಸದರು ಕೋಟ್ಯಾಧಿಪತಿಗಳಾಗಿದ್ದು, ಆಂಧ್ರಪ್ರದೇಶ ಮತ್ತು ತೆಲಂಗಾಣ ಅತೀ ಹೆಚ್ಚು ಶ್ರೀಮಂತ ರಾಜ್ಯಸಭಾ ಸದಸ್ಯರನ್ನು ಹೊಂದಿವೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ವರದಿ ಮಾಡಿದೆ.

ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್(ADR) ಮತ್ತು ನ್ಯಾಷನಲ್ ಎಲೆಕ್ಷನ್ ವಾಚ್(NEW) ಒಟ್ಟು 233 ರಾಜ್ಯಸಭಾ ಸಂಸದರ ಪೈಕಿ 225 ಸದಸ್ಯರ ಅಪರಾಧ, ಹಣಕಾಸು ಮತ್ತು ಇತರ ವಿವರಗಳನ್ನು ವಿಶ್ಲೇಷಿಸಿದೆ. ಪ್ರಸ್ತುತ ರಾಜ್ಯಸಭೆಯಲ್ಲಿ ಒಂದು ಸ್ಥಾನ ಖಾಲಿ ಇದೆ. ವರದಿಯ ಪ್ರಕಾರ, ಆಂಧ್ರಪ್ರದೇಶದ 11 ಸಂಸದರ ಪೈಕಿ ಐವರು(ಶೇ.45), ತೆಲಂಗಾಣದ ಏಳು ಸಂಸದರಲ್ಲಿ ಮೂವರು(ಶೇ.43), ಮಹಾರಾಷ್ಟ್ರದ 19 ಸಂಸದರ ಪೈಕಿ ಮೂವರು (ಶೇ.16), ದೆಹಲಿಯ ಮೂವರು ಸಂಸದರಲ್ಲಿ ಒಬ್ಬರು (ಶೇ.33), ಪಂಜಾಬ್‌ನ ಏಳು ಸಂಸದರಲ್ಲಿ ಇಬ್ಬರು(ಶೇ.29), ಹರಿಯಾಣದ ಐದು ಸಂಸದರಲ್ಲಿ ಒಬ್ಬರು(ಶೇ.20) ಮತ್ತು ಮಧ್ಯಪ್ರದೇಶದ 11 ಸಂಸದರಲ್ಲಿ ಇಬ್ಬರು (ಶೇ.18) 100 ಕೋಟಿ ರೂ.ಗೂ ಹೆಚ್ಚು ಆಸ್ತಿ ಹೊಂದಿರುವುದಾಗಿ ಘೋಷಿಸಿಕೊಂಡಿದ್ದಾರೆ.

ತೆಲಂಗಾಣದಿಂದ ಏಳು ಸಂಸದರ ಒಟ್ಟು ಆಸ್ತಿ ಮೌಲ್ಯ 5,596 ಕೋಟಿ ರೂ. ಆಗಿದ್ದು, ಆಂಧ್ರಪ್ರದೇಶದ 11 ಸಂಸದರ ಒಟ್ಟು ಆಸ್ತಿ 3,823 ಕೋಟಿ ರೂ. ಮತ್ತು ಉತ್ತರ ಪ್ರದೇಶದ 30 ಸಂಸದರ ಒಟ್ಟು ಆಸ್ತಿ ಮೌಲ್ಯ 1,941 ಕೋಟಿ ರೂ. ಎಂದು ವರದಿ ವಿಶ್ಲೇಷಿಸಿದೆ. 225 ರಾಜ್ಯಸಭೆಯ ಹಾಲಿ ಸಂಸದರ ಪೈಕಿ 75 ಸದಸ್ಯರು(ಶೇ.33) ತಮ್ಮ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿರುವುದಾಗಿ ತಿಳಿಸಿದ್ದಾರೆ. ಅಲ್ಲದೆ ಸುಮಾರು 41 (ಶೇ. 18) ರಾಜ್ಯಸಭೆಯ ಹಾಲಿ ಸಂಸದರು ಗಂಭೀರ ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿರುವುದಾಗಿ ಘೋಷಿಸಿಕೊಂಡಿದ್ದಾರೆ.

# ಉಪ್ಪಿಟ್ಟಿನಲ್ಲಿ ವಿಷ ಹಾಕಿದ ಹೆಂಡತಿ, ಗಂಡನ ಸ್ಥಿತಿ ಗಂಭೀರ: ಆದರೆ ನಾಯಿ, ಬೆಕ್ಕು ಸಾವು

ಬೆಳಗಾವಿ, ಆ.18– ಎರಡು ಎಕರೆ ಜಮೀನನ್ನು ತಮ್ಮ ಹೆಸರಿಗೆ ಮಾಡಿಕೊಳ್ಳುವ ಉದ್ದೇಶದಿಂದ ಮಹಿಳೆಯೊಬ್ಬರು, ಪತಿಗೆ ಉಪ್ಪಿಟ್ಟಿನಲ್ಲಿ ವಿಷ ಹಾಕಿ ಕೊಲೆ ಮಾಡಲು ಯತ್ನಿಸಿದ ಪ್ರಕರಣವನ್ನು ಪೊಲೀಸರು ಪತ್ತೆ ಮಾಡಿದ್ದಾರೆ. ವಿಷಪೂರಿತ ಉಪ್ಪಿಟ್ಟು ತಿಂದ, ಸವದತ್ತಿ ತಾಲೂಕಿನ ಗೋರಾಬಾಳ ಗ್ರಾಮದ ನಿಂಗಪ್ಪ ಫಕೀರಪ್ಪ ಹಮಾನಿ (35) ಅವರನ್ನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಇವರ ಪತ್ನಿ ಸಾವಕ್ಕ (32) ಹಾಗೂ ಇವರ ಸಹೋದರ ಫಕೀರಪ್ಪ ಲಕ್ಷ್ಮಣ ಸಿಂಧೋಗಿ (30) ಆರೋಪಿಗಳು.

ಆಗಸ್ಟ್ 11ರಂದು ಘಟನೆ ನಡೆದಿದೆ. ಅಂದು ಬೆಳಿಗ್ಗೆ ಸಾವಕ್ಕ ಅವರು ಪತಿ ನಿಂಗಪ್ಪಗೆ ಉಪಾಹಾರಕ್ಕಾಗಿ ಉಪ್ಪಿಟ್ಟು ಮಾಡಿದ್ದರು. ಅದನ್ನು ತಿಂದ ಕೆಲ ಗಂಟೆಗಳಲ್ಲಿ ನಿಂಗಪ್ಪ ತೀವ್ರ ನೋವಿನಿಂದ ಬಳಲಿದರು. ಕುಟುಂಬದವರು ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ ಬಳಿಕ, ವೈದ್ಯರ ಸಲಹೆ ಮೇರೆಗೆ ಹುಬ್ಬಳ್ಳಿಯ ಕಿಮ್ಸ್‌ಗೆ ದಾಖಲಿಸಿದರು. ಅಲ್ಲಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರಿದಿದೆ. ಇದೇ ಉಪ್ಪಿಟ್ಟು ತಿಂದ ನಾಯಿ, ಬೆಕ್ಕು ಸತ್ತು ಹೋಗಿವೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಂಜೀವ ಪಾಟೀಲ ತಿಳಿಸಿದ್ದಾರೆ. ನಿಂಗಪ್ಪ ಅವರ ತಂದೆ ಫಕೀರಪ್ಪ ಅವರು ನೀಡಿದ ದೂರಿನ ಅನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

# ಪರೀಕ್ಷಾ ಕೇಂದ್ರದ ಸುತ್ತಾ ನಿಷೇಧಾಜ್ಞೆ ಜಾರಿ

ಮೈಸೂರು,ಆ.18– ಕರ್ನಾಟಕ ಲೋಕಸೇವಾ ಆಯೋಗದ ವತಿಯಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿಯಲ್ಲಿ ರೇಷ್ಮೆ ಇಲಾಖೆಯಲ್ಲಿನ ರೇಷ್ಮೆ ವಿಸ್ತರಣಾಧಿಕಾರಿಗಳ (RPC) ಹುದ್ದೆಗಳಿಗೆ ಕನ್ನಡ ಭಾಷಾ ಪರೀಕ್ಷೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿದ್ದು, ಸದರಿ ಪರೀಕ್ಷಾ ಕೇಂದ್ರದ ಸುತ್ತಲೂ ಇನ್ನೂರು ಮೀಟರ್ ವ್ಯಾಪ್ತಿಯಲ್ಲಿ ಆ.19 ಮತ್ತು 20 ಪರೀಕ್ಷಾ ದಿನಗಳಂದು ಕಲಂ 144 ರೀತಿಯ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆ.21ರಂದು ಚಿತ್ರಕಲಾ ಪ್ರದರ್ಶನ

ಮೈಸೂರು, ಆ.18(ಎಂಟಿವೈ)– ಮೈಸೂರಿನ ವಿಜಯನಗರದ ಎರಡನೇ ಹಂತದ ವಾಟರ್ ಟ್ಯಾಂಕ್ ಸಮೀಪವಿರುವ ನೆರಳು ಬೆಳಕು ಕಾಫಿ ಸಿಟಿ ಗ್ಯಾಲರಿಯಲ್ಲಿ ಆ.21ರಂದು ಬೆಳಗ್ಗೆ 11ಕ್ಕೆ ಚಿತ್ರಕಲಾ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಕಲಾವಿದ ಆರ್.ಪ್ರವೀಣ್ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾವು ರಚಿಸಿರುವ ಜಲವರ್ಣಗಳ ಅಪರೂಪದ ಚಿತ್ರಕಲೆಗಳನ್ನು ಈ ಪ್ರದರ್ಶನದಲ್ಲಿ ಪ್ರದರ್ಶಿಸಲಾಗುತ್ತಿದೆ. ಈ ಹಿಂದೆ ಮುಂಬೈನಲ್ಲಿ ಪ್ರತಿಷ್ಠಿತ ಜಹಂಗೀರ್ ಕಲಾಗ್ಯಾಲರಿಯಲ್ಲಿ ಚಿತ್ರಕಲಾ ಪ್ರದರ್ಶನ ನಡೆಸಲಾಗಿತ್ತು. ತಮ್ಮ ವನ್ಯಜೀವಿ ಜಲವರ್ಣ ಚಿತ್ರಗಳು ಜನಪ್ರಿಯವಾಗಿವೆ. ತಮ್ಮ ಕಾಡಿನ ಅನುಭವ ಕುಂಚದಲ್ಲಿ ಅರಳಿದೆ. ಈ ಅಪರೂಪದ ಚಿತ್ರ ಪ್ರದರ್ಶನಕ್ಕೆ ಡಿಸಿಪಿ ಎಂ.ಮುತ್ತುರಾಜ್, ಸಾಹಿತಿ ಅಬ್ದುಲ್ ರಶೀದ್ ಚಾಲನೆ ನೀಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಛಾಯಾಗ್ರಾಹಕ ಗೌರೀಶ್, ವಿಶ್ವನಾಥ್ ಇದ್ದರು.

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

**ASTROLOGY CONSULTATION/ REMEDIES**
ACHARYA ADITYA
(Astrologer, Reiki & Aroma Therapist)
9611110601

**ಸ್ವಂತ ಕಾರಿಗೆ ಡ್ರೈವರ್ ಬೇಕಾಗಿದ್ದಾರೆ**
ಚಾಮುಂಡಿಪುರಂ ಸುತ್ತಮುತ್ತಲಿನವರಿಗೆ ಆದ್ಯತೆ
ಸಂಬಳ: 12000/–
9448293548

**S.K.CONSTRUCTION**
ಕನಸು ನಿಮ್ಮದು ನನಸು ನಮ್ಮದು ಹೊಸ ಮನೆ ಕಟ್ಟಬೇಕೆ? ಚಿಂತೆ ಬೇಡ, Loan ಮಾಡಿಸಿ ಪ್ರಾರಂಭ 25% ನಾವೇ ಹಾಕಿ 3D Plan ಸಹಿತ ಉತ್ತಮ ಗುಣಮಟ್ಟದ ಮನೆ ಮಾಡಿಕೊಡುತ್ತೇವೆ.
9620528490

**ಕೆಲಸಕ್ಕೆ ಬೇಕಾಗಿದ್ದಾರೆ**
1. ಸೆಕ್ಯೂರಿಟಿ ಗಾರ್ಡ್ (ಪುರುಷರು): ವಸತಿ ಮತ್ತು ಊಟದ ವ್ಯವಸ್ಥೆ ಇರುತ್ತದೆ. ಕೆ.ಆರ್.ಎಸ್. ರಸ್ತೆ, ಚಾಮುಂಡಿಪುರಂ, ಲಲಿತಾದ್ರಿಪುರ, ಉತ್ತನಹಳ್ಳಿ, ಸಿದ್ದಾರ್ಥ ಲೇಔಟ್, ನಂಜನಗೂಡು, ಸಿಂಧುವಳ್ಳಿ, ಬೇಗೂರು ಹತ್ತಿರ
8310098788

**HOUSE FOR SALE**
3 Bedroom Duplex House Fully Furnished, 20x30 N/F Door at Dattagalli Near Kadamba bakery
Price - 79 Lakhs
Contact Owner
6361295132

**ತಕ್ಷಣ ಬೇಕಾಗಿದ್ದಾರೆ**
ಆಫೀಸ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ತಕ್ಷಣ ಸಂಪರ್ಕಿಸಿ
9880151303

**SITE FOR SALE**
Commercial 9130 Sqft West Face on Service road, Near High way Circle, Mysore.
9620026084

**RV CONSTRUCTIONS**
RATE STARTS FROM Rs. 1690/- Per Sqft.
NO ADVANCE
BILLING ON STAGE By Stage Completion
Office : 0821-2002063
7975110915
D.Subbaiah Road, Mysore

**REQUIRED SALESMAN**
SM STAR'S PRIME CHICKEN FRESH CLEAN & DELICIOUS
For Chicken Retail Outlets in Mysore.
Qualification: Min., II PUC. Age: 20-35 yrs
2 Wheeler licence is must
SM STAR's PRIME CHICKEN
Contact: 7619529812

**ಶ್ರೀ ಬನಶಂಕರಿ ರಿಯಲ್ ಎಸ್ಟೇಟ್**
20x30 ಡ್ಯೂಪ್ಲೆಕ್ಸ್ ಹೊಸಮನೆ
30x30 ಡ್ಯೂಪ್ಲೆಕ್ಸ್ ಹೊಸಮನೆ
40x60 ಡ್ಯೂಪ್ಲೆಕ್ಸ್ ಹೊಸಮನೆ
ಎಲ್ಲಾ ಅಳತೆ ಸೈಟ್ ಹೊಸ ಮನೆ ಹಳೇಮನೆ, ಎಲ್ಲಾ ಬಡಾವಣೆಗಳಲ್ಲಿ ಮಾರುವವರು, ಕೊಳ್ಳುವವರು
8618495118

**WANTED**
TAGS Footwear and Accessories
Salesman Required with experience for 3-5 years in the Footwear Showroom
Salary - 12000/- to 15000/- (Negotiable)
9611459290/ 9845338501

**FOR SALE**
5 BHK HOUSE & GODOWN (5.5 CENT) is for sale at Bypass Road Gonikoppal (Coorg) - 571213, Karnataka
Call : 96630 76582 / 94834 18056

**ಸೈಟ್ ಬೇಕಾಗಿದೆ**
ಸಪ್ತಮಾತೃಕೆ ಲೇಔಟ್, ವಸಂತನಗರ, ಗೋಪಾಲ್ ಗೌಡ ನಗರ, ಲಾಲ್ ಬಹದ್ದೂರ್ ಶಾಸ್ತ್ರಿ ನಗರ, ಕೆ.ಬಿ.ಎಲ್ ಗ್ರೀನ್‌ವುಡ್,
We wanted the site any dimension contact :
9741614466
9741603322

**SITE FOR SALE**
30X40 Muda Allotted Hanchya- Sathagalli "B" Zone Near Hamsa Circle Rs. 56 Lakhs Slightly Negotiable (Brokers Excuse)
9035150919

**ಟಿವಿ ರಿಪೇರಿ**
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

**ನಿರ್ಮಲ ಸರ್ವೀಸ್**
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

**ಸೈಟುಗಳು ಮಾರಾಟಕ್ಕಿವೆ ಮುಡಾ ಅಪ್ರೂವ್ಡ್**
30x40 - North West, 40x60 N/F, 40x60 W/F, 58x60 North East Corner ರಿಂಗ್ ರಸ್ತೆ ಹತ್ತಿರ, ಯೂನಿವರ್ಸಿಟಿ ಲೇಔಟ್ ಎದುರು.
30x50 E/F ATME Engineering ಕಾಲೇಜ್ ಪಕ್ಕ.
40x60 East face ವರುಣ ಹತ್ತಿರ.
Mob: 9900372792

**ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್**
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

**ತಕ್ಷಣ ಬೇಕಾಗಿದ್ದಾರೆ**
ಯಾದವಗಿರಿ ಒಂಟಿಕೊಪ್ಪಲ್, ಬನ್ನಿಮಂಟಪ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಮತ್ತು ಸೆಕ್ಯೂರಿಟಿ ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC
ಸಂಬಳ: S/SUP: 18000
S/G : 16700/-
ESI & PF ಸೌಲಭ್ಯ ಇರುತ್ತದೆ.
9620667819
9880727819

**GSS**
THE MOST TRUSTED REAL ESTATE BRAND IN MYSURU
100 SITES REQUIRED
MUDA OR DTCP
• FULLY DEVELOPED
• UNDER DEVELOPED
• PLAN SANCTIONED
96868-25025

**AFFIDAVIT**
I, Prakash.S S/o. Shivannagowda, aged 39 yrs, Residing at # 649, behind Kirloskar compound, Belavadi Village and Post, Yelwala do hereby swear that in my Aadhar card, Pan card & Voter ID my name is mentioned as Prakash.S & in my passport No. L5980805 my name mentioned as Prakasha.S. Hence I affirm that both the names belongs to me only vide affidavit sworn before Notary C.R. Seetharam on 16.08.2023.
Sd/- Prakash.S

**ಬೇಕಾಗಿದ್ದಾರೆ**
ಮೈಸೂರಿನ ವಿಜಯನಗರದ ವಾಟರ್ ಟ್ಯಾಂಕ್ ಹತ್ತಿರವಿರುವ ಹೋಟೆಲ್‌ಗೆ ಕ್ಯಾಷಿಯರ್ (ಮಹಿಳೆ) ಬೇಕಾಗಿದ್ದಾರೆ. ಹಾಗೂ ಸಪ್ಲೈಯರ್ ಬೇಕಾಗಿದ್ದಾರೆ.
8867410444
9449091100

**ಅಂಜನ ಶಾಸ್ತ್ರದ ಮೂಲಕ ಪರಿಹಾರ**
ಶ್ರೀ ಅಂಜನ ದೇವಿ ಆರಾಧಕರು ಪಂ॥ ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶ ಪಾರಂಪರ್ಯ ಜ್ಯೋತಿಷ್ಯರು ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಶೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ
9663466548

**HOUSE FOR LEASE**
Newly Built 2BHK Independent House Fully Furnished with Solar @ Lalithadri Nagar Near Ring Road, Behind Indian Oil Petrol Bunk
9902729729

**ಬೇಕಾಗಿದ್ದಾರೆ**
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ನೈಟ್ ಶಿಫ್ಟ್ ಕೆಲಸ ಮಾಡಲು ಹುಡುಗರು/ ಪುರುಷರು ಬೇಕಾಗಿದ್ದಾರೆ.
ಸಂಬಳ: 12,000/–
7899754149

**ಮುಡಾ ಅಪ್ರೂವ್ಡ್**
40x60 ಸೈಟ್ ಮಾರಾಟಕ್ಕಿದೆ ತಕ್ಷಣ ಮನೆ ಕಟ್ಟಬಹುದು
ಸೆಂಟ್ ಜೋಸೆಫ್ ಶಾಲೆಯ ಹತ್ತಿರ ಇಲವಾಲ, ಮೈಸೂರು
8217851695

**DTCP SITES FOR SALE**
DTCP Sites Rs. 699 per sq.ft., Near Jayapura, H.D. Kote Road, Mysore.
9590491194,9606783264

**ಬೇಕಾಗಿದ್ದಾರೆ**
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಅಕೌಂಟೆಂಟ್ ಬೇಕಾಗಿದ್ದಾರೆ ಹುಡುಗಿಯರು/ಮಹಿಳೆಯರಿಗೆ ಮಾತ್ರ. ಸಂಬಳ: 18,000/–
9902754149

**ಮುಡಾ ಸೈಟು ಮಾರಾಟಕ್ಕಿದೆ**
ಟೀಚರ್ಸ್ ಲೇಔಟ್, ವಾಣಿಜ್ಯ ನಿವೇಶನ ಸಂಖ್ಯೆ : 17, 50x40 ಮತ್ತು ಅದಕ್ಕೆ ಹೊಂದಿಕೊಂಡಂತೆ ರೇವೆನ್ಯೂ ನಿವೇಶನ 50x35
ಡಾ. ರಾಜಕುಮಾರ್ ರೋಡ್, ಶುಭೋದಯ ಆಸ್ಪತ್ರೆ ಎದುರು
9972725694

**ಬೋಳು ತಲೆಯ ಸಮಸ್ಯೆಯೇ?**

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
# 574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

**WANTED**
Receptionist ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
ಸಂಬಳ 20000-25000/-
Ph.9380142144
SHIVARAMPET, MYSURU

**ಸಂಪು ಮತ್ತು ಟ್ಯಾಂಕ್**
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

**100% TEAK WOOD FACTORY FINISH DOORS**
@ DEPOT RATES

10 YEARS WARRANTY
www.ssbuildmart.com
9901291267
9845426862

**ಬೇಕಾಗಿದ್ದಾರೆ**
ಫರ್ನಿಶಿಂಗ್ ಅಂಗಡಿಗೆ ಮಹಿಳೆಯರು Telecallers ಕೆಲಸಕ್ಕೆ ಬೇಕಾಗಿದ್ದಾರೆ.
With good communication Skill in Hindi & Kannda
1 year Experience
Address : Akbar Road, Near Ashoka Road,
9916459786

**ಉದ್ಯೋಗವಕಾಶ**
ಮೈಸೂರಿನ ಹೆಸರಾಂತ ವೈದ್ಯಕೀಯ ಸೇವಾ ಸಂಸ್ಥೆಯಲ್ಲಿ ವಯೋವೃದ್ಧರು, ರೋಗಿಗಳು ಮತ್ತು ವಿಶೇಷ ಚೇತನರನ್ನು ನೋಡಿಕೊಳ್ಳಲು ಶ್ರದ್ಧೆ, ನಿಷ್ಠೆ ಹಾಗೂ ಸೇವಾ ಮನೋಭಾವದಿಂದ ಕೆಲಸ ನಿರ್ವಹಿಸಲು ಯುವಕ, ಯುವತಿಯರು ಮತ್ತು ಮಹಿಳೆಯರು ತಕ್ಷಣ ಬೇಕಾಗಿದ್ದಾರೆ.
ವಿದ್ಯಾರ್ಹತೆ : 7/ 10/PUC, ANM, GNM, Pass / Fail ತಿಂಗಳ ಸಂಬಳ: 10,000/- ರಿಂದ 25000/-
9663119111,7349278501
08214242351

**ಸಂಪು ಕ್ಲೀನಿಂಗ್‌ಗಾಗಿ**
ಸಂಪರ್ಕಿಸಿ:
8861612486

**FOR SALE**
1) 39x55 G+1 House Saraswathipuram
2) 54x80 NW Duplex House Lava Kusha Park Kuvempu Nagar
3) 40x60 Vishwaprajna Bogadi Rd
4) 20x30 Duplex and G+1 Ramakrishna Nagar
4) 30x40 Hd Kote Road 16 lakhs
5) 40x50 KSRTC Layout ,40x50 Bogadi
Prakruthi Properties
9538690359,9035990359

**ಮನೆ ಬಾಡಿಗೆಗೆ/ಬೋಗ್ಯಕ್ಕೆ**
ಮೈಸೂರಿನಲ್ಲಿ ವಾಸ್ತವವಾಗಿರುವ ಮನೆಯನ್ನು ಬೋಗ್ಯಕ್ಕೆ ಅಥವಾ ಬಾಡಿಗೆಗೆ ಕೊಡಿಸುತ್ತೇವೆ ಹಾಗೂ ಬಾಡಿಗೆಗೆ ಅಥವಾ ಬೋಗ್ಯಕ್ಕೆ ಕೊಡುವ ಮಾಲೀಕರು ಸಂಪರ್ಕಿಸಿ
9206470833 ಸುರೇಶ್

**READY TO BUILT**
40X60 MUDA APPROVED SITE FOR SALE WITH BORE
NEAR ST.JOSEPH SCHOOL YELWALA, MYSORE
8217851695

**ಬೇಕಾಗಿದ್ದಾರೆ**
ಬ್ರಾಹ್ಮಣ ಅಥವಾ ಆರ್ಯವೈಶ್ಯ ಜನಾಂಗದ ಮಹಿಳೆ ಸಸ್ಯಹಾರ ಅಡುಗೆ ಕೆಲಸಕ್ಕಾಗಿ ಬೇಕಾಗಿದ್ದಾರೆ. ಸಂಬಳ 10 ಸಾವಿರ ಮತ್ತು ಊಟ ನೀಡಲಾಗುತ್ತದೆ. ವಯಸ್ಸಿನ ಮಿತಿ 45 ವರ್ಷ, ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಶ್ರೀ ವಾಸವಿ ಶಾಂತಿಧಾಮ, ಆಲನಹಳ್ಳಿ, ಮೈಸೂರು
9353267509

**ತಕ್ಷಣ ಬೇಕಾಗಿದ್ದಾರೆ**
ಆಫೀಸ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಯೋಮಿತಿ : 21 ರಿಂದ 30
ವಿದ್ಯಾರ್ಹತೆ : ಪಿಯುಸಿ
7795294946
6361551913

**ಬೇಕಾಗಿದ್ದಾರೆ /Wanted**
ಮಾರ್ಕೆಟಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ತಯಾರಕರು : ಪರಿಸರ ಸ್ನೇಹಿ ಕಾಗದದ ತಟ್ಟೆ, ಲೋಟ, ಅಡಿಕೆ ಪ್ಲೇಟ್ ಇತ್ಯಾದಿ.
Marketing Executive For Manafactures of Eco-friendly Products
8884633339

**100% NEEM WOOD PLYWOOD & DOORS**
@ FACTORY DEPOT RATES
NEEM BOND PLATINUM ® 10yrs WARRANTY
ISO 9001:2015 Certified Depot
CALL 99012 91267
98454 26862

**New House for Sale**
at ESS & ESS Layout Near J.P. Nagara Ring Road. 2 BHK, 30x40 East face.
MOB: 9886185597
**SITE FOR SALE**
At Bhumika Layout, Near Yelawala, North Face 40x40.
Mob: 7975583406

**ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್**
21–9–23: ನೇಪಾಳ್ ಮುಕ್ತಿನಾಥ್, ಕಠ್ಮಂಡು, ಮನೋಕಾಮನ, ಪೋಕ್ರ, ಲುಂಬಿನಿ, ಜೋಮೋ ಸೋಮ್, ಪಶುಪತಿನಾಥ್, ಸ್ವಯಂಭುನಾಥ್, ಅಯೋಧ್ಯೆ, ಗೋರಖ್‌ಪುರ್.
30–9–23: ಕಾಶಿ, ಗಯಾ, ಅಯೋಧ್ಯೆ, ಪ್ರಯಾಗ್‌ರಾಜ್.
11–9–23: ಪುರಿ ಜಗನ್ನಾಥ್, ಕೋನಾರ್ಕ್, ಚಂದ್ರಭಾಗ್ ಬೀಚ್, ಭುವನೇಶ್ವರ.
7–9–23: ರಾಮೇಶ್ವರಂ, ಕನ್ಯಾಕುಮಾರಿ, ಮಧುರೈ
9591017782, 9964527782

**30x40 E/F**
ಸೈಟು @ Rs.30 ಲಕ್ಷ
MUDA APPROVED LAYOUT ತಕ್ಷಣ ನೋಂದಣಿ/ ಬ್ಯಾಂಕ್ ಲೋನ್ ಲಭ್ಯ
ಬನ್ನೂರ್ ರಸ್ತೆ, ಮೈಸೂರು ರಿಂಗ್ ರೋಡ್ ನಿಂದ 4 KMS
9538583377

**ಜಮೀನು ಮಾರಾಟಕ್ಕಿದೆ**
ತಲಕಾಡು ವಿಜಯಪುರ ಸರ್ವೆ ನಂಬರಿನ 22 ಗುಂಟೆ ಕೃಷಿ ಜಮೀನು. ರೂ. 8 ಲಕ್ಷ
7975957605

**ಮನೆ ಬಾಡಿಗೆಗೆ/ ಭೋಗ್ಯಕ್ಕೆ**
3ನೇ ಅಂತಸ್ತಿನಲ್ಲಿರುವ ಸಿಂಗಲ್ ಬೆಡ್ ರೂಂ ಮನೆ, ಗೌರಿಶಂಕರನಗರದಲ್ಲಿ ಇದೆ.
9972605463
9900970111

**MYSORE RATINA CARE**
Staff Required
1. O.T. Technician / Optometrist
2. Receptionist
Niveditha nagar, Mysore
7338369364

**ಸೈಟು ಮಾರಾಟಕ್ಕಿದೆ**
30x40, S/F, 56 ಲಕ್ಷ ರೂಪನಗರ, ಬೋಗಾದಿ
30x40 E/S Corner 70 ಲಕ್ಷ. SBM ಲೇಔಟ್, ಬೋಗಾದಿ, ಮೈಸೂರು
9845765573

**ತಕ್ಷಣ ಬೇಕಾಗಿದ್ದಾರೆ**
ಆಫೀಸ್ ಕಂಪನಿ ಮತ್ತು ಶೋರೂಂಗಳಿಗೆ 10th, PUC, ITI, Diploma, B.A, B.Com, BBM, BE, MBA, Any Degree (Pass /Fail) ಆದ ಯುವಕ ಮತ್ತು ಯುವತಿಯರು ಕ್ಯಾಷಿಯರ್, ಬಿಲ್ಲಿಂಗ್, ಡೇಟಾ ಎಂಟ್ರಿ, ಕ್ವಾಲಿಟಿ ಚೆಕ್ಕಿಂಗ್, ಪ್ಯಾಕಿಂಗ್, ಹೆಲ್ಪರ್, ಮಿಷನ್ ಆಪರೇಟರ್, ಆಫೀಸ್ ಅಸಿಸ್ಟೆಂಟ್, ಟೆಲಿಫೋನ್ ಅಟೆಂಡರ್, ಅಕೌಂಟೆಂಟ್ ಇತ್ಯಾದಿ ಕೆಲಸಗಳಿಗೆ ಯುವಕ& ಯುವತಿಯರು ಬೇಕಾಗಿದ್ದಾರೆ. ESI, PF ನೊಂದಿಗೆ ಸಂಬಳ 15,000 ರಿಂದ 60,000/-
9036548905,6364103418

**ತಕ್ಷಣ ಬೇಕಾಗಿದ್ದಾರೆ**
ಮೈಸೂರು, ನಂಜನಗೂಡುನಲ್ಲಿರುವ MNC ಕಂಪನಿಗಳಿಗೆ 7th, 10th, ITI, Diploma, PUC, B.A, B.Com, BBM, BE, Any Degree ಆದ ವರಿಗೆ ಕ್ವಾಲಿಟಿ ಚೆಕ್ಕಿಂಗ್, ಪ್ಯಾಕಿಂಗ್, ಹೆಲ್ಪರ್, ಮಿಷನ್ ಆಪರೇಟರ್, ಆಫೀಸ್ ಅಸಿಸ್ಟೆಂಟ್, ಡಾಟಾ ಎಂಟ್ರಿ, ಟೆಲಿಪೋನ್ ಅಟೆಂಡರ್, ಕ್ಯಾಷಿಯರ್ ಬಿಲ್ಲಿಂಗ್ ಅಕೌಂಟೆಂಟ್ ಇತ್ಯಾದಿ ಕೆಲಸಗಳಿಗೆ ಯುವಕ& ಯುವತಿಯರು ಬೇಕಾಗಿದ್ದಾರೆ. ESI, PF ನೊಂದಿಗೆ ಸಂಬಳ 15,000 ರಿಂದ 55,000/-
9739857142, 9008838172

**40x73 E/F**
ಸೈಟು @ Rs.94 ಲಕ್ಷ
MUDA APPROVED LAYOUT ತಕ್ಷಣ ನೋಂದಣಿ/ ಬ್ಯಾಂಕ್ ಲೋನ್ ಲಭ್ಯ
ವಿಜಯನಗರದ ನಂತರ ಮೈಸೂರು ರಿಂಗ್ ರೋಡ್ ನಿಂದ 4 KMS
9538583377

40x60 ಅಳತೆಯ DTCP 'A' ಖಾತೆಯುಳ್ಳ ಸೈಟು ಮಾರಾಟಕ್ಕಿದೆ 23 ಲಕ್ಷದ 50 ಸಾವಿರಗಳು ನಂಜುಂಡೇಶ್ವರ ನಗರ TVS ಫ್ಯಾಕ್ಟರಿ ಹತ್ತಿರ, W/F ಮೈಸೂರು
9742198093

**ವಧು–ವರಾನ್ವೇಷಣೆ**
ಒಕ್ಕಲಿಗ/ಕುರುಬ/ ಲಿಂಗಾಯತ/ನಾಯಕ/SC & ಎಲ್ಲಾ ಜಾತಿಯ ವಧು ವರರಿಗಾಗಿ ಸಂಪರ್ಕಿಸಿ
(II Marriage Also)
9343175000

**ಹೋಂ ನರ್ಸಿಂಗ್ ಕೆಲಸ**
ಮೈಸೂರಿನ ಹೆಸರಾಂತ ಹೆಲ್ತ್ ಕೇರ್ ಸಂಸ್ಥೆಗೆ ಹೋಂ ನರ್ಸಿಂಗ್ ಕೆಲಸಕ್ಕೆ ಯುವಕ, ಯುವತಿಯರು, ಮಹಿಳೆಯರು, ವಿಧವೆಯರು ತಕ್ಷಣವೇ ಸಂಪರ್ಕಿಸಿ, ಊಟ, ವಸತಿಯೊಂದಿಗೆ ಸಂಬಳ 13000–18000 ಇರುತ್ತದೆ (ಮೊದಲು ಬಂದವರಿಗೆ ಆದ್ಯತೆ)
9035113222

**SITE FOR SALE**
30x40 at Kumarabeedu (Deepa Housing Society)
40x60 & 30x40 at R.K. Nagar & Kuvempunagar
9663136318

**Aquaguard & Kent Sales and Service**
Service Charge: 300/-
9901200444

**(30x40) 2 Sites For Sale**
@ Olive Enclave Mys-B'lore Highway 3Km From Columbia Hospital, 26 Lakhs
9538839926

**ಮೈಸೂರು ಮ್ಯಾರೇಜ್ ಬ್ಯೂರೋ**
ಎಲ್ಲಾ ಜಾತಿಯ ವಧು ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ.
9448229184
7899625268
1) Lady Receptionist ಬೇಕಾಗಿದ್ದಾರೆ.
2) ಕನ್ನಡ ಪತ್ರಿಕೆಗೆ ವಿದ್ಯಾವಂತ Dynamic ದ್ವಿಚಕ್ರ ವಾಹನವುಳ್ಳ Lady Reporter ಬೇಕಾಗಿದ್ದಾರೆ. Training ಕೊಡಲಾಗುತ್ತದೆ

**SITE FOR SALE**
30 x 40 Sites, near Gurur Bus Stop, Ramabainagar, Mysore. DTCP approved (Corporation limits) Bank Loan upto 80%,
1.5 Kms from JP Nagar Ring Road
8660105902

**HOUSE FOR RENT**
Ist and IInd Floor, 2BHK, Bike Parking, Gas Geyser, East Facing, Near Shantala Theater Signal Light, Prefered Small Veg family
8050263082

**ಸುವರ್ಣ ಯಾತ್ರ**
ಶ್ರಾವಣ ಮಾಸದ ಪ್ರಯುಕ್ತ 2 ಜ್ಯೋತಿರ್ಲಿಂಗ್ ಸೇರಿ ಕಾಶಿ ಪ್ರವಾಸ 7 ದಿನಗಳು 30/08/2023 (ಬಾಬಾ ವೈದ್ಯನಾಥ, ಗಯಾ, ಬುದ್ಧಗಯಾ, ಪ್ರಯಾಗ್ ರಾಜ್, ಅಯೋಧ್ಯ, ನೈಮಿಶಾರಣ್ಯ)
9008381022
9019462508

**WANTED**
Teachers for Pre-School
Office Assistant (Computer Knowledge-MS Office Must)
Gokulam 3rd Stage, Mysore
9448031964
7795301535

**WANTED**
ಲಾಲ್ ಬಹದ್ದೂರ್ ಶಾಸ್ತ್ರಿನಗರ, ಗೋಪಾಲಗೌಡ ನಗರ, ಲಲಿತಾದ್ರಿನಗರಗಳಲ್ಲಿ ಸೈಟುಗಳು ಬೇಕಾಗಿದೆ.
20x30 - 30x40
9900125239

30x30 ಅಳತೆಯ MUDA ಖಾತೆಯುಳ್ಳ ಸೈಟು ಮಾರಾಟಕ್ಕಿದೆ 21 ಲಕ್ಷದ 50 ಸಾವಿರಗಳು ಯಶಸ್ವಿನಿ ಲೇಔಟ್ ಶ್ರೀನಗರದಿಂದ 1 ಕಿ.ಮೀ ಮೈಸೂರು
20x30 ಅಳತೆಯ KHB ಸೈಟು ಮಾರಾಟಕ್ಕಿದೆ 9 ಲಕ್ಷದ 50 ಸಾವಿರಗಳು ಇಲವಾಲ ಹತ್ತಿರ, ಮೈಸೂರು
9742198093

**Part/Full Time**
ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ, Flipkart/Amazon ನಲ್ಲಿ ಡೆಲಿವರಿ ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ.
ಸಂಬಳ: 15000+Incentive
Location: Mysore, CH Nagar, Hassan, Madikeri, Mandya
ಬೇಕಾದ ದಾಖಲಾತಿಗಳು : DL/LLR, ಆಧಾರ್, ಕೂಡಲೇ ಸಂಪರ್ಕಿಸಿ:
7795420892

**ಸೈಟು ಬೇಕಾಗಿದೆ**
ಲಾಲ್ ಬಹದ್ದೂರ್ ಶಾಸ್ತ್ರಿನಗರ ವಸಂತನಗರ, ಶಾಂತವೇರಿ ಗೋಪಾಲಗೌಡ ನಗರ, ಸಪ್ತ ಮಾತೃಕ ಲೇಔಟ್, ಪೊಲೀಸ್ ಲೇಔಟ್ ಜೆ.ಎಸ್.ಎಸ್.ಲೇಔಟ್
9844436672

**ಕೌಶಲ್ಯ ತರಬೇತಿ**
ಮೈಸೂರಿನ ಪ್ರತಿಷ್ಠಿತ ತರಬೇತಿ ಸಂಸ್ಥೆಯಿಂದ ವೃತ್ತಿ ತರಬೇತಿಗಳಾದ ಟೈಲರಿಂಗ್, ಎಂಬ್ರಾಯಿಡರಿ ಕಂಪ್ಯೂಟರ್, ಬ್ಯೂಟಿಷಿಯನ್ ಅಣಬೆ ತಯಾರಿಕೆ ತರಬೇತಿ, ಫಿನಾಯಿಲ್, ಸೋಪ್‌ಆಯಿಲ್ ತಯಾರಿಕೆ ತರಬೇತಿಗಳನ್ನು ಅಶೋಕಪುರಂ, ಮಹದೇವಪುರ (ಜೆ.ಪಿ.ನಗರ) ಮತ್ತು ಸಿದ್ದರಾಮನಹುಂಡಿ ಕೇಂದ್ರಗಳಲ್ಲಿ ನಡೆಸುತ್ತಿದ್ದು ಆಸಕ್ತರು ಸಂಪರ್ಕಿಸಿ
8496836161,
9738177642,9110847078

**ಸೆಕ್ಯೂರಿಟಿ ಬೇಕಾಗಿದ್ದಾರೆ**
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳನಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ವೇತನ 17000/– ESI, PF, ಉಚಿತ ಊಟ, 08 ಗಂಟೆ ಕೆಲಸ & Week off ವಯಸ್ಸು 25 ರಿಂದ 45ರ ಒಳಗೆ, ವಿದ್ಯಾರ್ಹತೆ SSLC ಮೇಲ್ಪಟ್ಟು
9538014456
9538886654

**WANTED**
Technicians for Home Appliances
Qualification : SSLC/PUC/ITI (Pass /Fail)
7975368452

**WANTED ENGLISH TEACHER**
for 4th to 8th standard.
JNANAJYOTHI MONTESSORI TEACHER'S TRAINING INSTITUTE, BEERIHUNDI.
ADMISSION OPEN.
Build A career in Teaching.
9845390377,8197057626

**ಹಳೇ ಕಮರ್ಷಿಯಲ್ ಮನೆ ಮಾರಾಟಕ್ಕಿದೆ**
18x40 ಸರ್ವೋದಯ ಮೇನ್ ರಸ್ತೆ ಎಂ.ಬ್ಲಾಕ್, 22,000 ಬಾಡಿಗೆ ಬರುತ್ತಿದೆ. ಕುವೆಂಪುನಗರ, 92 ಲಕ್ಷ ನೆಗೋಷಿಯಬಲ್
ಕಿರಣ್: 9731517698
ಉಮಾ: 8496923877

**ಮೈಸೂರು ಮಿತ್ರ ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಸೋಮವಾರ ಗುರುವಾರ ಶನಿವಾರ**
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

# ಒಳ್ಳೆಯ ಹವ್ಯಾಸಗಳನ್ನು ಮರೆಯಲಾಗದು

## ವಿಶ್ವ ಛಾಯಾಗ್ರಹಣ ದಿನಾಚರಣೆಯಲ್ಲಿ ಡಾ. ಎಸ್.ವಿ. ನರಸಿಂಹನ್ ಅಭಿಪ್ರಾಯ



ಮಡಿಕೇರಿ, ಆ.18– ಯಾವುದೇ ಒಂದು ಒಳ್ಳೆಯ ಹವ್ಯಾಸವನ್ನು ಪ್ರೀತಿಯಿಂದ ಅಧ್ಯಯನ ಮಾಡಿದರೆ ಅದು ಜೀವನ ಪೂರ್ತಿ ಮರೆಯಲು ಸಾಧ್ಯವಾಗುವುದಿಲ್ಲ. ಅದು ನಮಗೆ ನೀಡುವ ಜ್ಞಾನ ಮತ್ತು ಶಾಂತಿ, ಸಮಾಧಾನಗಳು ವರ್ಣನೆಗೆ ನಿಲುಕದ್ದು ಎಂದು ಖ್ಯಾತ ಪಕ್ಷಿ ತಜ್ಞ ಡಾ.ಎಸ್.ವಿ. ನರಸಿಂಹನ್ ಹೇಳಿದ್ದಾರೆ.

ಕೊಡಗು ಪತ್ರಕರ್ತರ ಸಂಘದ ಕುಶಾಲನಗರ ತಾಲೂಕು ಘಟಕದಿಂದ ಶುಕ್ರವಾರ ಮಾದಾಪುರದ ಡಿ.ಚೆನ್ನಮ್ಮ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ವಿಶ್ವ ಛಾಯಾಗ್ರಹಣ ದಿನಾಚರಣೆಯನ್ನು ಫೋಟೋ ಕ್ಲಿಕ್ಕಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಛಾಯಾಗ್ರಹಣ ಕೂಡ ಒಂದು ಅದ್ಭುತ ಹವ್ಯಾಸ. ಕ್ಯಾಮೆರಾ ಮುಂದೆ ಗಂಟೆಗಟ್ಟಲೆ ಕೂರುವುದು ಕೂಡ ಒಂದು ಹವ್ಯಾಸದಂತಾಗಿ ಹತ್ತು ಫೋಟೋಗಳಿಗೆ ಒಂದು ಫೋಟೋ ಚೆನ್ನಾಗಿ ಬಂದರೂ ಕೂಡ ಅದನ್ನು ಸಂಭ್ರಮಿಸುವವರು ನಮ್ಮ ನಡುವೆ ಇದ್ದು, ಅಂತಹವರಲ್ಲಿ ನಾನು ಕೂಡ ಒಬ್ಬ ಎಂದರು.

ಛಾಯಾಗ್ರಹಣ, ಪಕ್ಷಿ ವೀಕ್ಷಣೆ, ಪ್ರಕೃತಿ ಮತ್ತು ಪರಿಸರ ಪ್ರೇಮ, ಖಗೋಳಶಾಸ್ತ್ರ ಇವೆಲ್ಲವನ್ನು ನಾನು ನನ್ನ ವೃತ್ತಿಯ ನಡುವೆ ಪ್ರೀತಿಯಿಂದ ಬೆಳೆಸಿಕೊಂಡ ಹವ್ಯಾಸಗಳಾದ ಹಿನ್ನೆಲೆಯಲ್ಲಿ ಈ ಹವ್ಯಾಸಗಳು ಹೆಸರು ಮನ್ನಣೆಗಳನ್ನು ಕೂಡ ತಂದು ಕೊಟ್ಟಿದೆ ಎಂದರು. ನಮ್ಮ ಕಾಲದಲ್ಲಿ ರೀಲ್ ಬಳಸಿ ಛಾಯಾಚಿತ್ರ ಗ್ರಹಣ, ಕೆಲವೇ ವರ್ಷಗಳಲ್ಲಿ ಡಿಜಿಟಲ್ ಕ್ಯಾಮೆರಾ ಮತ್ತು ಪ್ರಸ್ತುತ ದಿನಗಳಲ್ಲಿ ಪ್ರತಿಯೊಬ್ಬರು ಮೊಬೈಲ್ ಕ್ಯಾಮೆರಾ ಬಳಸಿ ಯಾವುದೇ ರೀತಿಯ ಛಾಯಾ ಚಿತ್ರವನ್ನು ಕೂಡ ಮಾಡಬಹುದು ಎಂದು ಅವರು ವಿಶ್ಲೇಷಿಸಿದರು.

ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಎ. ಮುರುಳೀಧರ್ ಮಾತನಾಡಿ ಪತ್ರಿಕೋದ್ಯಮ ಹಾಗೂ ಛಾಯಾಚಿತ್ರಕ್ಕೆ ಅವಿನಾಭಾವ ಸಂಬಂಧ ಇದೆ. ಒಂದು ಚಿತ್ರ ಸಾವಿರ ಪದಗಳಿಗೆ ಸಮ ಎಂದು ಹೇಳಿದ ಅವರು, ಭಾವನೆ ಮತ್ತು ಸೂಕ್ಷ್ಮತೆ ಅರ್ಥ ಮಾಡಿಕೊಂಡು ಚಿತ್ರಗಳನ್ನು ತೆಗೆಯುವಂತೆ ಸಲಹೆ ನೀಡಿದರು.

ಕಾಲೇಜಿನ ಪ್ರಾಂಶುಪಾಲ ಮಂದಪ್ಪ ಮಾತನಾಡಿ, ವಿದ್ಯಾರ್ಥಿಗಳು ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಹವ್ಯಾಸಗಳು ನಮ್ಮ ವ್ಯಕ್ತಿತ್ವ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಪ್ರತಿಯೊಬ್ಬರಲ್ಲಿ ಒಂದಲ್ಲ ಒಂದು ಪ್ರತಿಭೆ ಇದ್ದು, ಹವ್ಯಾಸಗಳ ಮೂಲಕ ಅವುಗಳ ಅನಾವರಣ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ನಿವೃತ್ತ ಲೆಫ್ಟಿನೆಂಟ್ ಕರ್ನಲ್ ಬಿ.ಜಿ.ವಿ. ಕುಮಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಹಿರಿಯ ಛಾಯಾಗ್ರಾಹಕರಾದ ಎಂ.ಬಿ. ವಿನ್ಸೆಂಟ್, ಗುಡ್ಡೆಮನೆ ವಿಶು ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಪ್ರೌಢಶಾಲೆ ಮತ್ತು ಪದವಿ ಪೂರ್ವ ವಿಭಾಗದಲ್ಲಿ ಆಯೋಜಿಸಲಾಗಿದ್ದ ಛಾಯಾ ಚಿತ್ರ ಸ್ಪರ್ಧೆಯಲ್ಲಿ 105 ಚಿತ್ರಗಳ ಬಗ್ಗೆ ಕುಶಾಲನಗರ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ವಿಘ್ನೇಶ್ ಭೂತನಕಾಡು ವಿವರಣೆ ನೀಡಿದರು.

ಪ್ರೌಢಶಾಲಾ ವಿಭಾಗದಲ್ಲಿ ಹರ್ಷಿತಾ ಪ್ರಥಮ, ಯಕ್ಷಿತಾ ದ್ವಿತೀಯ, ತೃಷಾ ತೃತೀಯ, ಪದವಿ ಪೂರ್ವ ಕಾಲೇಜು ವಿಭಾಗದಲ್ಲಿ ಬಿ.ಪಿ. ಪುನಿತ್ ಪ್ರಥಮ, ತಶ್ರೀಫ್ ದ್ವಿತೀಯ, ಋಷಿಕೇಶ್ ಎಂ.ಆರ್. ತೃತಿಯ ಬಹುಮಾನ ಪಡೆದರು. ಬಿ.ಎಸ್. ಪುನಿತ್, ಸರಿತಾ, ಲಿಶ್ವಿನ್, ಕೀರ್ತನಾ, ಇಂದುಶ್ರೀ, ಮೋಹನ್ ಸಮಾಧಾನಕರ ಬಹುಮಾನ ಗಳಿಸಿದರು.

ಕಾರ್ಯಕ್ರಮದ ಮೊದಲಿಗೆ ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಕೊಡಗು ಪತ್ರಕರ್ತರ ಸಂಘದ ಗೌರವ ಸಲಹೆಗಾರ, ಶಾಲೆಯ ಹಳೆಯ ವಿದ್ಯಾರ್ಥಿ ಅನಿಲ್ ಎಚ್.ಟಿ ಕಾರ್ಯಕ್ರಮ ನಿರೂಪಿಸಿ, ವಿಘ್ನೇಶ್ ಭೂತನಕಾಡು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ರೇವತಿ, ಕುಶಾಲನಗರ ತಾಲೂಕು ಪತ್ರಕರ್ತರ ಸಂಘದ ಉಪಾಧ್ಯಕ್ಷ ಬಿ.ಸಿ. ದಿನೇಶ್, ಸಂಘದ ತಾಲೂಕು ಹಾಗೂ ಜಿಲ್ಲೆಯ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

## ಫೋಟೋಗ್ರಫಿ, ವೀಡಿಯೋಗ್ರಫಿ ಸ್ಪರ್ಧೆ: ಪತ್ರಕರ್ತರ ಪ್ರಶಸ್ತಿ ಪ್ರಕಟ






ಮಡಿಕೇರಿ, ಆ.18– ವಿಶ್ವ ಛಾಯಾಗ್ರಹಣ ದಿನಾಚರಣೆಗೆ ಸಂಬಂಧಿಸಿದಂತೆ ಕೊಡಗು ಪತ್ರಕರ್ತ ಸಂಘದ ಸದಸ್ಯರಿಗಾಗಿ ಆಯೋಜಿತ ಫೋಟೋಗ್ರಫಿ ಮತ್ತು ವಿಡಿಯೋಗ್ರಫಿ ಸ್ಪರ್ಧೆಯಲ್ಲಿ ಜಿಲ್ಲೆಯ ನಾಲ್ವರು ಪತ್ರಕರ್ತರು ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಸಂಘದಿಂದ ಕೊಡಮಾಡುವ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಅತ್ಯುತ್ತಮ ಫೋಟೋಗ್ರಫಿ ಸ್ಪರ್ಧೆಯಲ್ಲಿ ಸಂಯುಕ್ತ ಕರ್ನಾಟಕದ ಮೂರ್ನಾಡು ವರದಿಗಾರ ಟಿ.ಸಿ.ನಾಗರಾಜ್ ಅವರ 'ಪೈರು ಹೊತ್ತ ರೈತ' ಪ್ರಥಮ ಸ್ಥಾನ, ವಿಶ್ವವಾಣಿ ಜಿಲ್ಲಾ ವರದಿಗಾರ ಅನಿಲ್ ಎಚ್.ಟಿ. ಅವರ 'ಪೈರು ಬೆಳೆಯಲು ಒಂದಾಗಿ ಬಂದೆವು' ಚಿತ್ರಕ್ಕೆ ದ್ವಿತೀಯ ಸ್ಥಾನ ಲಭಿಸಿದೆ. ಜಲಪಾತ ವೈಭವ ಸಂಬಂಧಿಸಿದ ಅತ್ಯುತ್ತಮ ವಿಡಿಯೋ ಗ್ರಾಫಿ ಪ್ರಶಸ್ತಿಯಲ್ಲಿ 'ಮೇದುರ ಅಬ್ಬಿ ಸೌಂದರ್ಯ'ಕ್ಕಾಗಿ ಪ್ರಜಾ ಟಿವಿ ಕ್ಯಾಮರಾಮೆನ್ ವಿಜಯ್ ಕಾಟಕೇರಿ ಪ್ರಥಮ ಸ್ಥಾನ, 'ಮೈಸೂರು ಮಿತ್ರ' ಜಿಲ್ಲಾ ವರದಿಗಾರ ಪ್ರಸಾದ್ ಸಂಪಿಗೆಕಟ್ಟೆ 'ಅವರ ಕೋಟೆ ಅಬ್ಬಿ ವೈಭವ' ದ್ವಿತೀಯ ಸ್ಥಾನ ಪಡೆದಿದೆ.

**ದತ್ತಿ ನಿಧಿ ಪ್ರಶಸ್ತಿ:** ಸಂಘದ ಹಿರಿಯ ಸಲಹೆಗಾರರು, ಶಕ್ತಿ ದಿನಪತ್ರಿಕೆ ಸಲಹಾ ಸಂಪಾದಕರಾದ ಬಿ.ಜಿ.ಅನಂತಶಯನ ಅವರು ತಮ್ಮ ಪುತ್ರಿ ಡಾ.ಅನುಶ್ರೀ ಅವರ 'ಹ್ಯಾಪಿ ಟೀತ್' ಡೆಂಟಲ್ ಕ್ಲಿನಿಕ್ ಹೆಸರಿನಲ್ಲಿ ಸ್ಥಾಪಿಸಿರುವ 'ಮಾನವೀಯ ಮೌಲ್ಯ'ಗಳನ್ನು ಒಳಗೊಂಡ ಅತ್ಯುತ್ತಮ ಛಾಯಾಚಿತ್ರ ಪ್ರಶಸ್ತಿಗೆ ವಿಶ್ವವಾಣಿ ಜಿಲ್ಲಾ ವರಿದಗಾರ ಅನಿಲ್ ಎಚ್.ಟಿ. ಅವರ 'ಬದುಕಲಿ ಬೇಕು ಭರವಸೆಯ ರಂಗೋಲಿ' ಚಿತ್ರ ಮೊದಲ ಸ್ಥಾನ ಪಡೆದಿದೆ. ಫೋಟೋಗ್ರಫಿ ಮತ್ತು ವಿಡಿಯೋ ಗ್ರಫಿಯ ತೀರ್ಪುಗಾರರಾಗಿ ಹಿರಿಯ ಛಾಯಾಚಿತ್ರಗಾರ ಎನ್.ಎಂ.ಕುಮಾರ್ ಅವರು ಕಾರ್ಯ ನಿರ್ವಹಿಸಿದ್ದಾರೆ ಎಂದು ಕೊಡಗು ಪತ್ರಕರ್ತರ ಸಂಘದ ಸಹ ಕಾರ್ಯದರ್ಶಿ ಪ್ರಸಾದ್ ಸಂಪಿಗೆಕಟ್ಟೆ ತಿಳಿಸಿದ್ದಾರೆ.

## ಎಂಡಿಎಂಎ, ಕೊಕೇನ್ ಮಾರಾಟಕ್ಕೆ ಯತ್ನಿಸುತ್ತಿದ್ದ ಮೂವರ ಬಂಧನ


ಜೇಷ್ಣು ಮುರುಳಿ


ಮಹಮ್ಮದ್ ನಾಸಿರ್


ರವೀಶ್ ಕುಮಾರ್

ಮಡಿಕೇರಿ, ಆ.18– ಮಾದಕ ವಸ್ತುಗಳಾದ ಎಂಡಿಎಂಎ ಮತ್ತು ಕೊಕೇನ್ ಸಹಿತ ಕೇರಳ ಮೂಲದ ಮೂವರು ಆರೋಪಿಗಳನ್ನು ಕೊಡಗು ಪೊಲೀಸರು ಬಂಧಿಸಿದ್ದಾರೆ.

ನಾಪೋಕ್ಲು ಪೊಲೀಸ್ ಠಾಣೆ ಸರಹದ್ದಿನ ಬಲಮುರಿ–ಮೂರ್ನಾಡು ರಸ್ತೆ ಬಳಿ ಮಾದಕ ವಸ್ತು ಮಾರಾಟ ಮಾಡುತ್ತಿರುವ ಕುರಿತು ಖಚಿತ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ದಾಳಿ ಮಾಡಿದ ಪೊಲೀಸರು ಕೇರಳ ಮೂಲದ ರವೀಶ್ ಕುಮಾರ್(26) ಮಹಮ್ಮದ್ ನಾಸಿರ್(27) ಹಾಗೂ ಜೇಷ್ಣು ಮುರುಳಿ(23) ಎಂಬವರನ್ನು ಮಾಲು ಸಹಿತ ಬಂಧಿಸಿದ್ದಾರೆ.

ಆರೋಪಿಗಳಿಂದ 24.61 ಗ್ರಾಂ ಎಂಡಿಎಂಎ ಮತ್ತು 3.45 ಗ್ರಾಂ ಕೊಕೇನ್ ಅನ್ನು ವಶಕ್ಕೆ ಪಡೆಯಲಾಗಿದೆ. ಮಡಿಕೇರಿ ಉಪ ವಿಭಾಗದ ಡಿವೈಎಸ್‌ಪಿ ಎಂ.ಜಗದೀಶ್, ಮಡಿಕೇರಿ ಗ್ರಾಮಾಂತರ ಠಾಣಾ ಸಿಪಿಐ ಅನೂಪ್ ಮಾದಪ್ಪ, ಪಿಎಸ್‌ಐ ಈ.ಮಂಜುನಾಥ ಹಾಗೂ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದರು. ಪೊಲೀಸರ ಕಾರ್ಯದಕ್ಷತೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಶ್ಲಾಘಿಸಿದ್ದಾರೆ.

## ವಿಜ್ಞಾನ ಶಿಕ್ಷಕರಿಗೆ ಶೈಕ್ಷಣಿಕ, ಇನ್ಸ್‌ಫೇರ್ ಅವಾರ್ಡ್ ಕಾರ್ಯಾಗಾರ



ಕುಶಾಲನಗರ, ಆ.18– ಸಾರ್ವಜನಿಕ ಶಿಕ್ಷಣ ಇಲಾಖೆ, ಸೋಮವಾರಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ವತಿಯಿಂದ ಗುರುವಾರ ಕ್ರೀಡಾ ಶಾಲಾ ಸಭಾಂಗಣದಲ್ಲಿ ತಾಲೂಕು ವಿಜ್ಞಾನ ಶಿಕ್ಷಕರಿಗೆ ಒಂದು ದಿನದ ಶೈಕ್ಷಣಿಕ ಮತ್ತು ಇನ್ಸ್‌ಫೇರ್ ಅವಾರ್ಡ್ ಕಾರ್ಯಾಗಾರ ನಡೆಸಲಾಯಿತು.

ಕಾರ್ಯಾಗಾರ ಉದ್ಘಾಟಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ವಿ.ಸುರೇಶ್ ಮಾತನಾಡಿ, ಜನೋಪಯೋಗಿಯಾದ ವೈಜ್ಞಾನಿಕ ಆವಿಷ್ಕಾರ ಜನರ ನೆಮ್ಮದಿ, ಸಂತೋಷ ಹೆಚ್ಚಿಸಲು ಉಪಾಯ ಹುಟ್ಟು ಹಾಕಬೇಕು ಎಂಬ ಉದ್ದೇಶವನ್ನು ಹೊಂದಿದ್ದು, ಮಕ್ಕಳಿಗೆ ಉತ್ತಮ ಮಾರ್ಗದರ್ಶನ ನೀಡುವುದು. ವಿಜ್ಞಾನ ಶಿಕ್ಷಕರು ಪ್ರಯತ್ನ ಉಪಕ್ರಮವಾಗಬೇಕು ಎಂದರು.

ಜಿಲ್ಲಾ ಪ್ರೌಢಶಾಲಾ ಶಿಕ್ಷಕ ಸಂಘದ ಅಧ್ಯಕ್ಷ ಸಿ.ಟಿ.ಸೋಮಶೇಖರ್ ಮಾತನಾಡಿ,ವಿಜ್ಞಾನ ಶಿಕ್ಷಕರ ಬಗ್ಗೆ ಗೌರವ ಇದೆ. ಶಾಲೆಗಳಲ್ಲಿ ಮಕ್ಕಳ ಮತ್ತು ಶಿಕ್ಷಕರಾದ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಾರೆ. ಎಸ್‌ಎಸ್‌ಎಲ್‌ಸಿಯಲ್ಲಿ ತಾಲೂಕಿ ನಲ್ಲಿ ಪ್ರಥಮ ಸ್ಥಾನ ಬಂದಿರುವುದು ಹೆಮ್ಮೆಯ ವಿಚಾರ. ಉತ್ತಮ ಅಧಿಕಾರಿಗಳು ಇರುವುದರಿಂದ ಇಲಾಖಾ ಮಟ್ಟದಲ್ಲಿ ಕೆಲಸ ಕಾರ್ಯಗಳು ಸುಲಲಿತವಾಗಿ ನಡೆಯುತ್ತಿವೆ. ಶಿಕ್ಷಕರ ಸಮಸ್ಯೆ ಗಳಿಗೆ ಅಧಿಕಾರಿಗಳು ಸ್ಪಂದಿಸುತ್ತಾರೆ. ಅದೇ ರೀತಿ ಖಾಸಗಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುವ ಶಿಕ್ಷಕರಿಗೆ ಕನಿಷ್ಠ ವೇತನ ಕೊಡಬೇಕು.ಆರೋಗ್ಯ ವಿಮೆ ಕೊಡಬೇಕು ಎಂಬ ಬೇಡಿಕೆ ಇಟ್ಟು ಸಂಘವು ನಿರಂತರವಾಗಿ ಶಿಕ್ಷಕರ ಪರವಾಗಿ ಹೋರಾಟ ನಡೆಸುತ್ತಿದೆ ಎಂದರು. ಸಂಪನ್ಮೂಲ ವ್ಯಕ್ತಿಗಳಾದ ಮೈಸೂರಿನ ಬಸವರಾಜು ಮತ್ತು ನೆಲ್ಲೆವಿನದ ಪ್ರವೀಣ್ ಕುಮಾರ್ ವಿಜ್ಞಾನ ಕಲಿಕೆ ಮತ್ತು ಇನ್ಸ್‌ಫೇರ್ ಅವಾರ್ಡ್ ಕುರಿತು ಉಪನ್ಯಾಸ ನೀಡಿದರು.

ಈ ಸಂದರ್ಭ ಕೂಡಿಗೆ ಕ್ರೀಡಾ ಶಾಲಾ ಪ್ರಾಂಶುಪಾಲ ದೇವಕುಮಾರ್,ಜಿಲ್ಲಾ ದೈಹಿಕ ಶಿಕ್ಷಕ ಅಧೀಕ್ಷಕ ಸದಾಶಿವಯ್ಯ ಎಸ್. ಪಲ್ಲೇದ್, ತಾಲೂಕು ಪ್ರೌಢಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಟಿ.ವಿ.ಶೈಲಾ, ಶಿಕ್ಷಣ ಇಲಾಖೆಯ ಸಮನ್ವಯಾಧಿಕಾರಿ ಹೇಮಂತ್, ಬಿಆರ್‌.ಪಿ. ಲೋಕೇಶ್, ಶಿವಕುಮಾರ್, ಶಿಕ್ಷಣ ಸಂಯೋಜಕ ಕೆ.ಬಿ.ರಾಧಕೃಷ್ಣ ಇದ್ದರು. ತಾಲೂಕಿನ ವಿವಿಧ ಪ್ರೌಢಶಾಲೆಗಳಿಂದ ವಿಜ್ಞಾನ ಶಿಕ್ಷಕರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

## ಕರ್ನಾಟಕ ಸಂಘದಿಂದ ಸ್ವಾತಂತ್ರ್ಯ ದಿನ ಆಚರಣೆ



ವಿರಾಜಪೇಟೆ, ಆ.18– ಗಡಿ ಭಾಗವಾದ ವಿರಾಜಪೇಟೆ ಕರ್ನಾಟಕ ಸಂಘದ ವತಿಯಿಂದ 77ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಸಂಘದ ಅಧ್ಯಕ್ಷ ಮಾಳೇಟಿರ ಎಂ.ಬೆಲ್ಲು ಬೋಪಯ್ಯ ಧ್ವಜಾರೋಹಣ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಕನ್ನಡ ನಾಡು, ನುಡಿ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕರ್ನಾಟಕ ಸಂಘದಿಂದ ಹೆಚ್ಚು ಕನ್ನಡ ಕಾರ್ಯಕ್ರಮಗಳನ್ನು ನವೆಂಬರ್ ತಿಂಗಳಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಜಿಲ್ಲಾ ಮಟ್ಟದ ಸ್ಪರ್ಧಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಾಗಿ ತಿಳಿಸಿದರು. ಧ್ವಜಾರೋಹಣ ಸಂದರ್ಭ ಕರ್ನಾಟಕ ಸಂಘದ ಉಪಾಧ್ಯಕ್ಷ ಚೇನಂಡ ಗಿರೀಶ್ ಪೂಣಚ್ಚ, ಕಾರ್ಯದರ್ಶಿ ಮುಂಡ್ಯೋಳಂಡ ಕುಸುಮ ಸೋಮಣ್ಣ, ಖಜಾಂಚಿ ಕೋಟೇರ ಯು.ತಮ್ಮಯ್ಯ, ನಿರ್ದೇಶಕರಾದ ಬಿ.ಎಂ.ಸುರೇಶ್, ಸಿ.ಎಂ.ಸುರೇಶ್ ನಾಣಯ್ಯ, ಎಂ.ಜಿ. ಪೂಣಚ್ಚ, ಕೆ. ಮೊಣ್ಣಪ್ಪ, ಎಂ.ದೇವಯ್ಯ, ಬಿ.ಆರ್. ಗಣೇಶ್, ಎ.ಎಂ.ಜೋಯಪ್ಪ ಬಿ.ಗಣೇಶ್ ಬಿದ್ದಪ್ಪ, ಕಚೇರಿ ಕಾರ್ಯದರ್ಶಿ ಎಂ. ರಾಧ ಮತ್ತಿತರರು ಉಪಸ್ಥಿತರಿದ್ದರು.

## ವಿದ್ಯುತ್ ಸಮಸ್ಯೆ ಬಗೆಹರಿಸಲು ಒತ್ತಾಯಿಸಿ ಪ್ರತಿಭಟನೆ



ಹನೂರು, ಆ.18– ವಿದ್ಯುತ್ ಸಮಸ್ಯೆ ಬಗೆಹರಿಸಲು ಒತ್ತಾಯಿಸಿ ಭಾರತೀಯ ಕಿಸಾನ್ ಸಂಘ ಹನೂರು ಘಟಕದ ವತಿಯಿಂದ ಪಟ್ಟಣದ ಚೆಸ್ಕಾಂ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಮಲೆ ಮಹದೇಶ್ವರಬೆಟ್ಟ ರಸ್ತೆಯ ಭಾರತ್ ಪೆಟ್ರೋಲ್ ಬಂಕ್ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆಯಲ್ಲಿ ಚೆಸ್ಕಾಂ ಕಚೇರಿಗೆ ತೆರಳಿ ಚೆಸ್ಕಾಂ ಹಾಗೂ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಹನೂರು ತಾಲೂಕಿನಾದ್ಯಂತ ರೈತರ ಪಂಪ್‌ಸೆಟ್‌ಗಳಿಗೆ ನಿಗದಿತ ಪ್ರಮಾಣದಲ್ಲಿ ವಿದ್ಯುತ್ ಪೂರೈಕೆ ಮಾಡುತ್ತಿಲ್ಲ. ಲೋಡ್ ಶೆಡ್ಡಿಂಗ್ ನೆಪವೊಡ್ಡಿ ನಿರಂತರವಾಗಿ ವಿದ್ಯುತ್ ಕಡಿತಗೊಳಿಸುವ ಮೂಲಕ ರೈತರಿಗೆ ಚೆಸ್ಕಾಂ ಅಧಿಕಾರಿಗಳು ತೊಂದರೆ ಕೊಡುತ್ತಿದ್ದಾರೆ ಎಂದು ಆರೋಪಿಸಿದ ಅವರು, ಉನ್ನತ ಮಟ್ಟದ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಪರಿಹಾರ ಸೂಚಿಸುವವರೆಗೂ ಮುಷ್ಕರ ಮುಂದುವರಿಸುವುದಾಗಿ ಪಟ್ಟು ಹಿಡಿದರು.

ಈ ವೇಳೆ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಚೆಸ್ಕಾಂ ಅಧೀಕ್ಷಕಿ ತಾರಾ, ರೈತರ ಸಮಸ್ಯೆಗಳನ್ನು ಆಲಿಸಿ ಮಾತನಾಡಿ, ರಾಜ್ಯದಲ್ಲಿ ಶೇ.70ರಷ್ಟು ಥರ್ಮಲ್ ವಿದ್ಯುತ್ ಶಕ್ತಿಯನ್ನು ಅವಲಂಬಿಸಿದ್ದೇವೆ. ಹೀಗಿದ್ದರೂ ಮಳೆಗಾಲದಲ್ಲಿ ಜಲ ವಿದ್ಯುತ್ ಶಕ್ತಿ ಬಳಸಿಕೊಳ್ಳಲು ಹೆಚ್ಚು ಒತ್ತು ನೀಡುತ್ತೇವೆ. ರಾಜ್ಯದಲ್ಲಿ ಮಳೆ ಅಭಾವದಿಂದಾಗಿ ಜಲವಿದ್ಯುತ್ ಉತ್ಪಾದನೆ ಕಡಿಮೆಯಾಗಿದೆ. ಅಲ್ಲದೆ ಥರ್ಮಲ್ ವಿದ್ಯುತ್‌ಗೆ ಅಗತ್ಯವಿರುವ ಕಲ್ಲಿದ್ದಲಿನ ಪೂರೈಕೆ ಕಡಿಮೆಯಾಗಿರುವ ಕಾರಣ ಸಮರ್ಪಕ ವಿದ್ಯುತ್ ಪೂರೈಸಲು ಸಮಸ್ಯೆ ಉಂಟಾಗಿದೆ. ಹೀಗಾಗಿ ರಾಜ್ಯಮಟ್ಟದ ಅಧಿಕಾರಿಗಳ ನಿರ್ದೇಶನದ ಮೇರೆಗೆ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆ ಕಡಿತಗೊಳಿಸಲಾಗುತ್ತಿದೆ. ಇದು ಕೇವಲ ಹನೂರು, ಚಾಮರಾಜನಗರ ಜಿಲ್ಲೆ ಸಮಸ್ಯೆಯಲ್ಲ. ಇಡೀ ರಾಜ್ಯದ ಸಮಸ್ಯೆ ಬೇಡಿಕೆಯಂತೆ ಕಲ್ಲಿದ್ದಲು ಪೂರೈಕೆಗೆ ಇನ್ನು 10 ದಿನಗಳು ಬೇಕು. ನಂತರ ಸಮಸ್ಯೆ ಬಗೆಹರಿಯುತ್ತದೆ ಎಂದರು.

ಈ ವೇಳೆ ಕಾರ್ಯಪಾಲಕ ಅಭಿಯಂತರ ಲಿಂಗರಾಜು, ಸಹಾಯಕ ಕಾರ್ಯಪಾಲಕ ಅಭಿಯಂತರ ಶಂಕರ್, ಭಾರತೀಯ ಕಿಸಾನ್ ಸಂಘದ ಹನೂರು ಘಟಕದ ಅಧ್ಯಕ್ಷ ಹರೀಶ್, ಪ್ರಾಂತ್ಯಾಧ್ಯಕ್ಷ ರಾಜೇಂದ್ರ ಜಿಲ್ಲಾ ಕಾರ್ಯದರ್ಶಿ ಬೊಸ್ಕೋ, ಜಿಲ್ಲಾಧ್ಯಕ್ಷ ಲಿಂಗರಾಜ್, ಕೊಳ್ಳೇಗಾಲ ಘಟಕ ಅಧ್ಯಕ್ಷ ಶಾಂತಮಲ್ಲಪ್ಪ, ಹನೂರು ಘಟಕ ಉಪಾಧ್ಯಕ್ಷ ಬಸವರಾಜ್ ಹಾಗೂ ಸಂಘದ ಮಾಜಿ ಅಧ್ಯಕ್ಷ ನಟರಾಜ್, ಇನ್ನಿತರ ರೈತ ಮುಖಂಡರಿದ್ದರು.

## ಇಂದು ಪತ್ರಿಕಾ ಪ್ರತಿನಿಧಿಗಳ ಸಂಘ ಉದ್ಘಾಟನೆ

ಚಾಮರಾಜನಗರ, ಆ.18– ಚಾಮರಾಜನಗರ ತಾಲೂಕು ಪತ್ರಿಕಾ ಪ್ರತಿನಿಧಿಗಳ ಸಂಘ ಉದ್ಘಾಟನಾ ಸಮಾರಂಭ ಆ.19ರಂದು ಬೆಳಗ್ಗೆ 10 ಗಂಟೆಗೆ ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದ ಸಭಾಂಗಣದಲ್ಲಿ ನಡೆಯಲಿದೆ. ಸಮಾರಂಭವನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸುವರು. ಏಜೆಂಟರಿಗೆ ಗುರುತಿನ ಚೀಟಿಯನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ವಿತರಿಸುವರು. ಚಾಮರಾಜನಗರ ತಾಲೂಕು ಪತ್ರಿಕಾ ಪ್ರತಿನಿಧಿಗಳ ಸಂಘದ ಅಧ್ಯಕ್ಷ ಪುರುಷೋತ್ತಮ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್, ಜಿಲ್ಲಾ ಕಾರ್ಮಿಕ ಅಧಿಕಾರಿ, ಡಾ.ಎಂ.ಸವಿತಾ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ದೇವರಾಜು ಕಪ್ಪಸೋಗೆ, ಪ್ರಧಾನ ಕಾರ್ಯದರ್ಶಿ ಮಹೇಶ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ಪತ್ರಕರ್ತರು ತಮ್ಮ ವೃತ್ತಿಯಲ್ಲಿ ಬದ್ಧತೆ ಕಾಯ್ದುಕೊಳ್ಳಿ

## ಪತ್ರಿಕಾ ದಿನಾಚರಣೆಯಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ ಸಲಹೆ



ಯಳಂದೂರು, ಆ.18– ಪತ್ರಕರ್ತರು ತಮ್ಮ ವೃತ್ತಿಯಲ್ಲಿ ಬದ್ಧತೆ ಕಾಯ್ದುಕೊಳ್ಳಬೇಕು ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಸಲಹೆ ನೀಡಿದರು.

ಪಟ್ಟಣದ ಶ್ರೀಶಂಕರ ಸಭಾ ಭವನದಲ್ಲಿ ಶುಕ್ರವಾರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ನಾನೂ ಪತ್ರಿಕೋದ್ಯಮ ವಿದ್ಯಾರ್ಥಿಯಾಗಿದ್ದು, ಪತ್ರಕರ್ತರ ಬಗ್ಗೆ ನನಗೂ ಅಪಾರ ಪ್ರೀತಿ ಇದೆ. ಯಳಂದೂರು ಇಡೀ ರಾಜ್ಯದಲ್ಲೇ ಪುಟ್ಟ ತಾಲೂಕಾಗಿದೆ. ಇಲ್ಲಿ ದಿವಾನ್ ಪೂರ್ಣಯ್ಯರ ದೂರದೃಷ್ಟಿಯಿಂದ ಪ್ರತಿ ಗ್ರಾಮಗಳಲ್ಲೂ ಒಂದೊಂದು ಕೆರೆ ಇರುವುದು ಕನ್ನಡ ನಾಡಿನ ವೈಭವವಾಗಿದೆ. ಇಲ್ಲಿನ ಬಳೇ ಮಂಟಪ, ಬಿಳಿಗಿರಿ ರಂಗನಬೆಟ್ಟದ ಜೀವ ವೈವಿಧ್ಯತೆಯನ್ನು ಇಡೀ ದೇಶಕ್ಕೆ ಪಸರಿಸುವ ನಿಟ್ಟಿನಲ್ಲಿ ಪತ್ರಕರ್ತರು ಇನ್ನಷ್ಟು ಕ್ರಿಯಾಶೀಲರಾಗಿ ಕೆಲಸ ಮಾಡಬೇಕು ಎಂದರು. ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲೂ ಪತ್ರಿಕಾ ಭವನವಿದ್ದು, ಇಲ್ಲಿ ಭವನ ನಿರ್ಮಿಸಲು ಖಾಲಿ ನಿವೇಶನ ನೀಡುವಂತೆ ಅಧ್ಯಕ್ಷರು ಬೇಡಿಕೆ ಇಟ್ಟಿದ್ದಾರೆ. ಇದಕ್ಕೆ ಪೂರಕವಾಗಿ ನಾನು ಪಪಂ ಮುಖ್ಯಾಧಿಕಾರಿಗಳ ಜೊತೆ ಚರ್ಚಿಸಿ ನಿವೇಶನ ನೀಡಲು ಕ್ರಮ ವಹಿಸುವೆ ಎಂದರು.

ತಾಲೂಕು ಕೇಂದ್ರದಲ್ಲಿ ಕ್ರೀಡಾಂಗಣ ನಿರ್ಮಾಣ, ಅಗ್ನಿಶಾಮಕ ಠಾಣೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ನಿರ್ಮಾಣದ ಜಾಗದ ಸಮಸ್ಯೆ, ಸಾರ್ವಜನಿಕ ಆಸ್ಪತ್ರೆ ಮೇಲ್ದರ್ಜೆಗೇರಿಸುವುದು, ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿ, ತಾಲೂಕು ಪತ್ರಕರ್ತರಿಗೆ ನಿವೇಶನ ನೀಡುವುದು, ಉಚಿತ ಬಸ್‌ಪಾಸ್ ಸೇರಿದಂತೆ ಹತ್ತು ಹಲವು ಸಮಸ್ಯೆಗಳ ಬಗ್ಗೆ ಪತ್ರಕರ್ತರು ನನ್ನ ಗಮನ ಸೆಳೆದಿದ್ದು ಈ ನಿಟ್ಟಿನಲ್ಲಿ ನಾನು ಸಂಬಂಧಪಟ್ಟ ಇಲಾಖೆಗಳೊಂದಿಗೆ ಚರ್ಚಿಸಿ ಪ್ರಾಮಾಣಿಕವಾಗಿ ಕ್ರಮ ವಹಿಸುತ್ತೇನೆ. ಮುಂದಿನ ದಿನಗಳಲ್ಲಿ ಕ್ಷೇತ್ರದ ಪ್ರತಿ ಗ್ರಾಮಗಳಿಗೂ ಪ್ರವಾಸ ಮಾಡಿ ಜನರ ಸಮಸ್ಯೆ ಆಲಿಸಿ ಪರಿಹಾರ ನೀಡಲು ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ದೇವರಾಜು ಕಪ್ಪಸೋಗೆ ಮಾತನಾಡಿ, ಯಳಂದೂರು ತಾಲೂಕು ಪತ್ರಕರ್ತರ ಸಂಘ ಶಿಸ್ತಿಗೆ ಪ್ರಸಿದ್ಧಿ ಪಡೆದಿದೆ. ಇಲ್ಲಿನ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವುದರಲ್ಲಿ ಸ್ಥಳೀಯ ಪತ್ರಕರ್ತರು ನಿಷ್ಣಾತರಾಗಿದ್ದಾರೆ. ಪಟ್ಟಣ ಹಾಗೂ ತಾಲೂಕಿನಲ್ಲಿರುವ ಪ್ರವಾಸಿತಾಣಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಆಗಾಗ ಇಲ್ಲಿಂದ ವರದಿಗಳು ಆಗುತ್ತಲೇ ಇರುತ್ತವೆ. ಇಲ್ಲಿ ಪತ್ರಿಕಾ ಭವನ ನಿರ್ಮಾಣಕ್ಕೆ ಖಾಲಿ ನಿವೇಶನದ ಅವಶ್ಯಕತೆ ಅತ್ಯಂತ ಜರೂರಾಗಿದೆ. ಆದರೂ ಇದಕ್ಕೆ ಶಾಶ್ವತ ಪರಿಹಾರ ಕೊಡಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಜನಪ್ರತಿನಿಧಿಗಳು ಹಾಗೂ ಇಲಾಖೆ ಅಧಿಕಾರಿಗಳು ಸೋತಿದ್ದು ಈ ಬಗ್ಗೆ ಹಾಲಿ ಶಾಸಕರು, ಅಧಿಕಾರಿ ವರ್ಗ ಗಮನ ಹರಿಸಿ ಇದಕ್ಕೆ ಪರಿಹಾರ ಒದಗಿಸಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮೋಹನ್, ಶಿವಕುಮಾರ್, ಕಿನಕಹಳ್ಳಿ ರಾಚಯ್ಯ, ಜ್ಯೋತಿ, ಬಂಡಹಳ್ಳಿ ಮಹೇಶ್, ಲಕ್ಷ್ಮಣ, ರೇವಣ್ಣ, ಕೆಸ್ತೂರು ಪ್ರಕಾಶ್‌ರನ್ನು ಸನ್ಮಾನಿಸಲಾಯಿತು. ಪತ್ರಿಕಾ ದಿನಾಚರಣೆ ನಿಮಿತ್ತ ಹಮ್ಮಿಕೊಂಡಿದ್ದ ಸೌಹಾರ್ದಯುತ ಕ್ರಿಕೆಟ್ ಪಂದ್ಯಾವಳಿಯಲ್ಲಿ ಪ್ರಥಮ ಬಹುಮಾನ ಪಡೆದ ಆರೋಗ್ಯ ಇಲಾಖೆ ಹಾಗೂ ದ್ವಿತೀಯ ಬಹುಮಾನ ಪಡೆದ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಕ್ರೀಡಾಪಟುಗಳಿಗೆ ಟ್ರೋಫಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಸಂಘದ ಪ್ರಧಾನ ಕಾರ್ಯದರ್ಶಿ ಮಹೇಶ್, ರಾಜ್ಯ ಸಮಿತಿ ಸದಸ್ಯ ನಂದೀಶ್, ಉಪಾಧ್ಯಕ್ಷ ವಿ.ನಾಗರಾಜು, ತಹಸೀಲ್ದಾರ್ ಜಯಪ್ರಕಾಶ್, ವೈದ್ಯಾಧಿಕಾರಿ ಡಾ.ಶ್ರೀಧರ್, ಮುಖ್ಯಾಧಿಕಾರಿ ರವಿಕೀರ್ತಿ ಮಾತನಾಡಿದರು. ಬಿಇಓ ಕೆಕಾಂತರಾಜು, ಜಿಪಂ ಮಾಜಿ ಉಪಾಧ್ಯಕ್ಷ ಜೆ.ಯೋಗೇಶ್, ಪಪಂ ಸದಸ್ಯರಾದ ಮಹೇಶ್, ವೈ.ಜಿ.ರಂಗನಾಥ್, ಮಂಜು, ಲಕ್ಷ್ಮಿ ಮಲ್ಲು, ಬಿ.ರವಿ, ಸುಶೀಲಾ ಪ್ರಕಾಶ್ ಮುಖಂಡರಾದ ವಾಲೆ ಮಹದೇವ, ಜೆ.ಶ್ರೀನಿವಾಸ್ ಸೇರಿದಂತೆ ಇತರರಿದ್ದರು.



ಬೇಗೂರಿನ ನಾಡಕಚೇರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು. ಈ ವೇಳೆ ರಾಜಸ್ವ ನಿರೀಕ್ಷಕ ರವಿ, ಗ್ರಾಮ ಲೆಕ್ಕಾಧಿಕಾರಿಗಳಾದ ಮಹದೇವಪ್ಪ, ಜಯಣ್ಣ, ಅಶೋಕ್, ಮಂಜು, ಗ್ರಾಮ ಸಹಾಯಕರದ ಮಂಜು, ಪರಶಿವ, ಮಹದೇವಯ್ಯ ಮತ್ತಿತರರಿದ್ದರು.

## ಹೋಟೆಲ್ ಬಾಬು ನಿಧನ



ಚಾಮರಾಜನಗರ, ಆ.18– ನಗರದ ರಾಮಸಮುದ್ರ ಮಠದ ಬೀದಿ ನಿವಾಸಿ ಹೋಟೆಲ್ ಬಾಬು(50) ಶುಕ್ರವಾರ ಸಂಜೆ ಬೆಂಗಳೂರಿನಲ್ಲಿ ನಿಧನರಾದರು. ಮೃತರು ಪತ್ನಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 2 ಗಂಟೆಗೆ ರಾಮಸಮುದ್ರದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಪೊನ್ನಾಚಿ: ಅರಣ್ಯ ಇಲಾಖೆಯಿಂದ ಪುಂಡಾನೆ ಸೆರೆ



ಹನೂರು, ಆ.18– ತಾಲೂಕಿನ ಮಲೆ ಮಹದೇಶ್ವರ ವನ್ಯಧಾಮದ ಪೊನ್ನಾಚಿ ಗ್ರಾಮದ ಸುತ್ತಮುತ್ತ ನಿತ್ಯ ರೈತರ ಜಮೀನುಗಳಿಗೆ ನುಗ್ಗಿ ಕೃಷಿ ಪರಿಕರ ಸೇರಿದಂತೆ ಬೆಳೆ ನಾಶ ಮಾಡುತ್ತಿದ್ದ ಪುಂಡಾನೆಯನ್ನು ಸೆರೆ ಹಿಡಿಯುವಲ್ಲಿ ಕೊನೆಗೂ ಅರಣ್ಯ ಇಲಾಖೆ ಯಶಸ್ವಿಯಾಗಿದೆ.

ಮಲೆ ಮಹದೇಶ್ವರ ವನ್ಯಧಾಮದ ಪೊನ್ನಾಚಿ ಅರಣ್ಯ ಪ್ರದೇಶದಲ್ಲಿ ಹಲವು ತಿಂಗಳಿಂದ ಪುಂಡಾನೆಯೊಂದು ಕಾಡಂಚಿನ ಜನರಿಗೆ ವ್ಯಾಪಕ ತೊಂದರೆ ಕೊಡುತ್ತಿತ್ತು. ಜಮೀನಿನಲ್ಲಿ ಬೆಳೆದಿರುವ ಫಸಲು ತಿಂದು ಹಾಳು ಮಾಡುವ ಜೊತೆಗೆ ಮನೆಗಳ ಬಳಿ ಬಂದು ಗೇಟ್, ಗೋಡೆ ಹಾಗೂ ತೆಂಗಿನ ಮರ ನಾಶಗೊಳಿಸುವುದರ ಮೂಲಕ ಜನರಲ್ಲಿ ಆತಂಕ ಸೃಷ್ಟಿಸಿತ್ತು. ಪುಂಡಾನೆ ಸೆರೆ ಹಿಡಿಯುವಂತೆ ಸ್ಥಳೀಯರು ಅರಣ್ಯ ಇಲಾಖೆಗೆ ಮನವಿ ಸಲ್ಲಿಸಿದ್ದರು. ಇದಕ್ಕೆ ಸ್ಪಂದಿಸಿದ ಅರಣ್ಯ ಇಲಾಖೆ ಆ.9. 10 ಹಾಗೂ 11ರಂದು ಆನೆ ಸೆರೆ ಕಾರ್ಯಾಚರಣೆ ಕೈಗೊಳ್ಳಲು ನಿರ್ಧರಿಸಿತ್ತು. ಆದರೆ, ನಾಗರಹೊಳೆ, ದುಬಾರೆ ಆನೆ ಶಿಬಿರಗಳಿಂದ ಸಾಕಾನೆಗಳು ಬರುವುದು ವಿಳಂಬವಾಗಿದ್ದರಿಂದ ಕಾರ್ಯಾಚರಣೆ ಮುಂದೂಡಲಾಗಿತ್ತು.

ಆನೆ ಸೆರೆಗಾಗಿ ಗುರುವಾರವೇ ಪೊನ್ನಚ್ಚಿ ಗ್ರಾಮದ ಹೊರವಲಯಕ್ಕೆ ನಾಗರಹೊಳೆ ಅಭಯಾರಣ್ಯ ಹಾಗೂ ಕುಶಾಲನಗರದ ದುಬಾರೆ ಶಿಬಿರದಿಂದ ಅರ್ಜುನ, ಕರ್ಣ, ಅಶ್ವತ್ಥಾಮ ಸೇರಿದಂತೆ ಆರು ಆನೆಗಳು ಆಗಮಿಸಿದ್ದವು. ಶುಕ್ರವಾರ ಬೆಳಗ್ಗೆ 7 ಗಂಟೆಯಿಂದಲೇ 6 ಆನೆಗಳ ಸಹಾಯದಿಂದ ಪುಂಡಾನೆ ಸೆರೆ ಕಾರ್ಯಾಚರಣೆ ಆರಂಭಿಸಲಾಯಿತು. ಈ ವೇಳೆ ಅರಣ್ಯ ಇಲಾಖೆ ಸಿಬ್ಬಂದಿ ಸಾಕಾನೆಗಳೊಂದಿಗೆ ಪುಂಡಾನೆಗಾಗಿ ಹುಡುಕಾಟ ನಡೆಸಿ, ಅಂತಿಮವಾಗಿ ಶುಕ್ರವಾರ ಮಧ್ಯಾಹ್ನದ ವೇಳೆಗೆ ಮಹದೇಶ್ವರ ಬೆಟ್ಟದ ಸಮೀಪದ ಪೊನ್ನಾಚಿ ಗ್ರಾಮದ ಗೆರಟ್ಟಿ ಕತ್ರಿಯಾಣೆ ಅರಣ್ಯ ವಲಯ ಬಳಿ ಪುಂಡಾನೆಯನ್ನು ಸೆರೆ ಹಿಡಿಯಲಾಯಿತು. ಬಳಿಕ ಕಾಡಾನೆಯನ್ನು ಬಂಡೀಪುರದ ರಾಮಪುರ ಆನೆ ಕ್ಯಾಂಪಿಗೆ ಕರೆದೊಯ್ಯಲಾಯಿತು. ಆನೆ ಸೆರೆಗೆ ಮೂರು ದಿನಗಳ ಕಾರ್ಯಾಚರಣೆ ನಡೆಸಲು ಅರಣ್ಯ ಇಲಾಖೆ ನಿರ್ಧರಿಸಿತ್ತು. ಆದರೆ, ಒಂದೇ ದಿನದಲ್ಲಿ ಆನೆ ಸೆರೆಸಿಕ್ಕಿದೆ.

## ನಯನ ಕುಮಾರಿಗೆ ಪಿಹೆಚ್.ಡಿ



ಚಾಮರಾಜನಗರ, ಆ.18– ತಾಲೂಕಿನ ಬಂದಿಗೌಡನಹಳ್ಳಿ ಗ್ರಾಮದ ನಿವಾಸಿ, ಬೆಂಗಳೂರಿನ ಶ್ರೀರೇಣುಕಾಚಾರ್ಯ ವಿಜ್ಞಾನ, ಕಲಾ ಮತ್ತು ವಾಣಿಜ್ಯ (ಎಸ್‌ಜೆಆರ್) ಕಾಲೇಜಿನ ಸಹಾಯಕ ಪ್ರಾಧ್ಯಪಕರೂ ಆದ ಪತ್ರಕರ್ತ ರಾಜಶೇಖರ್ ಪತ್ನಿ ಜೆ.ನಯನ ಕುಮಾರಿ ಅವರು ತುಮಕೂರು ವಿವಿ ಕಲಾ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕಿ ಡಾ.ಸಿ.ಶೋಭಾ ಅವರ ಮಾರ್ಗದರ್ಶನದಲ್ಲಿ ವಾಣಿಜ್ಯಶಾಸ್ತ್ರ ವಿಷಯದಲ್ಲಿ 'ಇಂಪ್ಯಾಕ್ಟ್ ಆಫ್ ಡಿಜಿಟಲ್ ಹ್ಯೂಮನ್ ರಿಸೋರ್ಸ್ ಇನ್ ಎನ್ಹಾನ್ಸಿಂಗ್ ಆರ್ಗನೈಜೇಷನಲ್ ಪರ್ಫಾರ್ಮೆನ್ಸ್ ಅಟ್ ಸೆಲೆಕ್ಟ್ ಐಟಿ ಕಂಪನೀಸ್ ಇನ್ ಬೆಂಗಳೂರು' ಎಂಬ ವಿಷಯದ ಕುರಿತು ಸಂಶೋಧನೆ ನಡೆಸಿ ಸಾದರ ಪಡಿಸಿದ ಮಹಾಪ್ರಬಂಧವನ್ನು ತುಮಕೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದ್ದು, ಇತ್ತೀಚೆಗೆ ನಡೆದ ಘಟಿಕೋತ್ಸವದಲ್ಲಿ ಪಿಹೆಚ್.ಡಿ ಪ್ರದಾನ ಮಾಡಲಾಯಿತು.



ಚಿಕ್ಕಾಟಿ ಗ್ರಾಮ ಪಂಚಾಯಿತಿಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ಗ್ರಾಪಂ ಅಧ್ಯಕ್ಷ ಓಂಕಾರ ನಾಯಕ ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ಉಪಾಧ್ಯಕ್ಷ, ಸದಸ್ಯರು, ಸಿಬ್ಬಂದಿಗಳು, ಅಂಗನವಾಡಿ ಸಿಬ್ಬಂದಿ, ಮುಖಂಡರು ಹಾಜರಿದ್ದರು.

ಒಂದನೇ ಪುಟದಿಂದ

## ಎಸ್.ಟಿ.ಸೋಮಶೇಖರ್, ಶಿವರಾಮ್ ಹೆಬ್ಬಾರ್ 'ಕೈ' ವಶ

ಮುಂದಾಗಿದ್ದಾರೆ. ಮುನಿರತ್ನ ಸೇರ್ಪಡೆಗೆ ಡಿಕೆಶಿ ಸಹೋದರ, ಸಂಸದ ಡಿ.ಕೆ. ಸುರೇಶ್ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಆರ್‌ಆರ್ ನಗರದಲ್ಲಿ ಮುನಿರತ್ನ ವಿರುದ್ಧ 2 ಬಾರಿ ಸ್ಪರ್ಧಿಸಿ ಪರಾಭವಗೊಂಡಿರುವ ಡಿ.ಕೆ.ರವಿ ಪತ್ನಿ ಕುಸುಮಾ ಅವರ ರಾಜಕೀಯ ಭವಿಷ್ಯವನ್ನು ನೋಡಬೇಕಾಗುತ್ತದೆ. ಒಂದು ವೇಳೆ ಮುನಿರತ್ನ ಕಾಂಗ್ರೆಸ್ ಸೇರ್ಪಡೆಯಾದರೂ ಅವರಿಗೆ ಆರ್‌ಆರ್ ನಗರ ಕ್ಷೇತ್ರದಲ್ಲಿ ಸ್ಪರ್ಧಿಸಲು ಅವಕಾಶ ನೀಡದೇ ಅವಶ್ಯವಿದ್ದಲ್ಲಿ ವಿಧಾನ ಪರಿಷತ್‌ಗೆ ಆಯ್ಕೆ ಮಾಡಿಕೊಳ್ಳಬಹುದು ಎಂದು ಡಿ.ಕೆ. ಸುರೇಶ್ ಹೇಳಿದ್ದಾರೆ ಎನ್ನಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಟ್ಟಿಗೆ ಮುನಿರತ್ನ ಮಾತುಕತೆ ನಡೆಸಿದ್ದು, ಸಿಎಂ ಸೂಚನೆ ಮೇರೆಗೆ ಡಿ.ಕೆ. ಶಿವಕುಮಾರ್ ಅವರನ್ನೂ ಕೂಡ ಭೇಟಿಯಾಗಿದ್ದಾರೆ. ಮುನಿರತ್ನಾಗೆ ಡಿಕೆಶಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎನ್ನಲಾಗಿದ್ದು, ಡಿ.ಕೆ. ಸುರೇಶ್ ಮಾತ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಬೈರತಿ ಬಸವರಾಜ್ ಸೇರ್ಪಡೆಗೆ ಸ್ವತಃ ಸಿದ್ದರಾಮಯ್ಯ ನವರೇ ಒಪ್ಪುತ್ತಿಲ್ಲ

ಎಂದು ಮೂಲಗಳು ತಿಳಿಸಿವೆ. ಮತ್ತೊಂದೆಡೆ ವಿಧಾನಪರಿಷತ್ ಸದಸ್ಯರಾಗಿರುವ ಎಂಟಿಬಿ ನಾಗರಾಜ್ ಸೇರ್ಪಡೆ ಬಗ್ಗೆಯೂ ಮುಖ್ಯಮಂತ್ರಿಗಳು ಹಿಂದೇಟು ಹಾಕುತ್ತಿದ್ದಾರೆ ಎನ್ನಲಾಗಿದೆ. ಗೋಪಾಲಯ್ಯ ಸೇರ್ಪಡೆ ಬಗ್ಗೆ ಬೆಂಗಳೂರಿನ ಕೆಲ ಕಾಂಗ್ರೆಸ್ ಮುಖಂಡರು ಅಪಸ್ವರ ಎತ್ತಿದ್ದಾರೆ ಎನ್ನಲಾಗಿದೆ. ಆದರೆ ಎಲ್ಲಾ ಅಸಮಾಧಾನಿತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ಶಾಸಕರನ್ನು ಕಾಂಗ್ರೆಸ್‌ಗೆ ಸೇರಿಸಿಕೊಳ್ಳುವ ನಿಟ್ಟಿನಲ್ಲಿ ಡಿ.ಕೆ. ಶಿವಕುಮಾರ್ ಮತ್ತು ಸುರ್ಜೇವಾಲ ಹೆಜ್ಜೆ ಹಾಕಿದ್ದು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮುಖ್ಯಮಂತ್ರಿ ಅವರೊಂದಿಗೆ ಮಾತನಾಡಿದ್ದಾರೆ ಎನ್ನಲಾಗಿದೆ.

ಬಿಜೆಪಿ ಮಾತ್ರವಲ್ಲದೆ ಜೆಡಿಎಸ್ ಶಾಸಕರನ್ನೂ ಕೂಡ ಸೆಳೆಯಲು ಕಾರ್ಯತಂತ್ರ ರೂಪಿಸಲಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಳೇ ಮೈಸೂರು ಭಾಗದ ಕೆಲ ಜೆಡಿಎಸ್ ಹಾಗೂ ಬಿಜೆಪಿ ಶಾಸಕರೊಂದಿಗೆ ಮಾತುಕತೆ ನಡೆಸಿದ್ದಾರೆ ಎಂದು ಹೇಳಲಾಗಿದೆ. ಈ ಮಧ್ಯೆ ತಮ್ಮ ಶಾಸಕರು ಪಕ್ಷ ತೊರೆಯದಂತೆ ನೋಡಿಕೊಳ್ಳಲು ಬಿಜೆಪಿ ಮುಖಂಡರು ಮುಂದಾಗಿದ್ದಾರೆ. ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಎಸ್‌ಟಿ. ಸೋಮಶೇಖರ್ ಮತ್ತು ಶಿವರಾಂ ಹೆಬ್ಬಾರ್ ಜೊತೆ ಮಾತುಕತೆ ನಡೆಸಿದ್ದಾರೆ. ಅಲ್ಲದೇ ಇಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮನೆಯಲ್ಲಿ ಬಿಜೆಪಿ ಶಾಸಕರ ಸಭೆ ನಡೆದಿದ್ದು, ಈ ಸಭೆಯಲ್ಲಿ ಎಸ್.ಟಿ. ಸೋಮಶೇಖರ್ ಕೂಡ ಭಾಗವಹಿಸಿದ್ದರು.

## ಕಾಂಗ್ರೆಸ್ ಸೇರಲು ಸಿದ್ಧರಿದ್ದಾರೆ!

ಸಚಿವರು, ಅಂಯ್ಯೋ ಬಿಡಪ್ಪಾ, ಕೆಲಸ ಇಲ್ಲದವರು ಇದನ್ನೆಲ್ಲಾ ಮಾತನಾಡೋದು. ಹಿಂದಿನ ಸರ್ಕಾರದ ಅವಧಿಯಲ್ಲಿ ಒಂದು ವರ್ಷ ಪೇಮೆಂಟ್ ಕೊಟ್ಟಿರಲಿಲ್ಲ. ನಾವು ಬಂದು ಕೇವಲ ಎರಡೂವರೆ ತಿಂಗಳಾಗಿದೆ. ಒಂದೇ ಸಲ ಎಷ್ಟು ಅಂತಾ ಅನುದಾನ ಕೊಡೋಕೆ ಆಗುತ್ತದೆ. ಕೆಲವರು ಬಾಯಿ ಚಪಲಕ್ಕೆ ಏನೇನೋ ಮಾತನಾಡ್ತಾರೆ, ಅವ್ರಿಗೆಲ್ಲಾ ಉತ್ತರ ಕೊಡೋಕೆ ಆಗುತ್ತಾ. ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಸೇರಿದಂತೆ ಯಾರ ಬಗ್ಗೆಯೂ ನಾನು ಮಾತನಾಡುವುದಿಲ್ಲ. ಯಾರ ಹೇಳಿಕೆಗಳಿಗೂ ಪ್ರತಿಕ್ರಿಯಿಸುವುದಿಲ್ಲ ಎಂದರು.

**ಬೆಳೆಗೆ ತಿಂಗಳಲ್ಲಿ 15 ದಿನ ನೀರು:** ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಬಗ್ಗೆ ಪ್ರತಿಕ್ರಿಯಿಸಿ, ರೈತರ ಪ್ರತಿಭಟನೆ ಹಾಗೂ ಶಾಸಕರ ಅಸಮಾಧಾನದ ಬಗ್ಗೆಯೂ ತಿಳಿದಿದೆ. ನಮ್ಮ ರಾಜ್ಯದ ಪರ ಸಮರ್ಥವಾಗಿ ವಾದ ಮಂಡಿಸಲಾಗಿದೆ. ತಮಿಳುನಾಡಿನವರು 15 ಸಾವಿರ ಕ್ಯುಸೆಕ್ ನೀರು ಬಿಡುವಂತೆ ಕೇಳಿದ್ದರು. ಅದಕ್ಕೆ ಒಪ್ಪದ ಕಾರಣ ಅವರು ಸಭೆಯಿಂದ ಹೊರ ನಡೆದರು. ಸುಪ್ರೀಂಕೋರ್ಟ್ ಮಧ್ಯಂತರ ತೀರ್ಪಿನ ನಂತರ ಪರಿಸ್ಥಿತಿ ನೋಡಿಕೊಂಡು ಮುಂದಿನ ತೀರ್ಮಾನ ಮಾಡುತ್ತೇವೆ. ರಾಜ್ಯದ ರೈತರ ಹಿತ ಕಾಪಾಡಲು ಸರ್ಕಾರ ಬದ್ಧವಾಗಿದೆ. ಕಟ್ಟು ಪದ್ಧತಿಯಲ್ಲಿ ಬೆಳೆಗಳಿಗೆ ತಿಂಗಳಲ್ಲಿ 15 ದಿನ ನೀರು ಬಿಡುಗಡೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.

## ನ್ಯಾಯಾಂಗ ತನಿಖೆಗೆ ಆದೇಶ

ಯೋಜನೆಗಳಲ್ಲಿ ಶೇ. 40ರಷ್ಟು ಕಮಿಷನ್ ಪಡೆಯುತ್ತಿರುವ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಸಿಎಂಗೆ ಪತ್ರ ಬರೆದಿತ್ತು. ಕಾಮಗಾರಿ ಆರಂಭಕ್ಕೂ ಮುನ್ನವೇ ಜನ ಪ್ರತಿನಿಧಿಗಳಿಗೆ ಶೇ.25ರಿಂದ 30ರಷ್ಟು ಕಮಿಷನ್ ನೀಡಿದರೆ, ಉಳಿದ ಹಣವನ್ನು ಕಾಮಗಾರಿ ಮುಗಿದ ನಂತರ ಪಾವತಿಸಲಾಗಿದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ. ಆದಾಗ್ಯೂ, ಈ ಗಂಭೀರ ಆರೋಪಗಳ ಬಗ್ಗೆ ಸರ್ಕಾರದ ಮಟ್ಟದಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ. ನಿಯಮಗಳು ಮತ್ತು ಕಾಮಗಾರಿಗಳ ಗುಣಮಟ್ಟದ ಪ್ರಕಾರ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆಯೇ ಎಂದು ಆಯೋಗವು ತನಿಖೆ ನಡೆಸಲಿದೆ.

## ಸದ್ಯಕ್ಕೆ ಬಿಪಿಎಲ್, ಎಪಿಎಲ್ ಕಾರ್ಡ್ ವಿತರಿಸಲ್ಲ

ಮಾಡಲು ತೀರ್ಮಾನಿಸಿದ್ದೇವೆ. ಇದುವರೆಗೂ ಉಪ ತಹಸೀಲ್ದಾರ್ ಅವರೇ ನಮ್ಮ ಇಲಾಖೆಯ ಹೊಣೆಗಾರಿಯನ್ನು ವಹಿಸಿಕೊಂಡಿದ್ದರು. ಕಂದಾಯ ಇಲಾಖೆಗೆ ನೀಡಿದ್ದ ಅಧಿಕಾರವನ್ನು ಹಿಂದಕ್ಕೆ ಪಡೆದು ನಾವೇ ಇಲಾಖೆ ಜವಾಬ್ದಾರಿ ನಿರ್ವಹಣೆ ಮಾಡುತ್ತೇವೆ. ಪ್ರತ್ಯೇಕ ಕಚೇರಿ ತೆರೆಯುವುದರಿಂದ ಪಡಿತರ ವಿತರಣೆ ಕಾರ್ಯ ಸಮರ್ಪಕವಾಗಿ ಮಾಡಲು ಮತ್ತು ಹೊಸ ಪಡಿತರ ಚೀಟಿ ವಿತರಣೆಗೆ ಸಹಾಯಕವಾಗಲಿದೆ. ಆಹಾರ ಇಲಾಖೆ ಕಚೇರಿಗಳಿಗೆ ಡಾಟಾ ಎಂಟ್ರಿ ಆಪರೇಟರ್ ನೇಮಕ ಮಾಡಲು ಮತ್ತು ಎಂಎಸ್‌ಪಿ ಖರೀದಿಯಲ್ಲಿ ಪಾರದರ್ಶಕತೆ ತರಬೇಕು ಹಾಗೂ ನೈಜತೆ ಗುಣಮಟ್ಟ ಕಾಪಾಡಲು ಸೂಚನೆ ನೀಡಿದ್ದೇನೆ ಎಂದರು.

ಅನ್ನಭಾಗ್ಯ ಯೋಜನೆಯಡಿ 5 ಕೆ.ಜಿ.ಹೆಚ್ಚುವರಿ ಅಕ್ಕಿ ನೀಡುವ ಬದಲು ತಾತ್ಕಾಲಿಕವಾಗಿ ಪ್ರತಿ ಯುನಿಟ್‌ಗೆ 170 ರೂ.ಗಳನ್ನು ಡಿಬಿಟಿ ಮೂಲಕ ಆ. 25, 26ರಂದು ಫಲಾನುಭವಿಗಳ ಖಾತೆಗೆ ಜಮೆ ಮಾಡಲಾಗುವುದು ಎಂದು ಹೇಳಿದರು.

## 'ಮರಿ' ದೇವೇಗೌಡರಿಗೆ!

ಸುರೇಶ್‌ಗೌಡ, ಕೆ.ಎಂ.ತಿಮ್ಮರಾಯಪ್ಪ ವೀರಭದ್ರಪ್ಪ ಹಾಲರವಿ, ಎಂ.ಕೃಷ್ಣಾರೆಡ್ಡಿ, ದೊಡ್ಡಪ್ಪಗೌಡ, ಕೆ.ಬಿ.ಪ್ರಸನ್ನ ಕುಮಾರ್, ಸುನೀತಾ ಚೌವ್ಹಾಣ್, ಸಿ.ವಿ.ಚಂದ್ರ ಶೇಖರ್, ಸುಧಾಕರ್ ಶೆಟ್ಟಿ, ಸೂರಜ್ ಸೋನಿ ನಾಯಕ್ ಸೇರಿ 21 ಸದಸ್ಯರಿದ್ದಾರೆ. ಕೋರ್ ಕಮಿಟಿಗೆ ಪೂರ್ಣ ಅಧಿಕಾರ ನೀಡಲಾಗಿದೆ ಎಂದು ತಿಳಿಸಿದರು.

ಪಕ್ಷ ಸಂಘಟನೆ, ಬಲವರ್ಧನೆ. ಮುಂಬರುವ ಲೋಕಸಭಾ ಚುನಾವಣೆ, ತಾ.ಪಂ, ಜಿ.ಪಂ, ಬಿಬಿಎಂಪಿ ಚುನಾವಣೆ ಬಗ್ಗೆ ಚರ್ಚೆ ಮಾಡಿದ್ದೇವೆ. ಆಗಸ್ಟ್ 20 ರಿಂದ ಸೆಪ್ಟೆಂಬರ್ 30ರವರೆಗೂ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ರಾಜ್ಯ ಪ್ರವಾಸ ಕೈಗೊಳ್ಳಲಾಗುತ್ತದೆ. ಸೆಪ್ಟೆಂಬರ್‌ನಲ್ಲಿ ವರದಿ ನೀಡಿದ ಬಳಿಕ ಪದಾಧಿಕಾರಿಗಳ ಬದಲಾವಣೆ ಆಗಲಿದೆ ಎಂದು ಇಬ್ರಾಹಿಂ ಹೇಳಿದರು. ರಾಜ್ಯ ಸರ್ಕಾರದ ವೈಫಲ್ಯದ ಬಗ್ಗೆ ಚರ್ಚೆ ಮಾಡಿದ್ದೇವೆ. ರೈತರು ಕಂಗಾಲಾಗಿದ್ದಾರೆ. ಕೃಷಿ ಸಚಿವರೇ ಹೇಳಿರುವಂತೆ ಮಳೆ ಬಾರದಿದ್ದರೆ, ಬಿತ್ತಿರೋ ಬೆಳೆ ಒಣಗುತ್ತದೆ. ತಮಿಳುನಾಡಿಗೆ ಕಾವೇರಿ ನದಿ ನೀರು ಬಿಟ್ಟಿರುವುದರ ಬಗ್ಗೆಯೂ ಚರ್ಚೆಯಾಗಿದೆ. ಕೂಡಲೇ ಸರ್ವ ಪಕ್ಷದ ಸಭೆ ಕರೆಯಬೇಕು ಎಂದು ಅವರು ಆಗ್ರಹಿಸಿದರು. ಜೆಡಿಎಸ್ ಪಕ್ಷಕ್ಕೆ ಜನ ಮತ ಕೊಟ್ಟಿಲ್ಲ. ಆದರೂ ಪಕ್ಷ ರೈತರ ಕೈಬಿಡಲ್ಲ ಅಂತ ಸಂದೇಶ ಕೊಡಲಿದ್ದೇವೆ. ನಾವೆಲ್ಲಾ ಒಗ್ಗಟ್ಟಾಗಿ ಪಕ್ಷ ಬಲಪಡಿಸುತ್ತೇವೆ ಎಂದರು. ನಂತರ ಜಿ.ಟಿ.ದೇವೇಗೌಡರ ಅಧ್ಯಕ್ಷತೆಯಲ್ಲಿ ಕೋರ್ ಕಮಿಟಿ ಸಭೆ ನಡೆದಿದ್ದು, ಪಕ್ಷ ಸಂಘಟನೆ, ಬಲವರ್ಧನೆ ಹಾಗೂ ಮುಂಬರುವ ಚುನಾವಣೆ ಸಂಬಂಧ ರಾಜ್ಯ ಪ್ರವಾಸದ ಬಗ್ಗೆ ಚರ್ಚೆ ನಡೆಯಿತು.

## ಎರಡು ಸಾವಿರ ಎಕರೆ ಭೂಮಿ ಇದೆ

ಸಹಿ ಹಾಕಿದ್ರಾ? ಒಂದು ಸಣ್ಣ ಸಾಕ್ಷಿ ಇದ್ದರೆ ತೋರಿಸಲಿ. ದೇವೇಗೌಡರ ಕುಟುಂಬವೇ ರಾಜಕೀಯ ನಿವೃತ್ತಿ ಹೊಂದುತ್ತೇವೆ ಎಂದು ಕಿಡಿಕಾರಿದರು.

ಮೂಲ ಒಪ್ಪಂದ ತಿರುಚಿ ಚೌಕಟ್ಟಿನ ಒಪ್ಪಂದಕ್ಕೆ (ಫ್ರೇಮ್ ವರ್ಕ್ ಅಗ್ರಿಮೆಂಟ್) ಸಹಿ ಯಾರು ಹಾಕಿದ್ದು ಯಾರೆಂದು ಗೊತ್ತಿದೆಯಾ ಅವನಿಗೆ? ಆವತ್ತಿನ ನಗರಾಭಿವೃದ್ಧಿ ಸಚಿವರಾಗಿ ಇದ್ದಿದ್ದು ಯಾರು? ಇವನ ಅಣ್ಣನೇ ಅಲ್ವಾ? ಆತನೇ ತಾನೇ ಈ ಒಪ್ಪಂದಕ್ಕೆ ಸಹಿ ಹಾಕಿದ್ದು. ಲೂಟಿ ಹೊಡೆದ 2,000 ಎಕರೆ ಭೂಮಿಯನ್ನು ಯಾರ ಹೆಸರಿಗೆ ಮಾಡಿಕೊಳ್ಳೋಕೆ ಹೊರಟಿದ್ದಾರೆ? ಅವರ ಕುಟುಂಬವೇ ನುಂಗಲು ಹೊರಟಿದೆ. ಇಂಥವರು ನಮ್ಮ ಕುಟುಂಬದ ಬಗ್ಗೆ ಮಾತಾಡ್ತಾರೆ ಎಂದು ಡಿಕೆ ಸಹೋದರರ ವಿರುದ್ಧ ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಶಿಕ್ಷಣ ಇಲಾಖೆಯಲ್ಲಿ ಖಾಸಗಿ ಸಹಭಾಗಿತ್ವಕ್ಕೆ ಸಂಬಂಧಿಸಿ ಡಿ.ಕೆ.ಶಿವಕುಮಾರ್ ಅವರು ಸಭೆ ಮಾಡುತ್ತಿರುವ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡಿದ ಅವರು, ರಾಜ್ಯವನ್ನು ಮಾರಾಟ ಮಾಡಲು ಹೊರಟಿದ್ದಾರೆ ಇವರು. ಬಡ ಮಕ್ಕಳಿಗೆ ಶಿಕ್ಷಣ ಕೊಡಲು ಇವರಿಗೆ ಯೋಗ್ಯತೆ ಇಲ್ಲ. ನಮ್ಮ ರಾಜ್ಯದಲ್ಲಿಯೇ ಈಸ್ಟ್ ಇಂಡಿಯಾ ಕಂಪನಿಗಳಿವೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ಸಾಕ್ಷ್ಯ ಬೇಕಾ ಎಂದು ಪ್ರಶ್ನಿಸಿದರು.

**ರೆಸ್ಟ್ ಕೊಡುವ ಕಾಲ ಸನ್ನಿಹಿತ:** ನನಗೆ ಜನ ರೆಸ್ಟ್ ಕೊಟ್ಟಿದ್ದಾರಂತೆ. ಇವರಿಗೂ ರೆಸ್ಟ್ ಕೊಡುವ ಕಾಲ ಹತ್ತಿರದಲ್ಲೇ ಇದೆ. ಗುತ್ತಿಗೆದಾರರಿಗೆ ಬೆದರಿಕೆ ಹಾಕಿದಂತೆ ನನಗೆ ಬೆದರಿಕೆ ಹಾಕಲು ಸಾಧ್ಯವಿಲ್ಲ. ನೀವು, ನಿಮ್ಮ ಅಣ್ಣ ಬೆದರಿಕೆ ನಮಗೆ ಹಾಕಲು ಆಗಲ್ಲ ಎಂದು ಡಿಕೆ ಸಹೋದರರ ವಿರುದ್ಧ ಹರಿಹಾಯ್ದರು.

ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ನೇತೃತ್ವದಲ್ಲಿ 40 ಪರ್ಸೆಂಟ್ ಬಗ್ಗೆ ತನಿಖೆ ಮಾಡಿಸುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಹೆಚ್‌ಡಿಕೆ, 2016–17ರಲ್ಲಿ ಜಾಬ್ ಕಾರ್ಡ್‌ದು ಇದೇ ನಾಗಮೋಹನ್ ದಾಸ್ ಅವರ ಬಳಿ ತನಿಖೆ ಮಾಡಿಸಿದ್ದರು. ಅದು ಎಲ್ಲಿದೆ? ಆ ವರದಿ ಕಥೆ ಏನಾಯಿತು? ನ್ಯಾಯಮೂರ್ತಿ ವೀರಪ್ಪ ಅವರ ನೇತೃತ್ವದಲ್ಲಿ ತನಿಖೆ ಎಂದರು. ಬಹುಶಃ ಅವರು ಒಪ್ಪಿಲ್ಲ ಅಂತ ಕಾಣುತ್ತೆ. ಹಾಗಾಗಿ ಇವರಿಗೆ ವಹಿಸಿದ್ದಾರೆ ಅನಿಸುತ್ತದೆ ಎಂದು ತರಾಟೆಗೆ ತೆಗೆದುಕೊಂಡರು ಅವರು. ನಾಗಮೋಹನ್ ದಾಸ್ ಅವರ ಕೈಲಿ ತನಿಖೆ ಮಾಡಿಸಿ, ಆ ವರದಿ ಹಾಗೆ ಇಟ್ಟುಕೊಳ್ಳುತ್ತಾರೆ ಅಷ್ಟೆ, ಅದರ ಫಲಿತಾಂಶ ಹೇಗಿರುತ್ತದೆ ಎನ್ನುವುದು ಗೊತ್ತಿದೆ ಎಂದು ಅವರು ವಾಗ್ದಾಳಿ ನಡೆಸಿದರು.

# ದಸರಾದಲ್ಲಿ ಪಾಲ್ಗೊಳ್ಳಲು ಕಲಾವಿದರಿಂದ ಅರ್ಜಿ ಸಲ್ಲಿಕೆ



2022ರ ದಸರಾ ಮಹೋತ್ಸವದಲ್ಲಿ ಭಾಗವಹಿಸಿದ್ದ ಕಲಾತಂಡ (ಸಂಗ್ರಹ ಚಿತ್ರ)



ಜಗನ್ಮೋಹನ ಅರಮನೆಯ ಸಭಾಂಗಣದಲ್ಲಿ ನೃತ್ಯ ಪ್ರದರ್ಶನ (ಸಂಗ್ರಹ ಚಿತ್ರ)

"ಸರ್ಕಾರದಿಂದ ಇನ್ನೂ ದಸರಾ ಉಪ ಸಮಿತಿಯಾಗಿಲ್ಲ. ಸಮಿತಿ ಅಂತಿಮವಾದ ನಂತರ ಇಲಾಖೆ ಯಿಂದ ಸಭೆ ನಡೆಸಿ, ಕಲಾವಿದರು ಮತ್ತು ಕಲಾತಂಡಗಳಿಗೆ ಅರ್ಜಿ ಆಹ್ವಾನಕ್ಕೆ ಪತ್ರಿಕೆಗಳ ಮೂಲಕ ಪ್ರಕಟಣೆ ನೀಡಲಾಗುತ್ತದೆ. ಈಗಾಗಲೇ ರಾಜ್ಯವಲ್ಲದೇ ದೇಶದ ವಿವಿಧ ರಾಜ್ಯಗಳಿಂದ ಕಲಾವಿದರು ಸ್ವಯಂ ಪ್ರೇರಣೆಯಿಂದ ಅರ್ಜಿ ಸಲ್ಲಿಸುತ್ತಿದ್ದಾರೆ.

**ಡಾ.ಎಂ.ಡಿ.ಸುದರ್ಶನ್,** ಸಹಾಯಕ ನಿರ್ದೇಶಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ದಸರಾ ಮಹೋತ್ಸವ ಎಂದ ತಕ್ಷಣ ಇಡೀ ಮೈಸೂರಿನಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗುತ್ತದೆ. ಅದರಂತೆ ಮೈಸೂರಿನ ರಂಗಾಯಣದಲ್ಲಿಯೂ ನವರಾತ್ರಿಯ ಒಂಭತ್ತು ದಿನಗಳು ನಾಟಕಗಳ ಉತ್ಸವ ನಡೆಯುತ್ತದೆ. ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ರಂಗಾಯಣದ ಉಪ ನಿರ್ದೇಶಕಿ ನಿರ್ಮಲ ಮಠಪತಿ ಮಾತನಾಡಿ, ದಸರಾ ಮಹೋತ್ಸವದ ಸಂದರ್ಭದಲ್ಲಿ ಒಂಭತ್ತು ದಿನಗಳು ರಂಗಾಯಣದಲ್ಲಿ ನವರಾತ್ರಿ ನಾಟಕೋತ್ಸವ ನಡೆಸಲಾಗುತ್ತದೆ. ಅದರಂತೆ ಈ ಬಾರಿಯ ದಸರಾ ಮಹೋತ್ಸವಕ್ಕೆ ಕಲಾವಿದರು ಈಗಾಗಲೇ ತರಬೇತಿಯಲ್ಲಿ ತೊಡಗಿದ್ದಾರೆ. ಈ ಬಾರಿ ಎರಡು ಹೊಸ ನಾಟಕಗಳನ್ನು ಪ್ರದರ್ಶನ ಮಾಡುತ್ತೇವೆ ಎಂದು ತಿಳಿಸಿದರು.**

ಮೈಸೂರು, ಆ.18(ಜಿಎ)–ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಕಲಾವಿದರು ಮತ್ತು ಕಲಾ ತಂಡಗಳು ಈಗಾಗಲೇ ಅರ್ಜಿಗಳನ್ನು ಸಲ್ಲಿಸುತ್ತಿದ್ದು, ಕರ್ನಾಟಕ ಮಾತ್ರಲ್ಲದೇ ದೇಶದ ವಿವಿಧ ಭಾಗದ ಕಲಾವಿದರೂ ಮುಂದಾಗಿದ್ದಾರೆ.

ಈ ಬಾರಿಯ ದಸರಾ ಸಾಂಸ್ಕೃತಿಕ ಮತ್ತು ಸಂಗೀತ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕಲಾವಿದರಿಂದ ಅರ್ಜಿ ಆಹ್ವಾನ ಮಾಡಿಲ್ಲ. ಆದರೆ, ಕಲಾವಿದರು ತಮ್ಮ ಪ್ರತಿಭೆಯನ್ನು ಮೈಸೂರು ದಸರಾದಲ್ಲಿ ಪ್ರದರ್ಶಿಸಲು ಈಗಾಗಲೇ ಮೈಸೂರಿನ ಕಲಾಮಂದಿರದಲ್ಲಿರುವ ಕಚೇರಿಗೆ ನೇರವಾಗಿ ಮತ್ತು ಅಂಚೆಯ ಮೂಲಕ ಕರ್ನಾಟಕ, ತಮಿಳುನಾಡು, ಮುಂಬೈ ಮತ್ತು ಕೇರಳ ಸೇರಿದಂತೆ ವಿವಿಧ ಭಾಗಗಳ ಕಲಾವಿದರು ಅರ್ಜಿ ಸಲ್ಲಿಸುತ್ತಿದ್ದಾರೆ.

ಮೈಸೂರು ದಸರಾ ಮಹೋತ್ಸವದಲ್ಲಿ ತಮ್ಮ ಕಲೆಯನ್ನು ಪ್ರದರ್ಶನ ಮಾಡುವುದು ಕಲಾವಿದರಿಗೆ ಹೆಮ್ಮೆಯ ವಿಚಾರವಾಗಿರುವುದರಿಂದ ಕಲಾವಿದರ ನಡುವೆ ಬಹಳಷ್ಟು ಪೈಪೋಟಿ ನಡೆಯುತ್ತದೆ. ಅದರಂತೆ ದೇಶದ ವಿವಿಧ ಮೂಲೆಗಳಿಂದ ಕಲಾವಿದರು ಅರ್ಜಿಯನ್ನು ಸಲ್ಲಿಸುತ್ತಾರೆ. ತಮ್ಮ ಕಲೆ ಪ್ರದರ್ಶಿಸಿ ದಸರಾ ಮಹೋತ್ಸವದಲ್ಲಿ ನೀಡುವ ಪ್ರಮಾಣ ಪತ್ರವನ್ನು ಪಡೆದುಕೊಂಡು ಅನೇಕ ಕಲಾವಿದರು ಅಂತಾರಾಷ್ಟ್ರೀಯ ಮಟ್ಟದ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಹಕಾರಿಯಾಗಿದೆ.

ಮತ್ತೊಂದೆಡೆ ದಸರಾ ಮಹೋತ್ಸವದ ಅಂತಿಮ ದಿನವಾದ ವಿಜಯದಶಮಿಯ ದಿನದಂದು ಮೈಸೂರು ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೂ ನಡೆಯುವ ವಿಶ್ವವಿಖ್ಯಾತ ಜಂಬೂ ಸವಾರಿಯ ಮೆರವಣಿಗೆಯಲ್ಲಿ ಹೆಜ್ಜೆ ಹಾಕಲು ದೇಶದ ವೀರಗಾಸೆ, ಕತ್ತಿ ಕುಣಿತ, ಕರಡಿ ಕುಣಿತ, ಕಂಸಾಳೆ, ನಂದಿ ಧ್ವಜ, ನಗಾರಿ, ಬುಡಕಟ್ಟು ಮತ್ತು ಜಾನಪದ ಕುಣಿತ ಸೇರಿದಂತೆ ವಿವಿಧ ಕಲಾತಂಡಗಳು ಕಾತುರದಿಂದ ಕಾಯುತ್ತಿರುತ್ತವೆ.

ಪ್ರತಿ ವರ್ಷ ದಸರಾ ಮಹೋತ್ಸವದ ಅಂಗವಾಗಿ ಮೈಸೂರು ಅರಮನೆ ಆವರಣ, ಹುಣಸೂರು ರಸ್ತೆಯ ಕಲಾಮಂದಿರ, ಜಗನ್ಮೋಹನ ಅರಮನೆ ಸಭಾಂಗಣ, ಕುವೆಂಪುನಗರದ ಗಾನಭಾರತಿ, ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾ, ಟೌನ್ ಹಾಲ್‌ನಲ್ಲಿ ಸಾಂಸ್ಕೃತಿಕ, ಸಂಗೀತ ಕಾರ್ಯಕ್ರಮಗಳು ನಡೆಯಲಿವೆ. ಇದರೊಟ್ಟಿಗೆ ನಗರದ ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರ ಮತ್ತು ಚಿಕ್ಕ ಗಡಿಯಾರ ಗೋಪುರ (ಡಫರಿನ್ ಕ್ಲಾಕ್ ಟವರ್) ಮುಂಭಾಗವೂ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುತ್ತವೆ. 2019ರಿಂದ ಮೈಸೂರು ಅರಮನೆ ಆವರಣದಲ್ಲಿ ಆಯೋಜಿಸಲಾಗುತ್ತಿರುವ 'ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ' ದಿನದ ಕಾರ್ಯಕ್ರಮ (ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ)ದಲ್ಲಿ ಮತ್ತಷ್ಟು ಕಲಾವಿದರಿಗೂ ಅವಕಾಶ ಕಲ್ಪಿಸಲಾಗುತ್ತಿದೆ.

ಕಳೆದ ವರ್ಷ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಕಲಾವಿದರು ಮತ್ತು ಕಲಾತಂಡಗಳಿಂದ 611 ಅರ್ಜಿಗಳು ಸಲ್ಲಿಕೆಯಾಗಿತ್ತು. ಪೌರಾಣಿಕ, ಸಾಮಾಜಿಕ ಮತ್ತು ಐತಿಹಾಸಿಕ ನಾಟಕ ವಿಭಾಗಗಳಿಂದ 96 ಅರ್ಜಿಗಳು, ಸಂಗೀತಗಾರರು ಮತ್ತು ಜಾನಪದ ಕಲಾವಿದರಿಂದ 409 ಮತ್ತು ವಿವಿಧ ನೃತ್ಯ ಕಲಾವಿದರಿಂದ 93 ಅರ್ಜಿಗಳು ಅಲ್ಲದೆ, ಸಂಯೋಜಿಸಲು 6 ಅರ್ಜಿಗಳನ್ನು ಸ್ವೀಕರಿಸಲಾಗಿತ್ತು.

ಈ ಬಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ವತಃ ಮೈಸೂರು ಜಿಲ್ಲೆಯವರೇ ಆಗಿರುವುದರಿಂದ ಅದ್ಧೂರಿ ದಸರಾ ನಡೆಯುವ ಸಾಧ್ಯತೆಗಳಿದ್ದು, ಒಂದು ಸುತ್ತಿನ ದಸರಾ ಉನ್ನತ ಮಟ್ಟದ ಸಭೆಯನ್ನು ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳು ನಡೆಸಿದ್ದಾರೆ. ಸೆ.1ರಂದು ಗಜಪಯಣವೂ ಆರಂಭವಾಗಲಿದೆ. ದೇಶದ ಎಷ್ಟು ಕಲಾವಿದರು ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಅರ್ಜಿ ಸಲ್ಲಿಸುತ್ತಾರೆ ಕಾದು ನೋಡಬೇಕಿದೆ

# QR ಕೋಡ್ ಸ್ಕ್ಯಾನ್ ಮಾಡಿ ಪೊಲೀಸ್ ಠಾಣೆಗಳಲ್ಲಿ ನಿಮಗಾಗುವ ಅನುಭವ ದಾಖಲಿಸಿ!

ಮೈಸೂರು, ಆ.18(ಆರ್‌ಕೆ)–ಕಾಲ ಉರುಳಿದಂತೆ ಪೊಲೀಸ್ ಠಾಣೆಗಳ ಕಾರ್ಯವೈಖರಿ, ಅಧಿಕಾರಿಗಳು, ಸಿಬ್ಬಂದಿಗಳ ನಡವಳಿಕೆ, ವರ್ತನೆಯಲ್ಲೂ ಬದಲಾಗುತ್ತಿದೆ.




ಸಾರ್ವಜನಿಕರ ಪ್ರಾಣ, ಮಾನ, ಆಸ್ತಿ ರಕ್ಷಿಸುವ ಜವಾಬ್ದಾರಿ ಹೊಂದಿರುವ ಪೊಲೀಸರು ಕಾನೂನಿನ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸಿ ಮಾನವೀಯತೆಯೊಂದಿಗೂ ವರ್ತಿಸುವ ಮೂಲಕ ನೊಂದವರಿಗೆ ಸಹಾಯ ಮಾಡಬೇಕಾಗುತ್ತದೆ. ಹಾಗೆ ಸಹಾಯ, ನೆರವು ಬಯಸಿ ಠಾಣೆಗಳಿಗೆ ಬರುವ ಸಾರ್ವಜನಿಕರೊಂದಿಗೆ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳು ಹೇಗೆ ನಡೆದುಕೊಂಡರು, ಅವರ ಅನುಭವ ಹೇಗಿತ್ತು ಎಂಬುದನ್ನು ತಿಳಿಸಲು ಮೈಸೂರು ನಗರ ಪೊಲೀಸ್ ಘಟಕವು ಎಲ್ಲಾ ಠಾಣೆಗಳಿಗೂ ಪ್ರತ್ಯೇಕ QR ಕೋಡ್ ಒದಗಿಸಿದೆ.

ಠಾಣೆಗೆ ಭೇಟಿ ನೀಡಿದಾಗ ಆದ ಅನುಭವದ ಬಗ್ಗೆ ಅಲ್ಲಿ ಅಂಟಿಸಲಾದ ಡೈನಮಿಕ್ QR ಕೋಡ್ ಅನ್ನು ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿದರೆ ಸಾಕು, ಅದ'ರ'ಲ್ಲಿ ಕೇಳಿರುವ' ಮಾಹಿತಿಗಳನ್ನು ಬರೆದು ಅಪ್‌ಲೋಡ್ ಮಾಡಿದರೆ ನಗರ ಪೊಲೀಸ್ ಘಟಕದ ಮುಖ್ಯಸ್ಥರ ಗಮನಕ್ಕೆ ಹೋಗುತ್ತದೆ.

ಪೊಲೀಸ್ ಠಾಣೆಗೆ ಹೋದಾಗ ಸಿಬ್ಬಂದಿಗಳ ನಡವಳಿಕೆ, ಕರ್ತವ್ಯ ವೈಖರಿ, ತಾವು ಕೋರಿದ ಸೇವೆ ಲಭ್ಯವಾಯಿತೆ?, ತೊಂದರೆಯಾಯಿತೆ?, ನೀವು ಗಮನಿಸಿದ ಅಂಶಗಳನ್ನು ಅಲ್ಲಿ ನಮೂದಿಸಬಹುದಾಗಿದೆ. ಪ್ರತೀ ಠಾಣೆಗೆ ಬೇರೆ ಬೇರೆ QR ಕೋಡ್ ಇರುತ್ತದೆ. ನೀವು ಸ್ಕ್ಯಾನ್ ಮಾಡಿ ವಿವರ ನೀಡಿದರೆ, ಅದು ಯಾವ ಪೊಲೀಸ್ ಠಾಣೆಗೆ ಸಂಬಂಧಿಸಿದ ಪ್ರತಿಕ್ರಿಯೆ ಎಂಬುದು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ತಿಳಿಯುತ್ತದೆ.

ಕಳೆದ ಒಂದು ತಿಂಗಳ ಹಿಂದೆ ನೀಡಿರುವ ಈ QR ಕೋಡ್‌ಗಳನ್ನು ಸ್ಕ್ಯಾನ್ ಮಾಡಿ ಜನರು ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಿದ್ದಾರೆ. ಈವರೆಗೆ ಯಾವುದೇ ಠಾಣಾಧಿಕಾರಿಗಳು ಅಥವಾ ಸಿಬ್ಬಂದಿ ಸರಿಯಾಗಿ ಸ್ಪಂದಿಸದಿದ್ದರೆ ಅಥವಾ ದುರ್ನಡತೆ ಪ್ರದರ್ಶಿಸಿದರೆ ಹಿರಿಯ ಪೊಲೀಸ್ ಅಧಿಕಾರಿಗಳ ಗಮನಕ್ಕೆ ತರಲು ಕೆಲವರು ಹಿಂಜರಿಯುತ್ತಿದ್ದರು. ಆದರೆ ಈಗ QR ಕೋಡ್ ವ್ಯವಸ್ಥೆ ಇರುವುದರಿಂದ ಅದನ್ನು ಸ್ಕ್ಯಾನ್ ಮಾಡಿ ಕುಳಿತಲ್ಲೇ ತಮ್ಮ ಅಭಿಪ್ರಾಯಗಳನ್ನು ಸಲೀಸಾಗಿ ನೀಡಬಹುದಾಗಿದೆ. ಇದೀಗ ಈ ವ್ಯವಸ್ಥೆಯನ್ನು ಸಾರ್ವಜನಿಕರು ಬಳಸಿಕೊಳ್ಳುತ್ತಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದ್ದಾರೆ.

ಪೊಲೀಸ್ ಠಾಣೆಗಳಲ್ಲಿ ಒಳ್ಳೆಯದಾಗಲೀ ಅಥವಾ ಕೆಟ್ಟ ನಡವಳಿಕೆಯಾಗಲೀ ಇದೆ ಎಂಬುದು ಸಾರ್ವಜನಿಕರಿಂದ ಫೀಡ್ ಬ್ಯಾಕ್ ಬರುತ್ತಿದ್ದಂತೆಯೇ ನಮಗೆ ಸಂಬಂಧಪಟ್ಟ ಠಾಣಾಧಿಕಾರಿ ಅಥವಾ ಸಿಬ್ಬಂದಿ ವಿರುದ್ಧ ಕ್ರಮ ವಹಿಸಲು ಅಥವಾ ಪ್ರೋತ್ಸಾಹ ನೀಡಲು ಈ ವ್ಯವಸ್ಥೆಯಿಂದ ಸಾಧ್ಯವಾಗುತ್ತದೆ ಎಂದು ಅವರು ತಿಳಿಸಿದರು.

# ರಂಗ ಪಿತಾಮಹರ ದಿನಾಚರಣೆ



ಮೈಸೂರು, ಆ.18(ಜಿಎ)–ಮೈಸೂರು, ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಗಣಪತಿ ಮಿತ್ರ ಮಂಡಳಿ ವತಿಯಿಂದ ರಂಗ ಪಿತಾಮಹರ ದಿನಾಚರಣೆ ಆಚರಿಸಲಾಯಿತು. ನಗರದ ಪುರಭವನದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮವನ್ನು ಮಂಡಳಿಯ ಗೌರವ ಅಧ್ಯಕ್ಷ ಸಿ.ಎಂ.ಮಾಲಿಂಗು ಉದ್ಘಾಟಿಸಿ ಮಾತನಾಡಿದ ಅವರು, ಹಿಂದೆ ಕಲಾವಿದರು ನಾಟಕ ಪ್ರದರ್ಶನ ಏರ್ಪಡಿಸುತ್ತಾರೆ ಎಂದ ತಕ್ಷಣ ಟಿಕೆಟ್ ಖರೀದಿಸಲು ಪ್ರೇಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದರು. ಆದರೆ ಇಂದು ಉಚಿತ ಪ್ರವೇಶವಿದ್ದರೂ ಯಾರು ಬರುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಗಾಯಕರು ರಂಗಗೀತೆ, ಚಿತ್ರ ಗೀತೆಗಳನ್ನು ಪ್ರಸ್ತುತಪಡಿಸಿದರು. ಹಿರಿಯ ಸಂಗೀತ ನಿರ್ದೇಶಕ ಬಾಲಕೃಷ್ಣ, ಆಮ್ ಆದ್ಮಿ ಪಕ್ಷ ಜಿಲ್ಲಾಧ್ಯಕ್ಷ ಎಲ್.ರಂಗಯ್ಯ, ಉಪಾಧ್ಯಕ್ಷ ಸಂಜೀವ ಕುಮಾರ್ ಸೇರಿದಂತೆ ಮಂಡಳಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಆ.20ರಂದು ಫ್ಯಾಷನ್ ಶೋ

ಮೈಸೂರು, ಆ.18(ಎಂಟಿವೈ)– ಮೈಸೂರಿನ ತಿಬ್ಬಾಸ್ ಗ್ರೂಪ್ ಫೌಂಡೇಷನ್ ವತಿಯಿಂದ ಆ.20ರಂದು ಬೆಳಗ್ಗೆ 10ಗಂಟೆಯಿಂದ ಕಿಂಗ್ಸ್ ಎಲ್ ಡನ್ ರೆಸಾರ್ಟ್‌ನಲ್ಲಿ ನ್ಯಾಷನಲ್ ಐಕಾನ್ ಮಾಡೆಲ್ ಅಂಡ್ ಸೀಸನ್ 3 ಫ್ಯಾಷನ್ ಶೋ ಹಾಗೂ ರಾಷ್ಟ್ರೀಯ ಮಾನ್ಯತಾ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ತಿಬ್ಬಾಸ್ ಸಂಸ್ಥೆಯ ಸಂಸ್ಥಾಪಕ ಡಿ.ಸಿ. ನಾಗೇಶ್ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಫ್ಯಾಷನ್ ಶೋದಲ್ಲಿ ರೂಪದರ್ಶಿಗಳು ಹೆಜ್ಜೆ ಹಾಕಲಿದ್ದಾರೆ. ಇದು ರಾಷ್ಟ್ರಮಟ್ಟದ ಸ್ಪರ್ಧೆಯಾಗಿದ್ದು, ಸಾಂಸ್ಕೃತಿಕ ಉಡುಪು ಸೇರಿದಂತೆ ವಿವಿಧ ಬಗೆಯ ಉಡುಪು ಧರಿಸಿ, ವಿವಿಧ ಸುತ್ತಿನ ಸ್ಪರ್ಧೆ ನಡೆಸಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಫ್ಯಾಷನ್ ಶೋ ಉಸ್ತುವಾರಿ ಎಸ್. ಶಿವಾನಿ ಇದ್ದರು.

## ನಾಳೆ 'ಆಲ್‌ರೈಟ್ ಮಂತ್ರ ಮಾಂಗಲ್ಯ' ನಾಟಕ ಪ್ರದರ್ಶನ

ಮೈಸೂರು, ಆ.18– ರಂಗಕರ್ಮಿ ಮೈಮ್ ರಮೇಶ್ ಅವರ ಜಿಪಿಐಇಆರ್ ತಂಡವು ಆಗಸ್ಟ್ 20ರಂದು ಸಂಜೆ 7 ಗಂಟೆಗೆ ನಗರದ ಕಲಾಮಂದಿರ ಪಕ್ಕದ ಕಿರು ರಂಗಮಂದಿರದಲ್ಲಿ 'ಆಲ್ ರೈಟ್ ಮಂತ್ರ ಮಾಂಗಲ್ಯ' ನಾಟಕ ಪ್ರಸ್ತುತಪಡಿಸಲಿದೆ. ಪತ್ರಕರ್ತ, ಲೇಖಕ ಗಣೇಶ ಅಮೀನಗಡ ಅವರ ಹೊಸ ನಾಟಕ ಇದಾಗಿದ್ದು, ಕುವೆಂಪು ಅವರ ಮಂತ್ರ ಮಾಂಗಲ್ಯ ಆಧರಿಸಿದೆ. ಈ ನಾಟಕದ ವಿನ್ಯಾಸ ಹಾಗೂ ನಿರ್ದೇಶನ ರಂಗಾಯಣದ ಕಲಾವಿದರಾಗಿದ್ದ ಮೈಮ್ ರಮೇಶ್ ಅವರದು. ಎನ್‌ಎಸ್‌ಡಿ ಪದವೀಧರ ಜಗದೀಶ್ ಆರ್.ಜಾಣಿ ಸಂಗೀತ ನೀಡಿದ್ದಾರೆ. ಮಂತ್ರ ಮಾಂಗಲ್ಯದಿಂದ ಶುರುವಾಗುವ ಈ ನಾಟಕ, ಮಂತ್ರ ಮಾಂಗಲ್ಯದೊಂದಿಗೆ ಮುಕ್ತಾಯವಾಗಲಿದೆ. ಈ ನಾಟಕದ ಅವಧಿ ಒಂದೂವರೆ ಗಂಟೆಯದು ಎಂದು ಜಿಪಿಐಇಆರ್ ತಂಡದ ಸಂಚಾಲಕ ಎಂ.ಪಿ.ಹರಿದತ್ತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




## ನಾಳೆ 'ಬ್ರೆಸ್ಟ್ ಫೀಡಿಂಗ್ ವಾಕಥಾನ್'

ಮೈಸೂರು,ಆ.18(ಎಂಟಿವೈ)– ವಿಶ್ವ ಸ್ತನ್ಯಪಾನ ಮಾಸಾಚರಣೆ ಹಿನ್ನೆಲೆಯಲ್ಲಿ ಆ.20ರಂದು ಬೆಳಗ್ಗೆ 7 ಗಂಟೆಗೆ ಮದರ್‌ಹುಡ್ ಆಸ್ಪತ್ರೆ ವತಿಯಿಂದ 'ಬ್ರೆಸ್ಟ್ ಫೀಡಿಂಗ್ ವಾಕಥಾನ್' ಆಯೋಜಿಸಲಾಗಿದೆ ಎಂದು ಮದರ್‌ಹುಡ್ ಆಸ್ಪತ್ರೆಯ ಸೌಲಭ್ಯ ವಿಭಾಗದ ನಿರ್ದೇಶಕ ಬಿ.ಜೆ.ಸಂದೀಪ್ ಪಟೇಲ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನವಜಾತ ಶಿಶುಗಳಿಗೆ ಎದೆ ಹಾಲು ಉಣಿಸುವ ಮಹತ್ವ ತಿಳಿಸುವ ನಿಟ್ಟಿನಲ್ಲಿ ಎಲ್ಲೆಡೆ ಸ್ತನ್ಯಪಾನ ಮಾಸಾಚರಣೆಯಡಿ ವಿವಿಧ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಕೆಲವರಲ್ಲಿ ತಪ್ಪು ಕಲ್ಪನೆ ಇದೆ. ಮಕ್ಕಳ ಬೆಳವಣಿಗೆಗೆ ಎದೆಹಾಲು ಬಹುಮುಖ್ಯ ಪಾತ್ರವಹಿಸುತ್ತಿದೆ. ಜನರಲ್ಲಿ ಜಾಗೃತಿ ಮೂಡಿಸಲು ವಾಕಥಾನ್ ಆಯೋಜಿಸಲಾಗಿದೆ ಎಂದರು. ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದ ಆ.20ರಂದು ಬೆಳಗ್ಗೆ 7 ಗಂಟೆಗೆ ವಾಕಥಾನ್‌ಗೆ ರಾಜವಂಶಸ್ಥರಾದ ತ್ರಿಷಿಕಾ ಕುಮಾರಿ ಒಡೆಯರ್ ಚಾಲನೆ ನೀಡಲಿದ್ದಾರೆ. ಈ ವಾಕಥಾನ್‌ನಲ್ಲಿ ರೋಟರಿ ವೆಸ್ಟ್, ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್, ಕರ್ನಾಟಕ ರಾಜ್ಯ ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರ ಸಂಸ್ಥೆಯ ಪದಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಆರಂಭವಾಗುವ ವಾಕಥಾನ್ ಹಾರ್ಡಿಂಜ್ ವೃತ್ತದವರೆಗೆ ಸಾಗಿ ಮತ್ತೆ ಕೋಟೆ ಆಂಜನೇಯ ಸ್ವಾಮಿ ದೇವಾಲಯ ಆವರಣ ತಲುಪಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ವೆಸ್ಟ್ ಅಧ್ಯಕ್ಷೆ ಆಶಿಕಾ ಕುಶಾಲಪ್ಪ, ಜಿ.ಕೆ. ಸುಧೀಂದ್ರ, ಡಾ.ಎ. ಸೋನಿಯಾ ಮಂದಪ್ಪ ಇದ್ದರು.

# ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿದ್ದಂತೆ ರಾಜ್ಯಕ್ಕೆ ದುರ್ದೆಸೆ ಶುರುವಾಗಿದೆ

## ● ಮಾಜಿ ಸಚಿವ ಸಿ.ಟಿ.ರವಿ ಟೀಕೆ ● ಸಮರ್ಪಕ ಮಳೆ ಇಲ್ಲದೆ ರಾಜ್ಯದ ಜಲಾಶಯಗಳು ತುಂಬಲಿಲ್ಲ ● ಕಾಂಗ್ರೆಸ್ ಶಾಸಕರೇ ಅಸಮಾಧಾನಗೊಂಡಿದ್ದಾರೆ

ಮೈಸೂರು, ಆ.18(ಎಸ್‌ಬಿಡಿ)– ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ರಾಜ್ಯಕ್ಕೆ ದುರ್ದೆಸೆ ಶುರುವಾಗಿದೆ ಎಂದು ಮಾಜಿ ಸಚಿವ ಸಿ.ಟಿ.ರವಿ ಟೀಕಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಬಳಿ ಶುಕ್ರವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಬಿಜೆಪಿ ಸರ್ಕಾರವಿದ್ದಾಗ ಕೆಆರ್‌ಎಸ್ ಭರ್ತಿಯಾಗದ ಪರಿಸ್ಥಿತಿ ಎಂದೂ ಬಂದಿರಲಿಲ್ಲ. ಆದರೆ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ರಾಜ್ಯಕ್ಕೆ ದುರ್ದೆಸೆ ಆರಂಭವಾಗಿದೆ. ಪರಿಣಾಮ ಜಲಾಶಯ ಖಾಲಿಯಾಗಿ ರೈತರಿಗೆ ನೀರಿಲ್ಲದ ದುಸ್ಥಿತಿ ನಿರ್ಮಾಣವಾಗಿದೆ. ಈಗಾಗಲೇ ಲೋಡ್ ಶೆಡ್ಡಿಂಗ್ ಶುರುವಾಗಿದೆ. ವಿದ್ಯುತ್ ಇಲ್ಲದಿರುವಾಗ ಶೂನ್ಯ ಬಿಲ್ ಎನ್ನುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಕಾಂಗ್ರೆಸ್ ಸರ್ಕಾರಕ್ಕೆ ಅಭದ್ರತೆ ಕಾಡುತ್ತಿದೆ. ಆದ್ದರಿಂದ ಆಪರೇಷನ್ ಹಸ್ತಕ್ಕೆ ಮುಂದಾಗಿದ್ದಾರೆ. ಚುನಾವಣೆಯಲ್ಲಿ 135 ಸ್ಥಾನ ಪಡೆದಿದ್ದರೂ ಸರ್ಕಾರ ಅಸ್ತಿತ್ವಕ್ಕೆ ಬಂದ ಎರಡೇ ತಿಂಗಳಲ್ಲಿ ಶಾಸಕರು ಅಸಮಾಧಾನ ಹೊರಹಾಕಿದ್ದಾರೆ. ಇದರ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಜಿಲ್ಲಾವಾರು ಸಚಿವರು ಹಾಗೂ ಶಾಸಕರ ಸಭೆ ನಡೆಸುತ್ತಿದ್ದಾರೆ. ಈ ಸರ್ಕಾರ 6 ತಿಂಗಳೂ ಇರುವುದಿಲ್ಲ ಎಂದು ನಮ್ಮ ಪಕ್ಷದ ಯತ್ನಾಳ್ ಹೇಳಿದ್ದಾರೆ. ಹೀಗಾಗಿ ಕಾಂಗ್ರೆಸ್‌ನವರಿಗೆ ವಾಸ್ತವ ಅರಿವಾಗಿ ಭಯಗೊಂಡಿದ್ದು, ಅವರಿಗೆ ಅಭದ್ರತೆ ಕಾಡಲು ಶುರುವಾಗಿದೆ. ಪರಿಣಾಮ ಆಪರೇಷನ್ ಹಸ್ತಕ್ಕೆ ಮುಂದಾಗಿದ್ದಾರೆ ಎಂದರು.



### ನಾನು ರಾಜ್ಯಾಧ್ಯಕ್ಷ ರೇಸ್‌ನಲ್ಲಿಲ್ಲ...

ಕಾರ್ಯಕರ್ತನಿಗೆ ಆಯ್ಕೆ ಇಲ್ಲ. ಪಕ್ಷ ಯಾವ ಕೆಲಸ ಕೊಟ್ಟರೂ ನಿರ್ವಹಿಸುತ್ತೇನೆ. ಸಚಿವನಾಗಿದ್ದಾಗ ಪಕ್ಷ ಸೂಚನೆ ನೀಡಿದಾಕ್ಷಣ ರಾಜೀನಾಮೆ ನೀಡಿ ಪಕ್ಷದ ಕೆಲಸದಲ್ಲಿ ತೊಡಗಿಸಿಕೊಂಡೆ. ಎಲ್ಲಾ ವಿಚಾರಗಳಲ್ಲೂ ನನ್ನ ಹೆಸರು ಕೇಳಿಬರುತ್ತದೆ. ಸದ್ಯ ವಿರೋಧ ಪಕ್ಷದ ರೇಸ್‌ನಲ್ಲಿದ್ದಾರೆ ಎಂದು ಮಾಧ್ಯಮದಲ್ಲಿ ಬಿತ್ತರವಾಗುತ್ತಿಲ್ಲ. ನಾನು ಯಾವುದೇ ಹುದ್ದೆಯ ರೇಸ್‌ನಲ್ಲಿಲ್ಲ. ಪಕ್ಷ ಬಯಸಿದಂತೆ ಕೆಲಸ ಮಾಡುತ್ತೇನೆ.

-ಸಿ.ಟಿ.ರವಿ, ಮಾಜಿ ಸಚಿವ

**ಯಾರೂ ಕಾಂಗ್ರೆಸ್ ಸೇರಲ್ಲ:** ದುರ್ದೆಸೆ ಇರುವ ಸಂದರ್ಭದಲ್ಲಿ ಕಾಂಗ್ರೆಸ್‌ಗೆ ಹೋಗುವವರನ್ನು ರಾಜಕೀಯ ಜಾಣ್ಮೆ, ದೂರಾಲೋಚನೆ ಉಳ್ಳವರು ಎನ್ನಲಾಗದು. ಸರ್ಕಾರ ರಚನೆಯಾದಾಗಿನಿಂದ ಅಲ್ಲಿನ ಹಿರಿಯ ಶಾಸಕರಿಗೇ ಸಮಾಧಾನ ಇಲ್ಲ. ಹೀಗಿರುವಾಗ ಇಲ್ಲಿಂದ ಹೋದವರಿಗೆ ಯಾವ ಸಮಾಧಾನ ಸಿಗುತ್ತದೆ. ಅಂತಹ ಪರಿಸ್ಥಿತಿ ಉಂಟಾಗುವುದಿಲ್ಲ ಎಂಬ ನಂಬಿಕೆಯಿದೆ. ಎಸ್.ಟಿ.ಸೋಮಶೇಖರ್ ಅವರೊಂದಿಗೆ ಮಾತನಾಡಲಿದ್ದೇನೆ. ಅವರ ಭಾವನೆ ಏನಿದೆ ಎಂದು ತಿಳಿದುಕೊಂಡ ನಂತರ ಉಳಿದವರೊಂದಿಗೆ ಮಾತನಾಡುತ್ತೇನೆ. ಚುನಾವಣೆ ಮುಗಿದು 3 ತಿಂಗಳಾಗಿದೆ. ಸೋತಿರುವ ನಾವುಗಳೇ ಮತ್ತೊಬ್ಬರ ಕಡೆ ಬೊಟ್ಟು ಮಾಡದೆ ನಾವೇ ಹೊಣೆಗಾರರೆಂದು ಹೇಳಿಕೊಂಡಿದ್ದೇವೆ. ದೂರವಾಣಿ ಮೂಲಕ ಸೋಮಶೇಖರ್ ಅವರೊಂದಿಗೆ ಮಾತನಾಡಿದ್ದು, ಮತ್ತೊಮ್ಮೆ ಮುಖಾಮುಖಿ ಮಾತನಾಡುತ್ತೇನೆ. ಎಲ್ಲವೂ ಬಗೆಹರಿಯುತ್ತದೆ. ಈ ಬಗ್ಗೆ ನಮ್ಮ ಪಕ್ಷದ ಶಾಸಕರ ಜೊತೆಗೂ ಮಾತನಾಡುತ್ತೇನೆ. ಯಾರೂ ಕೂಡ ಅಷ್ಟು ಸುಲಭವಾಗಿ ಕಾಂಗ್ರೆಸ್‌ಗೆ ಹೋಗುವುದಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

**ಗ್ಯಾರಂಟಿ 'ಕೈ' ಹಿಡಿದಿದೆ:** ನಮಗೆ ರಾಜ್ಯದ ಜನತೆ ಬಗ್ಗೆ ಆತಂಕ ಹೆಚ್ಚಾಗುತ್ತಿದೆ. ಕಾಂಗ್ರೆಸ್ ಸರ್ಕಾರ ಬಂದಾಗಿನಿಂದ ಭವಿಷ್ಯದ ಚಿಂತನೆ ಮರೀಚಿಕೆಯಾಗಿದೆ. ಉದ್ಯೋಗಿಗಳಿಗೆ ವೇತನ ನೀಡುತ್ತಿಲ್ಲ, ಅಭಿವೃದ್ಧಿ, ಉದ್ಯೋಗ ಸೃಷ್ಟಿ ದೂರದ ಮಾತಾಗಿದೆ. ಕೇವಲ ಓಟಿಗಾಗಿ 5 ಗ್ಯಾರಂಟಿಗಳ ಹಿಂದೆ ಬಿದ್ದಿದ್ದಾರೆ. ಇದರ ಪರಿಣಾಮವನ್ನು ಜನತೆ ಅನುಭವಿಸುವಂತಾಗಿದೆ. ರಾಜ್ಯದಲ್ಲಿ ಬೆಲೆ ಏರಿಕೆ ದಾಖಲೆ ಹಂತ ಮೀರುವ ಸಾಧ್ಯತೆ ಇದೆ. ಭವಿಷ್ಯದ ಮೈಸೂರಿಗೆ ಯೋಜನೆಗಳೇನು ಎನ್ನುವುದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬಳಿ ಉತ್ತರವೇ ಇಲ್ಲ. ಮೂರ್‍ನಾಲ್ಕು ತಿಂಗಳ ಬಳಿಕ ಲೋಕಸಭೆ ಚುನಾವಣೆ ಎದುರಾಗಲಿದೆ. ನಂತರದಲ್ಲಿ ಕಾಂಗ್ರೆಸ್‌ನಲ್ಲಿ ಅಸಹನೆ, ಆಕ್ರೋಶ ಯಾವ ರೀತಿಯಲ್ಲಿ ಸ್ಫೋಟವಾಗುತ್ತದೆ ಎಂದು ಎಲ್ಲರಿಗೂ ತಿಳಿಯಲಿದೆ. 2 ತಿಂಗಳಿಗೆ ಹಿರಿಯ ಶಾಸಕರು ಪತ್ರ ಬರೆದು ಅಸಮಾಧಾನ ಹೊರಹಾಕಿದ್ದಾರೆ. ಎಲ್ಲವೂ ಸರಿಯಿದ್ದರೆ ಇದೆಲ್ಲಾ ಹೇಗೆ ನಡೆಯುತ್ತದೆ. ಒಳಗೆ ಎಲ್ಲವೂ ಸರಿಯಿಲ್ಲ ಎಂದರು.

ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಜೊತೆ ಮೈತ್ರಿ ಸಾಧ್ಯತೆ ಬಗ್ಗೆ ಪ್ರತಿಕ್ರಿಯಿಸಿ, ನಾವು 28 ಸ್ಥಾನದಲ್ಲೂ ಗೆಲ್ಲಲು ಅಗತ್ಯವಿರುವ ಎಲ್ಲಾ ಯೋಚನೆಯನ್ನೂ ಮಾಡುತ್ತೇವೆ. ದೇಶದ ಹಿತದೃಷ್ಟಿಯಿಂದ ಮೋದಿ ಅವರು ಮತ್ತೆ ಪ್ರಧಾನಿಯಾಗಬೇಕು. ಮುಂದಿನ ಅವಧಿಗೆ ಭಾರತ ವಿಶ್ವದ ಮೂರನೇ ಆರ್ಥಿಕ ಶಕ್ತಿಯಾಗಿ ಬೆಳೆಯಬೇಕು ಎಂಬುದು ಮೋದಿಯವರ ಆಶಯ. ಈ ಕಾರಣದಿಂದ ಮೋದಿಯವರು ಮತ್ತೆ ಪ್ರಧಾನಿಯಾಗಬೇಕು. ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನವರನ್ನು ನಿರ್ಲಕ್ಷ್ಯ ಮಾಡಲ್ಲ. ಅವರನ್ನು ನಿರ್ಲಕ್ಷ್ಯ ಮಾಡಿದ ಪರಿಣಾಮ ರಾಜ್ಯದಲ್ಲಿ ಅಧಿಕಾರ ಕಳೆದುಕೊಂಡೆವು. ಅವರ ಗ್ಯಾರಂಟಿ ಚರ್ಚೆಗೆ ಸರಿಯಾಗಿ ಕೌಂಟರ್ ಮಾಡಲಿಲ್ಲ. ಪೇ ಸಿಎಂ ಎಂದು ಹೇಳಿದಾಗ ಸೂಕ್ತ ಕ್ರಮ ತೆಗೆದುಕೊಳ್ಳಲಿಲ್ಲ. ಇದರ ಪರಿಣಾಮ ಅನುಭವಿಸುತ್ತಿದ್ದೇವೆ. ಮತ್ತೆ ಇಂತಹ ನಿರ್ಲಕ್ಷ ಮಾಡುವುದಿಲ್ಲ. ನಾವು ಜನರ ಮುಂದೆ ಹೋಗುತ್ತೇವೆ. ನಮ್ಮ ತಪ್ಪು ತಿದ್ದಿಕೊಂಡು ಮುಂದೆ ಹೋಗುತ್ತೇವೆ ಎಂದು ತಿಳಿಸಿದರು.

## ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ ರಸ್ತೆ ಓಟ

ಮೈಸೂರು, ಆ. 18–ಅಲ್ಯೂಮ್ನಿ ಅಸೋಸಿಯೇಷನ್ ಆಫ್ ಸ್ಪೋರ್ಟ್ಸ್‌ಪರ್ಸನ್ಸ್ ರೆಪ್ರೆಸೆಂಟೆಡ್ ಯೂನಿವರ್ಸಿಟಿ ಆಫ್ ಮೈಸೂರು ವತಿಯಿಂದ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ ಆ.29ರಂದು ಬೆಳಗ್ಗೆ 6.30ಕ್ಕೆ ಮೈಸೂರು ವಿವಿ ಓವಲ್ ಗ್ರೌಂಡ್ ಮೈದಾನದಲ್ಲಿ ರಸ್ತೆ ಓಟ ಏರ್ಪಡಿಸಲಾಗಿದೆ. ಬಾಲಕರಿಗೆ 3 ಕಿ.ಮೀ. ರಸ್ತೆ ಓಟ, ಬಾಲಕಿಯರಿಗೆ 2 ಕಿ.ಮೀ. ರಸ್ತೆ ಓಟ. 12 ವರ್ಷ ಮೇಲ್ಪಟ್ಟು ಮತ್ತು 16 ವರ್ಷದೊಳಗಿನ ಬಾಲಕ, ಬಾಲಕಿಯರು ಭಾಗವಹಿಸಬಹುದು. ಜನನ ಪ್ರಮಾಣ ಪತ್ರ ಮತ್ತು ಆಧಾರ್ ಕಾರ್ಡ್ ಕಡ್ಡಾಯವಾಗಿರುತ್ತದೆ. ಆಸಕ್ತರು ಆ.21ರಿಂದ 25ರವರೆಗೆ ನೋಂದಾಯಿಸಿಕೊಳ್ಳಬಹುದು. ಮಾಹಿತಿಗೆ ಮೊ. 9731808008, 9880260510 ಸಂಪರ್ಕಿಸಬಹುದು.



ಮೈಸೂರಿನ ಸೇಂಟ್ ಫಿಲೋಮಿನಾ ಕಾಲೇಜಿನಲ್ಲಿ 77ನೇ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ಪ್ರೊ. ಸೆಸಿಲಾ ಎನ್.ಎ. ಡಿಸೋಜ ಧ್ವಜಾರೋಹಣ ನೆರವೇರಿಸಿದರು. ರೆ. ಡಾ. ಬರ್ನಾಡ್ ಪ್ರಕಾಶ್, ಮರಿಯಾ ಕ್ಸೇವಿಯರ್, ಡಾ. ರವಿ ಜೆ.ಡಿ. ಸಲ್ಡಾನಾ, ಕ್ರಿಸ್ಟೋಫರ್ ಎಸ್.ಜೆ., ಪ್ರವೀಣ್ ಕುಮಾರ್, ಪ್ರೊ. ನಾಗರಾಜ್ ಅರಸ್, ರೋನಾಲ್ಡ್ ಪ್ರಕಾಶ್ ಕುಟಿನಾ, ಥಾಮಸ್ ಗುಣಶೀಲನ್ ಮತ್ತಿತರರು ಹಾಜರಿದ್ದರು.



ಮೈಸೂರಿನ ಶಾರದಾ ವಿಲಾಸ ವಿದ್ಯಾ ಸಂಸ್ಥೆಯಲ್ಲಿ ನಡೆದ ಸ್ವಾತಂತ್ರ್ಯೋತ್ಸವ ಸಂಭ್ರಮದಲ್ಲಿ ಭಾರತೀಯ ನೌಕಾಪಡೆಯ ಕಮಾಂಡರ್ ಎಸ್.ಮಹೇಂದ್ರ ಸಿಂಗ್ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಬಿ.ಎನ್.ಸುಬ್ರಾಯ, ಆಡಳಿತ ಮಂಡಳಿ ಸದಸ್ಯರಾದ ಆರ್.ನರಸಿಂಹ, ಎಸ್.ಎಲ್.ರಾಮಚಂದ್ರ, ಆರ್.ಎಸ್. ಮೋಹನ ಮೂರ್ತಿ, ಎಸ್.ನಾಗರಾಜು, ಅನುರಾಧ ನಂದಕುಮಾರ್, ಡಾ.ಸುರೇಶ್, ಡಾ. ಟಿ.ಕೆ. ಉಮೇಶ್, ದಿನೇಶ್ ಜೋಶಿ ಮತ್ತಿತರರು ಹಾಜರಿದ್ದರು.

# ದಸರೆಯಲ್ಲಿ 'ಸ್ತ್ರೀ ಶಕ್ತಿ' ಕಾರುಬಾರು ಖಚಿತ: 300 ಹೆಚ್ಚುವರಿ ಬಸ್ ಪ್ರಸ್ತಾವನೆ ಸಲ್ಲಿಸಿದ ಸಾರಿಗೆ ಸಂಸ್ಥೆ

- ಮೈಸೂರು ಭಾಗದಲ್ಲಿ ಪ್ರಯಾಣಿಕರ ಸಂಖ್ಯೆಯಲ್ಲಿ ಶೇ.30ರಷ್ಟು ಹೆಚ್ಚಳ
- ಮೈಸೂರಿಗೆ ಮಹಿಳಾ ಪ್ರಯಾಣಿಕರ ದಂಡಿನ ನಿರೀಕ್ಷೆ

■ಎಂ.ಟಿ.ಯೋಗೇಶ್ ಕುಮಾರ್



ಮೈಸೂರು,ಆ.18– ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಾದ ಪಂಚ ಗ್ಯಾರಂಟಿಗಳಲ್ಲಿ ಒಂದಾಗಿರುವ 'ಶಕ್ತಿ ಯೋಜನೆ' ಈ ಬಾರಿ ನಾಡಹಬ್ಬ ದಸರಾ ಮಹೋತ್ಸವದಲ್ಲಿ ಮಹಿಳಾ ಶಕ್ತಿ ಪ್ರದರ್ಶನಕ್ಕೆ ನಾಂದಿ ಹಾಡುವ ನಿರೀಕ್ಷೆಯಿದ್ದು, ಇದಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಎಸ್‌ಆರ್‌ಟಿಸಿ) ನವರಾತ್ರಿ ಸಂದರ್ಭದಲ್ಲಿ 300 ಹೆಚ್ಚುವರಿ ಬಸ್‌ಗಳನ್ನು ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಿದೆ.

ಈ ಬಾರಿ ನಾಡಹಬ್ಬ ದಸರಾ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ರಾಜ್ಯ ಸರ್ಕಾರ ನಿರ್ಧರಿಸಿದ್ದು, ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ದಸರಾ ಉನ್ನತ ಮಟ್ಟದ ಸಭೆಯಲ್ಲಿ ಅದ್ದೂರಿ ದಸರಾ ಆಚರಣೆ ಘೋಷಣೆ ಮಾಡಲಾಗಿತ್ತು. ಮೈಸೂರಲ್ಲಿ ದಸರಾ ಆಚರಣೆ ಸಂಬಂಧ ವಿವಿಧ ಇಲಾಖೆಗಳ ವತಿಯಿಂದ ಸಭೆ ನಡೆಸಿ, ಸಿದ್ಧತೆ ಮಾಡಿಕೊಳ್ಳುತ್ತಿರುವ ಬೆನ್ನಲ್ಲೇ ಸಾರಿಗೆ ಸಂಸ್ಥೆಯೂ ದಸರಾ ಮಹೋತ್ಸವಕ್ಕೆ ಸಿದ್ದತೆ ಆರಂಭಿಸಿದೆ. 300 ಹೆಚ್ಚುವರಿ ಬಸ್ ನೀಡುವಂತೆ ಮನವಿ ಮಾಡಿದೆ.

**ಶಕ್ತಿ ಯೋಜನೆಯ ಎಫೆಕ್ಟ್:** ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಜಾರಿಗೆ ತಂದ ಮಹಿಳೆಯರಿಗೆ ಉಚಿತ ಪ್ರಯಾಣಾವಕಾಶ ಕಲ್ಪಿಸುವ 'ಶಕ್ತಿ ಯೋಜನೆ' ಯಶಸ್ವಿಯಾಗಿದೆ. ಸಾರಿಗೆ ಬಸ್‌ಗಳು ಮಹಿಳಾ ಪ್ರಯಾಣಿಕರಿಂದ ತುಂಬಿ ತುಳುಕುತ್ತಿದೆ. ಅದರಲ್ಲೂ ಧಾರ್ಮಿಕ ಕ್ಷೇತ್ರ, ಯಾತ್ರಾಸ್ಥಳ ಹಾಗೂ ಪ್ರವಾಸಿ ತಾಣಗಳಿಗೆ ತೆರಳುವ ಸಾರಿಗೆ ಬಸ್‌ಗಳಲ್ಲಿ ಮಹಿಳಾ ಪ್ರಯಾಣಿಕರು ಸಂಖ್ಯೆ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ದಸರಾ ಮಹೋತ್ಸವದಲ್ಲೂ ಮಹಿಳೆಯರ ಶಕ್ತಿ ಪ್ರದರ್ಶನವಾಗುವುದು ಖಚಿತವಾಗುತ್ತಿದ್ದು, ಅದಕ್ಕಾಗಿ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಬಸ್ ಸಂಚಾರದ ವ್ಯವಸ್ಥೆ ಮಾಡಲು ಸಾರಿಗೆ ಸಂಸ್ಥೆ ಮುಂದಾಗಿದೆ.

**300 ಹೆಚ್ಚುವರಿ ಬಸ್‌ಗಾಗಿ ಮನವಿ:** ಶಕ್ತಿ ಯೋಜನೆಯ ಫಲವಾಗಿ ಮೈಸೂರು ವಿಭಾಗದ ಸಾರಿಗೆ ಬಸ್‌ಗಳಲ್ಲಿ ಪ್ರಯಾಣಿಕರ ಸಂಖ್ಯೆ ಶೇ.30ರಷ್ಟು ಹೆಚ್ಚಳವಾಗಿದೆ. ದಸರಾ ಸಂದರ್ಭದ 10 ರಿಂದ 20 ದಿನಗಳವರೆಗೆ ಮೈಸೂರಲ್ಲಿ ಸಂಚರಿಸುವ ಮಹಿಳಾ ಪ್ರಯಾಣಿಕರ ಸಂಖ್ಯೆ ದ್ವಿಗುಣವಾಗುವ ನಿರೀಕ್ಷೆಯಿದೆ. ಹೊರ ರಾಜ್ಯಗಳಿಂದಲೂ ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆಯೂ ಹೆಚ್ಚಾಗುವುದರಿಂದ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಪ್ರಯಾಣಿಕರು ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಸುವ ಮುನ್ಸೂಚನೆ ದೊರೆತಿರುವುದರಿಂದ ಹೆಚ್ಚುವರಿ ಬಸ್‌ಗಳ ಮೊರೆ ಹೋಗಲಾಗಿದೆ.

**ನವರಾತ್ರಿ ದರ್ಶನ:** ಅ.15ರಿಂದ 24ರವರೆಗೆ ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರು ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸಲಿದೆ. ಚಾಮುಂಡಿಬೆಟ್ಟದಲ್ಲಿ ನಾಡದೇವಿ ಚಾಮುಂಡೇಶ್ವರಿ ದೇವಿಗೆ ನವರಾತ್ರಿ ವೇಳೆ ವಿವಿಧ ಅಲಂಕಾರ ಮಾಡಿ ಪೂಜಿಸಲಾಗುತ್ತದೆ. 9 ದಿನವೂ ದೇವಿಯ ದರ್ಶನ ಪಡೆದರೆ ಒಳ್ಳೆಯ ದಾಗುತ್ತದೆ ಎಂಬ ನಂಬಿಕೆ ಇರುವುದರಿಂದ ಮಹಿಳಾ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ನಿರೀಕ್ಷೆ ಇದೆ. ಹೀಗಾಗಿ ಹೆಚ್ಚುವರಿ ಬಸ್‌ಗಳ ಅವಶ್ಯತೆ ಇದೆ ಎನ್ನುವುದನ್ನು ಸಾರಿಗೆ ಸಂಸ್ಥೆ ಮನವರಿಕೆ ಮಾಡಿ ಕೊಂಡು ಸಿದ್ಧತೆಯಲ್ಲಿ ಮಗ್ನವಾಗಿದೆ.

**ದಸರಾ ಮಹೋತ್ಸವಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ:** ಈ ಸಂಬಂಧ ಸಾರಿಗೆ ಸಂಸ್ಥೆಯ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಜಿ.ಶ್ರೀನಿವಾಸ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಈ ಬಾರಿ ನಾಡಹಬ್ಬ ದಸರಾ ಮಹೋತ್ಸವವನ್ನು ಅದ್ಧೂರಿಯಾಗಿ ಆಚರಿಸಲು ಸರ್ಕಾರ ಘೋಷಿಸಿರುವುದರಿಂದ ಮೈಸೂರಿಗೆ ಆಗಮಿಸುವ ಜನರು, ಪ್ರವಾಸಿಗರ ಸಂಖ್ಯೆ ಹೆಚ್ಚಾಗಲಿದೆ. ಶಕ್ತಿ ಯೋಜನೆಯಿಂದಾಗಿ ಮಹಿಳಾ ಪ್ರಯಾಣಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ನಿರೀಕ್ಷೆ ಇದೆ. ಹೀಗಾಗಿ 300 ಬಸ್ ನೀಡುವಂತೆ ಮನವಿ ಸಲ್ಲಿಸಲಾಗಿದೆ. ಕಳೆದ ಬಾರಿ 240 ಹೆಚ್ಚುವರಿ ಬಸ್ ವ್ಯವಸ್ಥೆ ಮಾಡಲಾಗಿತ್ತು. ನಾವು ಕೇಳಿರುವ 300 ಬಸ್‌ನೊಂದಿಗೆ ಬೆಂಗಳೂರು ಹಾಗೂ ಇನ್ನಿತರ ವಿಭಾಗಗಳಿಂದಲೂ ಮೈಸೂರಿಗೆ ಹೆಚ್ಚುವರಿ ಬಸ್ ಸಂಚಾರದ ವ್ಯವಸ್ಥೆ ಮಾಡುವುದರಿಂದ ಪ್ರಯಾಣಿಕರಿಗೆ ಅಗತ್ಯ ಬಸ್ ಸೌಲಭ್ಯ ದೊರೆಯಲಿದೆ ಎಂದರು. ಕಳೆದ ಬಾರಿ ಮೈಸೂರು, ಮಂಡ್ಯ, ಚಾಮರಾಜನಗರದ ವಿಭಾಗದಿಂದ ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಮಾಡಲಾಗಿತ್ತು. ಈ ಬಾರಿ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಬೆಂಗಳೂರು, ಚಿಕ್ಕಮಗಳೂರು, ಕೊಡಗು ಜಿಲ್ಲೆಯ ಬಸ್‌ಗಳನ್ನು ದಸರಾ ಸಂದರ್ಭದಲ್ಲಿ ಬಳಸಿಕೊಳ್ಳಲು ಉದ್ದೇಶಿಸಲಾಗಿದೆ. ಈ ಸಂಬಂಧ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.

## ತಮಿಳುನಾಡಿಗೆ ಕಾವೇರಿ ನೀರು: ಪ್ರತಿಭಟನೆ



ಮೈಸೂರು,ಆ.18(ಎಂಟಿವೈ)– ಜಲಾಶಯಗಳಿಂದ ತಮಿಳುನಾಡಿಗೆ ಕಾವೇರಿ ನೀರು ಬಿಟ್ಟಿರುವುದನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನ ಜಿ.ಪಂ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ಕರ್ನಾಟಕ ಸೇನಾ ಪಡೆಯ ಕಾರ್ಯಕರ್ತರು, ಈ ಬಾರಿ ಮುಂಗಾರು ಮಳೆ ಕೈಕೊಟ್ಟಿರುವುದರಿಂದ ರಾಜ್ಯದ ಜಲಾಶಯಗಳಲ್ಲಿ ನೀರಿನ ಸಂಗ್ರಹ ಕಡಿಮೆ ಇದೆ. ಕಳೆದ ಬೇಸಿಗೆಯಿಂದಲೂ ಕೆರೆಕಟ್ಟೆಗಳು ಬತ್ತಿ ಹೋಗಿವೆ. ಈ ವರ್ಷ ಸರಿಯಾಗಿ ಮಳೆಯಾಗದಿರುವುದರಿಂದ ಕೆಆರ್‌ಎಸ್, ಕಬಿನಿ, ಹಾರಂಗಿಯಲ್ಲಿ ನೀರಿಲ್ಲ. ಪರಿಸ್ಥಿತಿ ಹೀಗಿದ್ದರೂ ರಾಜ್ಯದ ರೈತರಿಗೆ, ಕೆರೆಕಟ್ಟೆಗಳಿಗೆ, ಬೆಳೆ ಬೆಳೆಯಲು ನೀರು ಬಿಡದೆ ರಾಜ್ಯ ಸರಕಾರ ತಮಿಳುನಾಡು, ಕಾವೇರಿ ನೀರು ನಿರ್ವಹಣಾ ಮಂಡಳಿಯಿಂದ ಹೆಚ್ಚಿನ ಒತ್ತಡ ಬರುವ ಮುನ್ನವೇ ತಮಿಳುನಾಡಿಗೆ ನೀರು ಹರಿಸುತ್ತಿರುವುದು ಅತ್ಯಂತ ಖಂಡನೀಯ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾವೇರಿ ನೀರು ನಿರ್ವಹಣಾ ಮಂಡಳಿ ಪ್ರತಿ ಬಾರಿಯೂ ನಮ್ಮ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದೆ. ನಮ್ಮ ಜಲಾಶಯಗಳಲ್ಲಿ ನೀರಿಲ್ಲದಿದ್ದರೂ ನೀರು ಬಿಡಿ ಎಂದು ಹೇಳುತ್ತಿರುವುದು ವಿಪರ್ಯಾಸ. ಈ ನೀರು ಮಂಡಳಿ ಇರುವುದೇ ತಮಿಳುನಾಡಿಗೋಸ್ಕರ ಎನಿಸುತ್ತಿದೆ. ತಮಿಳುನಾಡು ಸರ್ಕಾರ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳಲು ಪದೇಪದೆ ಕರ್ನಾಟಕದ ಮೇಲೆ ಕ್ಯಾತೆ ತೆಗೆಯುತ್ತಿದೆ. ರಾಜ್ಯ ಸರ್ಕಾರ ಇಲ್ಲಿನ ನದಿಗಳ, ನೀರಿನ ವಾಸ್ತವದ ಬಗ್ಗೆ ನ್ಯಾಯಾಲಯ ಹಾಗೂ ಕಾವೇರಿ ನೀರು ನಿರ್ವಹಣಾ ಮಂಡಳಿಗೆ ಮನವರಿಕೆ ಮಾಡಿಕೊಟ್ಟು ರಾಜ್ಯದ ಜನ–ಜಾನುವಾರುಗಳ ರಕ್ಷಣೆಗೆ ಮುಂದಾಗಬೇಕು. ನಮಗೇ ಕುಡಿಯಲು ನೀರಿಲ್ಲ, ರೈತರ ಬೆಳೆಗಳಿಗೆ ನೀರಿಲ್ಲ. ಇಷ್ಟೆಲ್ಲ ಗೊತ್ತಿದ್ದರೂ ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಬಿಡುತ್ತಿರುವುದು ಅತ್ಯಂತ ನೋವಿನ ಸಂಗತಿ ಎಂದು ಅಸಮಾಧಾನ ಹೊರಹಾಕಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚುನಾವಣೆಗೂ ಮುನ್ನ, ಮೇಕೆದಾಟು ವಿಚಾರದಲ್ಲಿ ಪಾದಯಾತ್ರೆ ಮಾಡಿ, ರಾಜ್ಯದ ನದಿಗಳ–ರೈತರ ಹಿತರಕ್ಷಣೆ ಕಾಪಾಡುತ್ತೇವೆ ಎಂದಿದ್ದರು. ಈ ಹಿಂದೆ ಬಂಗಾರಪ್ಪ ಮುಖ್ಯಮಂತ್ರಿ ಆಗಿದ್ದಾಗ ಇಂತಹ ಸಂದರ್ಭ ಬಂದಾಗ ಸುಗ್ರೀವಾಜ್ಞೆ ತಂದು ಯಾವುದೇ ಕಾರಣಕ್ಕೂ ತಮಿಳುನಾಡಿಗೆ ನೀರು ಬಿಡುವುದಿಲ್ಲವೆಂದಿದ್ದರು. ಅಂತಹ ದಿಟ್ಟತನವನ್ನು ಈಗಿನ ಸರ್ಕಾರ ಪ್ರದರ್ಶಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ವಿಜಯೇಂದ್ರ, ಪ್ರಭುಶಂಕರ್, ಕೃಷ್ಣಪ್ಪ, ಪ್ರಜೀಶ್, ನರಸಿಂಹೇಗೌಡ, ಶಾಂತರಾಜೇಅರಸ್, ಅಂಬಾ ಅರಸ್, ನೇಹಾ, ಜ್ಯೋತಿ, ನರಸಿಂಹ ಮೂರ್ತಿ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.



ಮೈಸೂರು ಬ್ಯೂಟಿಷಿಯನ್ಸ್ ವೆಲ್‌ಫೇರ್ ಅಸೋಸಿಯೇಷನ್ ವತಿಯಿಂದ 77ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ಮೈಸೂರು ನಗರ ಪಾಲಿಕೆ ಸದಸ್ಯೆ ಶೋಭಾ ಮೋಹನ್ ಧ್ವಜಾರೋಹಣ ಮಾಡಿದರು. ಇದೇ ವೇಳೆ ಮಲೇಷ್ಯಾದಲ್ಲಿ ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಿ ವಿಜೇತರಾದ ವಿಕಲಚೇತನ ಥ್ರೋಬಾಲ್ ಆಟಗಾರ್ತಿ ಗೀತಾ ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು. ಅಸೋಸಿಯೇಷನ್ ಅಧ್ಯಕ್ಷೆ ಕೆ. ವೇದಾವತಿ ಎನ್. ರೈ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಅದಮ್ಯ ರಂಗಶಾಲೆ ವತಿಯಿಂದ ಅಭಿನಯ ತರಬೇತಿ ಶಿಬಿರ

ಮೈಸೂರು, ಆ.18–ನಗರದ ರಂಗಭೂಮಿ ಕ್ಷೇತ್ರದಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡಿರುವ ಅದಮ್ಯ ರಂಗ ಶಾಲೆಯು 30 ದಿನಗಳ ಅವಧಿಯ ರಂಗ ತರಬೇತಿ ಶಿಬಿರ ಆಯೋಜಿಸಿದ್ದು, ಹವ್ಯಾಸಿ ರಂಗಾಸಕ್ತರಿಂದ ಅರ್ಜಿ ಆಹ್ವಾನಿಸಿದೆ ಎಂದು ರಂಗಶಾಲೆಯ ಗೌರವ ಕಾರ್ಯದರ್ಶಿ ಟಿ. ಸತೀಶ್ ಜವರೇಗೌಡ ತಿಳಿಸಿದ್ದಾರೆ.

ನಗರದ ಕೆ.ಜಿ. ಕೊಪ್ಪಲಿನ ಹೊಸ ನ್ಯಾಯಾಲಯದ ಎದುರಿರುವ ನೇಗಿಲಯೋಗಿ ಮರುಳೇಶ್ವರ ಸೇವಾಭವನದಲ್ಲಿ ಶಿಬಿರವು ಸೆ.1ರಿಂದ ಅ.1ರವರೆಗೆ 30 ದಿನಗಳ ಕಾಲ ಪ್ರತಿದಿನ ಸಂಜೆ 6–30ರಿಂದ ರಾತ್ರಿ 9 ಗಂಟೆಯವರೆಗೆ ಶಿಸ್ತುಬದ್ಧವಾಗಿ ನಡೆಯಲಿದೆ. 'ಅಭಿನಯ ಕಲೆಗೆ ಒತ್ತು ನೀಡಿ ಕಲಿಸುವ ಪರಮಧ್ಯೇಯ ಹೊಂದಿರುವ ರಂಗ ಶಿಬಿರದಲ್ಲಿ ಹಿರಿಯರೊಟ್ಟಿಗೆ ಕಿರಿಯರೂ ಕಲೆತು ರಂಗಭೂಮಿಗೆ ಸಂಬಂಧಿಸಿದ ಬಹುಮುಖಿ ಮಜಲುಗಳನ್ನು ಅರಿಯಲು ಅವಕಾಶವಿದೆ. ಕನ್ನಡ ಮತ್ತು ಜಾಗತಿಕ ರಂಗಭೂಮಿ, ವಿವಿಧ ನಾಟಕಗಳು, ಅಭಿನಯ ಕಲೆ, ತೆರೆಯ ಹಿಂದಿನ ರಂಗತಾಂತ್ರಿಕ ವಿಷಯಗಳ ಬಗ್ಗೆ ನುರಿತ ರಂಗತಜ್ಞರು ಶಿಬಿರಾರ್ಥಿಗಳಿಗೆ ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಡುವರು. 18ರಿಂದ 60 ವಯೋಮಿತಿಯೊಳಗಿನ ಮಹಿಳೆಯರು ಮತ್ತು ಪುರುಷರು ಈ ಅಭಿನಯ ತರಬೇತಿ ಶಿಬಿರದಲ್ಲಿ ಭಾಗವಹಿಸಬಹುದಾಗಿದೆ. ಶಿಬಿರದ ಅವಧಿಯಲ್ಲಿ ನಾಟಕವೊಂದನ್ನು ಆಯ್ಕೆ ಮಾಡಿಕೊಂಡು, ಶಿಬಿರಾರ್ಥಿಗಳಿಂದಲೇ ಅಭಿನಯ ಮಾಡಿಸಿ ಸಮಾರೋಪದಲ್ಲಿ ಪ್ರದರ್ಶನ ಮಾಡಲಾಗುವುದು. ಶಿಬಿರ ಪೂರ್ಣಗೊಳಿಸಿದ ಎಲ್ಲರಿಗೂ ಅಧಿಕೃತ ಪ್ರಮಾಣ ಪತ್ರವನ್ನೂ ನೀಡಲಾಗುವುದು. ಅಭಿನಯ ಕಲಿಕೆಯಲ್ಲಿ ಆಸಕ್ತಿ ಇರುವವರು ಆ.31ರೊಳಗೆ ರಂಗಶಾಲೆಯ ಕಾರ್ಯದರ್ಶಿಯಾದ ಚಂದ್ರು ಮಂಡ್ಯ ಅವರಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಗರಿಷ್ಠ 30 ಮಂದಿಗೆ ಮಾತ್ರ ಅವಕಾಶವಿರುತ್ತದೆ. ಮೊದಲು ಬಂದವರಿಗೆ ಆದ್ಯತೆ. ಕಡ್ಡಾಯವಾಗಿ ಸಮಯ ಬದ್ಧತೆ ಹಾಗೂ ಕಲಿಕೆಯಲ್ಲಿ ಆಸಕ್ತಿ ಇರುವವರಿಗೆ ಹೆಚ್ಚಿನ ಒತ್ತು ನೀಡಲಾಗುವುದು.

ವಿವರವಾದ ಮಾಹಿತಿಗಾಗಿ ದೂರವಾಣಿ ಸಂಖ್ಯೆ 8660103141, 7204034040 ಸಂಪರ್ಕಿಸಬಹುದು.

# ರಾಷ್ಟ್ರೀಯ ಮಟ್ಟದ ಬಾಕ್ಸರ್ ಫಾಲ್ಕಿಯಾ ಖಾನ್ 2023ರ ಸ್ವಚ್ಛ ಸರ್ವೇಕ್ಷಣ್ ಅಭಿಯಾನದ ರಾಯಭಾರಿ

ಮೈಸೂರು, ಆ. 18(ಆರ್‌ಕೆ)– ಮೈಸೂರು ನಗರದ, ರಾಷ್ಟ್ರೀಯ ಮಟ್ಟದ ಬಾಕ್ಸರ್ ಫಾಲ್ಕಿಯಾ ಖಾನ್ ಅವರನ್ನು 2023ರ ಸ್ವಚ್ಛ ಸರ್ವೇಕ್ಷಣ್ ಅಭಿಯಾನದ ಮೈಸೂರು ನಗರಪಾಲಿಕೆಯ ರಾಯಭಾರಿಯಾಗಿ ನೇಮಿಸಲಾಗಿದೆ.

ನಗರ ಪ್ರದೇಶದಲ್ಲಿನ ಸ್ವಚ್ಛತೆ ಮತ್ತು ಸ್ಯಾನಿಟೇಷನ್‌ಗೆ ಸಂಬಂಧಿಸಿದ ಅತೀ ದೊಡ್ಡ ಸಮೀಕ್ಷೆಯಾಗಿದ್ದು, ನಮ್ಮ ಸುತ್ತಮುತ್ತಲಿನ ಪ್ರದೇಶವನ್ನು ಶುಚಿಯಾಗಿರಿಸುವ ಬಗ್ಗೆ ಎಲ್ಲರೂ ಸಂಘಟಿತರಾಗಿ ಪ್ರಯತ್ನಿಸುವುದು ಹಾಗೂ ಜನರಲ್ಲಿ ಸ್ವಚ್ಛತೆ ಬಗ್ಗೆ ಜಾಗೃತಿ ಮೂಡಿಸುವುದು ಸ್ವಚ್ಛ ಸರ್ವೇಕ್ಷಣ್ ಮೂಲ ಉದ್ದೇಶವಾಗಿದೆ.

ಈ ಬಾರಿಯ ಸ್ವಚ್ಛ ಸರ್ವೇಕ್ಷಣ್ ಅಭಿಯಾನದ ರಾಯಭಾರಿಯಾಗಿ ನೇಮಕಗೊಂಡಿರುವ ಫಾಲ್ಕಿಯಾ ಖಾನ್ ಅವರಿಗೆ ಮೈಸೂರಿನ ರಾಜೀವ್‌ನಗರ 2ನೇ ಹಂತದಲ್ಲಿರುವ ಅವರ ನಿವಾಸದಲ್ಲಿ ಮೇಯರ್ ಶಿವಕುಮಾರ್ ನೇಮಕಾತಿ ಪತ್ರ ನೀಡಿ ಅಭಿನಂದಿಸಿದರು. ಈ ಸಂದರ್ಭ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಡಿ. ನಾಗರಾಜ್, ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷೆ ಸವಿತಾ ಸುರೇಶ್, ಮಾಜಿ ಮೇಯರ್ ಅಯೂಬ್ ಖಾನ್, ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಹಿರಿಯ ಆರೋಗ್ಯಾಧಿಕಾರಿ ಡಾ. ಡಿ.ಜಿ. ನಾಗರಾಜ್, ಫಾಲ್ಕಿಯಾ ಖಾನ್ ಪೋಷಕರು ಉಪಸ್ಥಿತರಿದ್ದರು.



2023ರ ಸ್ವಚ್ಛ ಸರ್ವೇಕ್ಷಣ್ ಅಭಿಯಾನದ ರಾಯಭಾರಿಯಾಗಿ ನೇಮಕಗೊಂಡಿರುವ ಫಾಲ್ಕಿಯಾ ಖಾನ್ ಅವರನ್ನು ಮೇಯರ್ ಶಿವಕುಮಾರ್ ಪುಷ್ಪಗುಚ್ಛ ನೀಡಿ ಅಭಿನಂದಿಸಿದರು. ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಡಿ. ನಾಗರಾಜ್, ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷೆ ಸವಿತಾ, ಮಾಜಿ ಮೇಯರ್ ಅಯೂಬ್ ಖಾನ್, ಹಿರಿಯ ಆರೋಗ್ಯಾಧಿಕಾರಿ ಡಾ. ಡಿ.ಜಿ. ನಾಗರಾಜ್ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮಾರ್ಬಲ್ ಮತ್ತು ಗ್ರಾನೈಟ್ ವ್ಯಾಪಾರಿ ಅಜಾಜುಲ್ಲಾ ಖಾನ್ ಮತ್ತು ಫರ್‌ಹೀನ್ ಖಾನ್ ದಂಪತಿ ಪುತ್ರಿ ಫಾಲ್ಕಿಯಾ ಖಾನ್ ಮೈಸೂರಿನ ಸಾತಗಳ್ಳಿಯ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವ್ಯಾಸಂಗ ಮಾಡುತ್ತಿದ್ದಾರೆ. ಎಸ್‌ಎಸ್‌ಎಲ್‌ಸಿಯಲ್ಲಿ ಅತ್ಯುನ್ನತ ಶ್ರೇಣಿಯೊಂದಿಗೆ ಉತ್ತೀರ್ಣಳಾಗಿರುವ ಈ ಬಾಲಕಿ ಪಿಯುಸಿಯಲ್ಲಿ ಪಿಸಿಎಂಬಿ ಓದುತ್ತಿದ್ದು, ಮುಂದೆ ಇಂಡಿಯನ್ ಫಾರಿನ್ ಸರ್ವಿಸ್ (ಐಎಫ್‌ಎಸ್) ಅಧಿಕಾರಿಯಾಗಲು ಬಯಸಿದ್ದಾರೆ ಎಂದು ಆಕೆಯ ತಾಯಿ ಫರ್‌ಹೀನ್ ಖಾನ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಈಕೆ ರಾಷ್ಟ್ರೀಯ ಮುಯ್ ಥಾಯ್ ಬಾಕ್ಸರ್ ನ್ಯಾಷನಲ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ, ಸೇರಿ ಹಲವು ಪದಕಗಳನ್ನು ಗಳಿಸಿದ್ದು, ದಾಖಲೆ ಪ್ರಮಾಣದಲ್ಲಿ ಸಾರ್ವಜನಿಕ ಭಾಷಣ ಮಾಡಿದ್ದಕ್ಕಾಗಿ 'ಇಂಡಿಯಾ ಬುಕ್ ಆಫ್ ರೆಕಾರ್ಡ್'ನಲ್ಲಿ ಈಕೆಯ ಹೆಸರು ಸೇರ್ಪಡೆಯಾಗಿದೆ.

'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಮೇಯರ್ ಶಿವಕುಮಾರ್, ಈ ಹಿಂದೆ ಬಿಜೆಪಿ ಸರ್ಕಾರದಲ್ಲೇ ಫಾಲ್ಕಿಯಾ ಖಾನ್‌ರನ್ನು ರಾಯಭಾರಿಯನ್ನಾಗಿ ಆಯ್ಕೆ ಮಾಡಲಾಗಿತ್ತು. ಆದರೆ ನೇಮಕಾತಿ ಪತ್ರ ನೀಡಿರಲಿಲ್ಲ. ಮೈಸೂರು ನಗರದಾದ್ಯಂತ ಎಲ್ಲಾ ವಾರ್ಡ್‌ಗಳಿಗೆ ಭೇಟಿ ನೀಡಿ ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವುದು, ಸ್ವಚ್ಛ ಸರ್ವೇಕ್ಷಣ್‌ಗೆ ಜನರಿಂದ ಹೆಚ್ಚು ಅಭಿಪ್ರಾಯಗಳು ಬರುವಂತೆ ಪ್ರೇರೇಪಿಸುವ ಮೂಲಕ ಈ ಬಾರಿ ಪ್ರಥಮ ಸ್ವಚ್ಛ ನಗರ ಪ್ರಶಸ್ತಿಗೆ ಪ್ರಯತ್ನಿಸುವುದು ಫಾಲ್ಕಿಯಾ ಸೇರಿದಂತೆ ಎಲ್ಲರ ಜವಾಬ್ದಾರಿಯಾಗಿದೆ ಎಂದರು.

## ಆ.21, ಪ್ರಧಾನಮಂತ್ರಿ ಪೋಷಣ್ ಶಕ್ತಿ ನಿರ್ಮಾಣ್ ಯೋಜನೆಗೆ ಜಿಲ್ಲಾ ಮಟ್ಟದಲ್ಲಿ ಚಾಲನೆ

ಮೈಸೂರು,ಆ.18– ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಪೋಷಣ್ ಶಕ್ತಿ ನಿರ್ಮಾಣ್ ಮಧ್ಯಾಹ್ನ ಉಪಾಹಾರ ಯೋಜನೆ ಕಾರ್ಯಕ್ರಮಕ್ಕೆ ಜಿಲ್ಲಾಮಟ್ಟದಲ್ಲಿ ಸಾಂಕೇತಿಕವಾಗಿ ಸಮಾಜ ಕಲ್ಯಾಣ ಇಲಾಖೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ ಮಹದೇವಪ್ಪ ನಗರದ ಜೆ.ಎಲ್.ಬಿ ರಸ್ತೆಯಲ್ಲಿರುವ ಮಹಾರಾಜ ಪದವಿ ಪೂರ್ವ ಕಾಲೇಜಿನಲ್ಲಿ ಆ.21 ರಂದು ಬೆಳಗ್ಗೆ 10 ಗಂಟೆಗೆ ಚಾಲನೆ ನೀಡುವರು. ಪ್ರಧಾನಮಂತ್ರಿ ಪೋಷಣ್ ಶಕ್ತಿ ನಿರ್ಮಾಣ್ ಮಧ್ಯಾಹ್ನ ಉಪಾಹಾರ ಯೋಜನೆಯಡಿ 2023–24 ನೇ ಸಾಲಿನಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1 ರಿಂದ 10 ನೇ ತರಗತಿ ವಿದ್ಯಾರ್ಥಿಗಳಿಗೆ ಬೇಯಿಸಿದ ಮೊಟ್ಟೆ, ಮೊಟ್ಟೆಯನ್ನು ಸೇವಿಸದ ವಿದ್ಯಾರ್ಥಿಗಳಿಗೆ ಬಾಳೆಹಣ್ಣು ಅಥವಾ ಶೇಂಗಾ ಚಿಕ್ಕಿಯನ್ನು ವಿತರಿಸುವ ಮೂಲಕ ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು ಎಂದು ಜಿಲ್ಲಾ ಪಂಚಾಯತ್‌ನ ಅಕ್ಷರ ದಾಸೋಹ ಕಾರ್ಯಕ್ರಮದ ಪಿ.ಎಂ ಪೋಷಣ್ ಶಿಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರು ಉತ್ತರ ವಲಯದ ವ್ಯಾಪ್ತಿಯಲ್ಲಿ ಬರುವ ಚಿನ್ಮಯ ಶಾಲೆಯಲ್ಲಿ ಆಯೋಜಿಸಿದ್ದ ವಲಯ ಮಟ್ಟದ ಪ್ರತಿಭಾ ಕಾರಂಜಿಯ ಛದ್ಮವೇಶ ಸ್ಪರ್ಧೆಯಲ್ಲಿ ತಿರುಪತಿ ತಿಮ್ಮಪ್ಪನ ವೇಷ ಧರಿಸಿ ಎಲ್ಲರ ಗಮನ ಸೆಳೆಯುವ ಮೂಲಕ ಅನಂತಗೀತಾ ವಿದ್ಯಾಲಯದ 3ನೇ ತರಗತಿ ವಿದ್ಯಾರ್ಥಿ ಶಿಶಿರ್ ಪಿ. ಕಶ್ಯಪ್ ಪ್ರಥಮ ಸ್ಥಾನ ಪಡೆದಿದ್ದಾರೆ. ವಿಜೇತ ವಿದ್ಯಾರ್ಥಿಯನ್ನು ಶಾಲೆಯ ಪ್ರಾಂಶುಪಾಲ ಶ್ರೀಕಾಂತ್ ಅಮರನಾಥ್, ಉಪ ಪ್ರಾಂಶುಪಾಲ ಹರದೂರು ಲೋಕೇಶ್, ಶಿಕ್ಷಕರು ಅಭಿನಂದಿಸಿದರು.

# ಗ್ರಾಪಂ ಆಯ್ತು, ತಾಪಂ, ಜಿಪಂ ಚುನಾವಣೆಗೆ ಸಿದ್ಧರಾಗಿ

## ಗ್ರಾಪಂ ನೂತನ ಅಧ್ಯಕ್ಷ, ಉಪಾಧ್ಯಕ್ಷರ ಸನ್ಮಾನ ಸಮಾರಂಭದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಕರೆ



ನಂಜನಗೂಡು, ಆ.18– ಕ್ಷೇತ್ರದ 26 ಗ್ರಾಮ ಪಂಚಾಯಿತ್ತಿಗಳ ಪೈಕಿ 16 ಗ್ರಾಪಂಗಳಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರ ಹಿಡಿದಿದ್ದು, ಪಕ್ಷ ಹೆಚ್ಚಿನ ಸಂಖ್ಯೆಯ ಗ್ರಾಪಂ ಸದಸ್ಯರುಗಳನ್ನು ಹೊಂದಿರುವುದೇ ಇದಕ್ಕೆ ಕಾರಣ ಎಂದ ಶಾಸಕ ದರ್ಶನ್ ಧ್ರುವನಾರಾಯಣ್ ಈಗ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ ಮುಗಿಯಿತು. ಎಲ್ಲರೂ ತಾಪಂ ಮತ್ತು ಜಿಪಂ ಚುನಾವಣೆಗೆ ಸಿದ್ಧರಾಗಿರಿ ಎಂದು ಕರೆ ನೀಡಿದರು.

ನಗರದ ನಂದಿ ಕನ್ವೆಷನ್ ಹಾಲ್‌ನಲ್ಲಿ ಶುಕ್ರವಾರ ತಾಲೂಕು ಕಾಂಗ್ರೆಸ್ ಪಕ್ಷದ ವತಿಯಿಂದ ಆಯೋಜಿಸಿದ್ದ ನೂತನ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರುಗಳ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕ್ಷೇತ್ರದ 26 ಗ್ರಾಪಂಗಳ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ 16 ಗ್ರಾಪಂಗಳಲ್ಲಿ ಅಧಿಕಾರಕ್ಕೆ ಬಂದಿರುವುದು ಸಂತೋಷ ತಂದಿದೆ. ದೊರೆತ ಅಧಿಕಾರವನ್ನು ಜನರ ಸೇವೆಗಾಗಿ ಬಳಸುವ ಮೂಲಕ ಗ್ರಾಮ ಪಂಚಾಯಿತಿಗಳನ್ನು ಅಭಿವೃದ್ಧಿಪಡಿಸಬೇಕು. ಗ್ರಾಪಂಗಳ ಅಭಿವೃದ್ಧಿಗಾಗಿ ಹೆಚ್ಚಿನ ಒತ್ತು ನೀಡಲಾಗುವುದು, ಗ್ರಾಪಂಗಳನ್ನು ಅಭಿವೃದ್ಧಿಪಡಿಸುವ ಮೂಲಕ ಕ್ಷೇತ್ರವನ್ನು ಮಾದರಿ ಕ್ಷೇತ್ರವಾಗಿ ಅಭಿವೃದ್ಧಿಪಡಿಸಲು ಗ್ರಾಪಂ ಸದಸ್ಯರ ಸಹಕಾರ ಅಗತ್ಯವಿದೆ ಎಂದರು.

**ಮುಂದಿನ ಜಿಪಂ ತಾಪಂ ಚುನಾವಣೆಗೆ ಸಿದ್ಧರಾಗಿ:** ಅಕ್ಟೋಬರ್ ತಿಂಗಳಲ್ಲಿ ತಾಪಂ, ಜಿಪಂ ಚುನಾವಣೆ ನಡೆಯುವ ಸಂಭವವಿದೆ. ನಂತರ ಲೋಕಸಭೆ ಚುನಾವಣೆ ಬರಲಿದೆ ಆದ್ದರಿಂದ ಕಾರ್ಯಕರ್ತರು, ಎಲ್ಲಾ ಚುನಾಯಿತ ಪ್ರತಿನಿಧಿಗಳು ಚುನಾವಣೆಗೆ ಈಗಿನಿಂದಲೇ ಸಿದ್ಧತೆ ನಡೆಸಿ ಸಜ್ಜಾಗುವ ಮೂಲಕ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷವನ್ನು ಇನ್ನಷ್ಟು ಬಲಗೊಳಿಸೋಣ ಎಂದರು.

**ಧ್ರುವನಾರಾಯಣ ಹೆಸರಿನಲ್ಲಿ ಟ್ರಸ್ಟ್ :** ನಮ್ಮ ತಂದೆ ಧ್ರುವನಾರಾಯಣ ಪಕ್ಷ ಭೇದ, ಜಾತಿ ಭೇದವಿಲ್ಲದೆ ಜನರ ಸೇವೆಯಲ್ಲಿ ತೊಡಗಿದ್ದರು, ನಾನು ಸಹ ಅವರ ಹಾದಿಯಲ್ಲಿ ಸಾಗುವ ಸಲುವಾಗಿ, ಶೀಘ್ರದಲ್ಲೇ ಧ್ರುವನಾರಾಯಣ ಅವರ ಹೆಸರಿನಲ್ಲಿ ಟ್ರಸ್ಟ್ ರಚಿಸಿ ಜನರ ಸೇವೆಯಲ್ಲಿ ತೊಡಗಿಸಿಕೊಳ್ಳುವ ಆಶಯವಿದೆ, ರಾಜಕೀಯೇತರವಾಗಿ ಟ್ರಸ್ಟ್ ರಚನೆ ಮಾಡುವ ಪ್ರಯತ್ನದಲ್ಲಿದ್ದೇನೆ, ಶೀಘ್ರವಾಗಿ ಟ್ರಸ್ಟ್ ಸ್ಥಾಪನೆಯಾಗಲಿದೆ ಎಂದು ಹೇಳಿದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯ್ ಕುಮಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸದನ ಸಮಿತಿ ಅಧ್ಯಕ್ಷರಾಗಿ ನೇಮಕವಾದ ಶಾಸಕ ದರ್ಶನ್ ಧ್ರುವನಾರಾಯಣ ಅವರನ್ನು ತಾಲೂಕು ಕಾಂಗ್ರೆಸ್ ವತಿಯಿಂದ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖಂಡರಾದ ಕಳಲೆ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ಜಿಪಂ ಮಾಜಿ ಸದಸ್ಯರಾದ ಕೆ.ಮಾರುತಿ, ಲತಾ ಸಿದ್ದಶೆಟ್ಟಿ, ವಿಶ್ವಕರ್ಮ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್, ಮುಖಂಡರಾದ ನಾಗೇಶ್ ರಾಜ್, ಮಂಜುನಾಥ್, ವಿಜಯ್ ಕುಮಾರ್, ಅಬ್ದುಲ್ ಖಾದರ್, ದೊರೆಸ್ವಾಮಿ ನಾಯಕ, ಕಳಲೆ ರಾಜೇಶ್, ನಗರಸಭೆ ಸದ್ಯರಾದ ಗಂಗಾಧರ್, ಮಹೇಶ್, ಹಳೆಪುರ ಗ್ರಾಪಂ ಅಧ್ಯಕ್ಷ ಗಿರೀಶ್, ಹಾಡ್ಯ ಗ್ರಾಪಂ ಅಧ್ಯಕ್ಷ ಹರೀಶ್ ಕುಮಾರ್, ಸೇರಿದಂತೆ, ವಿವಿಧ ಗ್ರಾಪಂ ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಕಾರ್ಯಕರ್ತರು ಇದ್ದರು.

## ಶ್ರೀ ಪ್ರಜ್ಞಾ ಗುರುಕುಲ, ಚಿರಾಗ್ ಪದವಿ ಪೂರ್ವ ಕಾಲೇಜಿನಲ್ಲಿ ಸ್ವಾತಂತ್ರ್ಯ ದಿನಾಚರಣೆ



ಬನ್ನೂರು, ಆ.18– ಟಿ.ನರಸೀಪುರ ತಾಲೂಕಿನ ಕಂಚನಹಳ್ಳಿ ಗ್ರಾಮದ ಶ್ರೀ ಪ್ರಜ್ಞಾ ಗುರುಕುಲ ಮತ್ತು ಚಿರಾಗ್ ಪದವಿ ಪೂರ್ವ ಕಾಲೇಜಿನಲ್ಲಿ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ಈ ವೇಳೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಡಾ. ರಾಮಚಂದ್ರ ಮಾತನಾಡಿ, ವಿದ್ಯಾರ್ಥಿಗಳ ಮುಂದಿನ ಭವಿಷ್ಯವನ್ನು ಪ್ರಸ್ತುತ ತರಗತಿಗಳಲ್ಲಿಯೇ ನಿರ್ಧರಿಸಬೇಕು. ಅದಕ್ಕೆ ಪೂರಕವಾಗಿ ಇಂದಿನಿಂದಲೇ ಸಿದ್ಧರಾಗಬೇಕು ಎಂಬ ಹಿತನುಡಿಗಳನ್ನು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಸ್ಥೆಯ ಅಧ್ಯಕ್ಷರಾದ ಡಾ.ಕೆ.ಬಿ.ಸಿದ್ದೇಗೌಡ ಮಾತನಾಡಿ, ನಗರದ ಕಾಲೇಜಿನ ಸೌಕರ್ಯಗಳಿಗೆ ಸಮಾನವಾದಂತಹ ಸೌಕರ್ಯಗಳನ್ನು ಗ್ರಾಮೀಣ ಭಾಗದಲ್ಲಿ ಸ್ಥಾಪಿಸಿರುವ ನಮ್ಮ ಶಾಲೆ ಮತ್ತು ಕಾಲೇಜಿನಲ್ಲಿ ಕಲ್ಪಿಸಿದ್ದು ಈ ಭಾಗದ ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಂಡು ಮುಂದಿನ ಭವಿಷ್ಯಕ್ಕೆ ಭದ್ರ ಅಡಿಪಾಯವನ್ನು ಹಾಕಿಕೊಳ್ಳುವಂತೆ ತಿಳಿಸಿದರು ಹಾಗೂ ಸಂಸ್ಥೆಯ ಬೆಳವಣಿಗೆಗೆ ಪೋಷಕರು ಮಾರ್ಗದರ್ಶನ ನೀಡುವಂತೆ ಕೋರಲಾಯಿತು. ಸಂಸ್ಥೆಯ ಪ್ರಾಂಶುಪಾಲ ಡಾ. ಮುತ್ತುರಾಜು, ಶಾಲೆಯ ಮುಖ್ಯಶಿಕ್ಷಕಿ ರೋಸಮ್ಮ, ಬೋಧಕ ವೃಂದ, ಬೋಧಕೇತರ ಸಿಬ್ಬಂದಿ ವರ್ಗ, ಶಾಲೆಯ ಹಿತಚಿಂತಕರು, ಪೋಷಕರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

## ಅರಸು ಪರಿಕಲ್ಪನೆಯಂತೆ ಆಡಳಿತ

### ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಆಶಯ



ಹುಣಸೂರು.ಆ.18– ದೇಶದ ಸ್ವಾತಂತ್ರ್ಯಕ್ಕಾಗಿ ಬಲಿದಾನಗೈದಿರುವ ದೇಶಪ್ರೇಮಿ ಸ್ವಾತಂತ್ರ್ಯ ಸೇನಾನಿಗಳನ್ನು ಪ್ರತಿಯೊಬ್ಬರು ಸ್ಮರಿಸಬೇಕು ಎಂದು ಶಾಸಕ ಜಿ.ಡಿ. ಹರೀಶ್‌ಗೌಡ ಕರೆ ನೀಡಿದ್ದಾರೆ.

ನಗರಸಭಾ ಮೈದಾನದಲ್ಲಿ ತಾಲೂಕು ಆಡಳಿತದ ವತಿಯಿಂದ ಆಯೋಜಿಸಿದ್ದ 77ನೇ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ನಂತರ ದೇಶವು ವಿಜ್ಞಾನ, ಕೃಷಿ, ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡಿದ್ದು, ಆರ್ಥಿಕ ಪ್ರಗತಿ ಕಂಡಿದ್ದೇವೆ. ಡಾ.ಬಿ.ಆರ್. ಅಂಬೇಡ್ಕರ್ ಆಶಯದ ಸಂವಿಧಾನದಂತೆ ಕಾರ್ಯನಿರ್ವಹಿಸುತ್ತಿದ್ದೇವೆ ಎಂದರು.

ದೇಶಕ್ಕೆ ದೊಡ್ಡ ಕೊಡುಗೆ ನೀಡಿ ರಾಷ್ಟದ ಗಮನ ಸೆಳೆದಿದ್ದ ದೇವರಾಜ ಅರಸರು ಪ್ರತಿನಿಧಿಸಿದ್ದ ಕ್ಷೇತ್ರದಿಂದ ನಾನು ಆಯ್ಕೆಯಾಗಿರುವುದು ಹೆಮ್ಮೆ, ಅವರ ಪರಿಕಲ್ಪನೆಯ ಆಡಳಿತದಂತೆ ಸರ್ವರಿಗೂ ಸಮಪಾಲು–ಸಮಬಾಳು ಎಂಬಂತೆ, ಕ್ಷೇತ್ರದಲ್ಲಿ ಶಾಂತಿ–ಸಹಬಾಳ್ವೆ ಶಿಕ್ಷಣ, ಆರೋಗ್ಯ, ರೈತರ ಕಲ್ಯಾಣಕ್ಕೆ ಆದ್ಯತೆ ನೀಡುವೆ ಸೂರಿಲ್ಲದವರಿಗೆ ಸೂರು ಕಲ್ಪಿಸುವೆ, ಕೃಷಿಕರಿಗೆ ಸಾಗುವಳಿ ನೀಡುವೆ, ಪರಿಸರ ಸಂರಕ್ಷಣೆ, ಉದ್ಯೋಗ, ಸ್ವಯಂ ಉದ್ಯೋಗಕ್ಕೆ ಒತ್ತು ನೀಡುವೆ ಎಂದು ಅವರು ನುಡಿದರು.

ಧ್ವಜಾರೋಹಣ ನೆರವೇರಿಸಿದ ಉಪ ವಿಭಾಗಾಧಿಕಾರಿ ರುಚಿ ಬಿಂದಾಲ್ ಮಾತನಾಡಿ ಸ್ವಾತಂತ್ರ್ಯ ಸೇನಾನಿಗಳ ತತ್ವ ಸಿದ್ಧಾಂತಗಳನ್ನು ನಾವು ಪಾಲಿಸಬೇಕಿದೆ. ಅವರ ಹೋರಾಟದ ಬದುಕನ್ನು ಇಂದಿನ ಮಕ್ಕಳು ಅರಿಯಬೇಕೆಂದು ಆಶಿಸಿದರು. ಸಮಾರಂಭದಲ್ಲಿ ಸರಕಾರದ ಸೂಚನೆಯಂತೆ ಐದು ಮಂದಿ ಹಿರಿಯ ನಾಗರೀಕರಾದ ಕೆಂಪಲಿಂಗೇಗೌಡ, ರಾಮೇಗೌಡ, ಜವರೇಗೌಡ,ಶಾಂತಮ್ಮ, ನಂಜಮ್ಮ ಅವರನ್ನು ಗೌರವಿಸಲಾಯಿತು.

ತಹಸೀಲ್ದಾರ್ ಡಾ.ಅಶೋಕ್, ಸಮಿತಿಯ ಜಯರಾಂ, ಹಿರಿಯ ದೈಹಿಕ ಶಿಕ್ಷಕ ವಾಸು ಮಾತನಾಡಿದರು. ಕಾರ್ಯಕ್ರಮದಲ್ಲಿ ಬಿಇಓ ರೇವಣ್ಣ, ತಾಪಂ ಆಡಳಿತಾಧಿಕಾರಿ ಸಿದ್ದಗಂಗಮ್ಮ, ಇಓ ಮನು, ಪೌರಾಯುಕ್ತೆ ಮಾನಸ, ಡಿವೈಎಸ್‌ಪಿ ಮಹೇಶ್, ನಗರಸಭಾ ಸದಸ್ಯರು, ವಿವಿಧ ಇಲಾಖೆ ಅಧಿಕಾರಿಗಳು ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ಕಮ್ಮಾರ ಸಮಾಜದ ಸಮುದಾಯ ಭವನಕ್ಕೆ ಜಾಗ ಕೊಡಿ

### ತಹಶೀಲ್ದಾರ್‌ಗೆ ಕಮ್ಮಾರ ಸಮಾಜದ ಮುಖಂಡರು ಮನವಿ



ತಿ.ನರಸೀಪುರ ಆ.18– ತಾಲೂಕಿನ ಕಮ್ಮಾರ ಸಮಾಜದ ಅಭಿವೃದ್ಧಿಗಾಗಿ ಸಮುದಾಯ ಭವನ ಅಗತ್ಯವಾಗಿದ್ದು, ಇದಕ್ಕೆ ಸ್ಥಳ ಮಂಜೂರು ಮಾಡಿಕೊಡುವಂತೆ ಒತ್ತಾಯಿಸಿ ವರುಣಾ ಹಾಗೂ ತಿ.ನರಸೀಪುರ ಕ್ಷೇತ್ರಗಳ ಸಮಾಜದ ಮುಖಂಡರು ತಹಶೀಲ್ದಾರ್ ಟಿ.ಜಿ. ಸುರೇಶಾಚಾರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ತಹಶೀಲ್ದಾರ್ ಅವರನ್ನು ಅಭಿನಂದಿಸಿ, ಮನವಿ ಸಲ್ಲಿಸಿದ ಬಳಿಕ ಮಾತನಾಡಿದ ಸಮುದಾಯದ ಮುಖಂಡ ಟಿ.ಆರ್.ರಾಜು, ನಮ್ಮ ಸಮುದಾಯ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿದೆ. ಯಾವುದೇ ರಾಜಕೀಯ ಸ್ಥಾನಮಾನವನ್ನು ಹೊಂದಿಲ್ಲ, ಈ ಸಮುದಾಯದಲ್ಲಿ ಅವಿದ್ಯಾವಂತರು ಹೆಚ್ಚಾಗಿದ್ದು, ಕುಲಕಸುಬನ್ನೆ ನಂಬಿ ಜೀವಿಸುತ್ತಿದ್ದಾರೆ. ಈಗ ಯಂತ್ರೋಪಕರಣಗಳು ಬಂದಿರುವುದರಿಂದ ನಮ್ಮ ಕುಲ ಕಸುಬು ಕೂಡ ನಶಿಸುತ್ತಿದೆ. ಇದರಿಂದ ಸಮುದಾಯದವರ ಬದುಕು ಕಷ್ಟಕರವಾಗುತ್ತಿದೆ ಎಂದರು.

ಇದೇ ವೇಳೆ 2013ರಲ್ಲಿ ನಾವು ಆಲಗೂಡು ದಾಖಲೆ ಸರ್ವೆ ನಂಬರ್ 76 ರಲ್ಲಿ 0.04 ಗುಂಟೆ ಜಮೀನನ್ನು (ಸರ್ಕಾರಿ ಜಾಗ) ಗುರುತಿಸಿ ಅದಕ್ಕೆ ಸಂಬಂಧಿಸಿದಂತೆ ಸರ್ವೆಯನ್ನು ಮಾಡಿಸಿ, ಮಂಜೂರಾತಿ ಹಂತ ತಲುಪಿತ್ತು, ಕಾರಣಾಂತರಗಳಿಂದ ಅದು ನೆನೆಗುದಿಗೆ ಬಿದ್ದಿದೆ. ತಹಶೀಲ್ದಾರ್ ಅವರು ಈ ಬಗ್ಗೆ ಮರು ಪರಿಶೀಲನೆ ಮಾಡಿ ಕಮ್ಮಾರ ಸಮಾಜಕ್ಕೆ ಈ ಜಾಗವನ್ನು ಮಂಜೂರು ಮಾಡಿಕೊಡುವಂತೆ ಮನವಿ ಮಾಡಿದ್ದೇವೆ. ಸಮುದಾಯ ಭವನ ನಿರ್ಮಾಣ ಮಾಡಿಕೊಂಡು ಆರ್ಥಿಕವಾಗಿ ಕಾರ್ಯ ಚಟುವಟಿಕೆ ನಡೆಸಲು ಅನುಕೂಲ ಕಲ್ಪಿಸಿ ಕೊಡಬೇಕೆಂದರು,

ಮುಖಂಡರಾದ ಹೆಳವರಹುಂಡಿ ಸಿದ್ದಯ್ಯ, ಮಹದೇವಸ್ವಾಮಿ, ಜಾಲಹಳ್ಳಿ ರವಿ, ನಿಲ್ಸೋಗೆ ಮಹದೇವ, ಕೇತಹಳ್ಳಿ ಕೆ ಬಿ ಸಿದ್ದರಾಜು, ವಾಟಾಳ್ ಶ್ರೀನಿವಾಸ್, ಆಟೋ ಮಹದೇವ, ರಾಜೇಶ್, ಟಿ.ಆರ್.ಕುಮಾರ್, ಜಯಶಂಕರ, ಮಹೇಶ್ ಉಪಸ್ಥಿರಿದ್ದರು.



ಮೈಸೂರು ತಾಲೂಕು ಸಿದ್ದರಾಮನಹುಂಡಿಯ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಧ್ವಜಾರೋಹಣ ನೆರವೇರಿಸಲಾಯಿತು. ಅಧ್ಯಕ್ಷ ಮಹದೇವು, ಎ.ಪಿ.ಎಂ.ಸಿ ಮಾಜಿ ಸದಸ್ಯ ಬಸವರಾಜು, ಬಲರಾಮು, ಕುಮಾರ್, ಕಾಲೇಜಿನ ಪ್ರಾಂಶುಪಾಲರಾದ ಸೋಮಣ್ಣ, ಉಪಪ್ರಾಂಶುಪಾಲ ಮಾಯಂಗಾರ, ರಾಮಣ್ಣ, ಕೆಂಪಿರೇಗೌಡರು, ಕೆಂಪರಾಮು, ಡೈರಿ ರಮೇಶ ಮತ್ತು ಶಿಕ್ಷಕ ವರ್ಗದವರನ್ನು ಚಿತ್ರದಲ್ಲಿ ಕಾಣಬಹುದು.

## ಸಾಧಕರ ಶ್ರಮದಿಂದ ಭವ್ಯ ಭಾರತ ನಿರ್ಮಾಣ



ಸರಗೂರು, ಆ.18– ಭವ್ಯ ಭಾರತ ನಿರ್ಮಾಣ ಮಾಡುವಲ್ಲಿ ಮಹಾನ್ ಸಾಧಕರು ತುಂಬಾ ಶ್ರಮಿಸಿದ್ದಾರೆ ಎಂದು ಗ್ರಾಪಂ ಸದಸ್ಯ ಎಂ. ಮಹದೇವನಾಯಕ ತಿಳಿಸಿದರು.

ತಾಲೂಕಿನ ಆಗತ್ತೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ 77ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಇಂದಿನ ಯುವ ಪೀಳಿಗೆ ಮಹಾತ್ಮ ಗಾಂಧೀಜಿ, ಅಂಬೇಡ್ಕರ್ ಅವರುಗಳ ಆದರ್ಶಗಳನ್ನು ಪಾಲಿಸಬೇಕು. ಸ್ವಾತಂತ್ರ್ಯಕ್ಕಾಗಿ ಹೋರಾಡಿದವರನ್ನು ನಿತ್ಯ ಸ್ಮರಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಎಸ್.ಡಿ.ಎಂ.ಸಿ ಅಧ್ಯಕ್ಷ ಮಂಟೇಚಾರಿ, ವೀರಶೈವ ಸಮಾಜದ ಮುಖಂಡರಾದ ಕೆ.ಮಲ್ಲಿಕಾರ್ಜನ, ಗ್ರಾಮದ ಗಡಿಯಜಮಾನರಾದ ಎಂ.ಮಹದೇವ ನಾಯಕ, ವೈಕುಂಟನಾಯಕ, ಗ್ರಾಮ ಪಂಚಾಯಿತಿ ಸದಸ್ಯರಾದ ಸಂತೋಷ್, ಚಂದ್ರಮ್ಮ, ರಾಜ್ಯ ಪ್ರಶಸ್ತಿ ವಿಜೇತರಾದ ಪಿ.ಜವರನಾಯಕ, ಪಿ.ಎಲ್.ಡಿ.ಬ್ಯಾಂಕ್ ಮಾಜಿ ಅಧ್ಯಕ್ಷ ಎಂ.ದಾಸಪ್ಪ, ವಿಎಸ್‌ಎಸ್‌ಎನ್, ನಿರ್ದೇಶಕ ಜವರನಾಯಕ, ಶಾಲಾ ಮುಖ್ಯ ಶಿಕ್ಷಕ ಸಿದ್ದರಾಜು, ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ಜವರನಾಯಕ(ಪಿಣ್ಣೆ), ಸಣ್ಣದಂಡನಾಯಕ, ಕೆಂಪರಸನಾಯಕ, ಕಾಳಮ್ಮನ ದೇವಸ್ಥಾನದ ಕಮಿಟಿ ಅಧ್ಯಕ್ಷ ಗೋವಿಂದನಾಯಕ, ಎಸ್.ಡಿ.ಎಂ.ಸಿ.ಸದಸ್ಯ ಎಸ್.ರಾಜೇಶ್, ಮುಖಂಡರಾದ ಎನ್. ನಾಗರಾಜು, ವಿ.ತಿಮ್ಮಯ್ಯ, ಕೋಮಿನ ಯಜಮಾನರು ಜವರಶೆಟ್ಟಿ, ಪುಟ್ಟಸ್ವಾಮಿ, ಚಲುವಚಾರಿ, ಸಣ್ಣಯ್ಯ, ಶಾಲಾ ಶಿಕ್ಷಕ ವೃಂದ ಹಾಗೂ ಮಕ್ಕಳು ಗ್ರಾಮಸ್ಥರು ಉಪಸ್ಥಿತರಿದ್ದರು.

## ನೇರಳೆಯಲ್ಲಿ ದೊಡ್ಡ ಕೌಲಂದೆ ಹೋಬಳಿ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ



ನೇರಳೆ, ಆ.18– ನಂಜನಗೂಡು ತಾಲೂಕು ದೊಡ್ಡಕೌಲಂದೆ ಹೋಬಳಿ ಮಟ್ಟದ ಹಿರಿಯ ಪ್ರಾಥಮಿಕ ಶಾಲೆಗಳ ಕ್ರೀಡಾಕೂಟ ಶುಕ್ರವಾರದಿಂದ ನೇರಳೆ ಗ್ರಾಮ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಆರಂಭವಾಯಿತು.

ಹೋಬಳಿ ವ್ಯಾಪ್ತಿಯ ಸುಮಾರು 25ಕ್ಕೂ ಹೆಚ್ಚು ಶಾಲೆಯ ಮಕ್ಕಳು ಭಾಗವಹಿಸಿದ್ದ ಎರಡು ದಿನಗಳ ಕ್ರೀಡಾಕೂಟವನ್ನು ನೇರಳೆ ಗ್ರಾಪಂ ಅಧ್ಯಕ್ಷ ಗಿರೀಶ್ ಉದ್ಘಾಟಿಸಿ ಮಾತನಾಡುತ್ತಾ, ಕ್ರೀಡೆಯಿಂದ ಮಕ್ಕಳ ಮಾನಸಿಕ ಮತ್ತು ದೈಹಿಕ ಶಕ್ತಿ ವಿಕಸನಗೊಳ್ಳಲಿದ್ದು, ಓದಿನತ್ತ ಆಸಕ್ತಿ ಹೆಚ್ಚಾಗಲಿದೆ. ಪ್ರತಿಯೊಬ್ಬರಿಗೂ ಆರೋಗ್ಯ ಮುಖ್ಯ, ಮಕ್ಕಳ ಆರೋಗ್ಯದ ಬಗ್ಗೆ ಶಿಕ್ಷಕರು ಗಮನ ಹರಿಸಿ, ಆರೋಗ್ಯ ಮಾಹಿತಿಯನ್ನು ನೀಡಬೇಕು ಎಂದರು. ಒಲಂಪಿಕ್ ಕ್ರೀಡಾ ಧ್ವಜವನ್ನು ಎಸ್‌ಡಿಎಂಸಿ ಅಧ್ಯಕ್ಷೆ ಶ್ರೀಮತಿ ದೇವಿ ಅವರು ನೆರವೇರಿಸಿದರು. ಕ್ರೀಡಾಜ್ಯೋತಿಯನ್ನು ಭಾರತೀಯ ಜೂಬಿಲಿಯಂಟ್ ಪೌಂಡೇಷನ್ ಮ್ಯಾನೇಜರ್ ದೀಪಕ್, ಸಹಾಯಕ ಮ್ಯಾನೇಜರ್ ಪ್ರದೀಪ್, ಆದರ್ಶ್ ಮತ್ತು ಪ್ರವೀಣ್ ಬೆಳಗಿಸಿದರು.

6 ಮತ್ತು 7ನೇ ತರಗತಿ ವಿದ್ಯಾರ್ಥಿಗಳು ಭಾಗವಹಿಸಿದ್ದ ಕ್ರೀಡಾಕೂಟದಲ್ಲಿ ರನ್ನಿಂಗ್ ರೇಸ್, ಕಬ್ಬಡಿ, ಕೋ ಕೋ, ವಾಲಿಬಾಲ್, ಥ್ರೋ ಬಾಲ್ ಸೇರಿದಂತೆ ವಿವಿಧ ಪಂದ್ಯಾವಳಿಗಳು ನಡೆದವು. ಶಾಲಾ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡು ರೋಚಕ ಪ್ರದರ್ಶನ ನೀಡಿ ಮೆಚ್ಚುಗೆಗೆ ಪಾತ್ರರಾದರು. ನೇರಳೆ ಗ್ರಾಮದ ಮುಖಂಡರು, ಯಜಮಾನರು, ಗ್ರಾಪಂ ಸದಸ್ಯರು, ಶಾಲಾ ಎಸ್‌ಡಿಎಂಸಿ ಸದಸ್ಯರುಗಳು, ನೇರಳೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕ ಎಂ.ಸ್ವಾಮಿ, ವಿರೇಂದ್ರ, ವಸಂತ, ರಾಜೇಂದ್ರ ಹಾಗೂ ಶಾಲೆಗಳ ದೈಹಿಕ ಶಿಕ್ಷಕರು ಪಾಲ್ಗೊಂಡು ಕ್ರೀಡಾಕೂಟವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಶನಿವಾರ ಕ್ರೀಡಾಕೂಟದ ಸಮಾರೋಪ ಸಮಾರಂಭ ನಡೆಯಲಿದೆ.

## ಹಾಲು ಉತ್ಪಾದಕರ ಹೆಣ್ಣುಮಕ್ಕಳಿಗೆ 18 ಕೋಟಿ ವೆಚ್ಚದಲ್ಲಿ ಹಾಸ್ಟೆಲ್ ಸೌಲಭ್ಯ

### ಶೀಘ್ರದಲ್ಲೇ ಉದ್ಘಾಟನೆಯಾಗಲಿದೆ ಎಂದ ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ



ಕಂಪಲಾಪುರ. ಆ.18 – ಹಾಲು ಉತ್ಪಾದಕರ ಹೆಣ್ಣು ಮಕ್ಕಳ ಉನ್ನತ ವ್ಯಾಸಂಗಕ್ಕೆ ಮೈಸೂರಿನಲ್ಲಿ 18 ಕೋಟಿ ರೂ. ವೆಚ್ಚದಲ್ಲಿ 250 ಸುಸಜ್ಜಿತ ಕೊಠಡಿಗಳುಳ್ಳ ಹಾಸ್ಟೆಲ್ ನಿರ್ಮಾಣವಾಗುತ್ತಿದ್ದು, ಇನ್ನೇನು ಕೆಲವೇ ದಿನಗಳಲ್ಲಿ ಲೋಕಾರ್ಪಣೆಗೊಳ್ಳಲಿದೆ ಎಂದು ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ತಿಳಿಸಿದರು.

ಇಲ್ಲಿನ ಹಾಲು ಉತ್ಪಾದಕರ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಉದ್ಘಾಟಿಸಿ, ನಾನು ಈ ಮೊದಲು ಒಕ್ಕೂಟದ ನಿರ್ದೇಶಕನಾದಾಗ ಪಿರಿಯಾಪಟ್ಟಣ ತಾಲೂಕಿನಲ್ಲಿ 40 ಸಾವಿರ ಲೀ ಹಾಲು ಪ್ರತಿ ದಿನ ಉತ್ಪಾದನೆಯಾಗುತಿತ್ತು, ಅಧ್ಯಕ್ಷನಾದ ನಂತರ ಪ್ರತಿ ನಿತ್ಯ 2 ಲಕ್ಷ ಲೀ ಹಾಲು ಉತ್ಪಾದನೆಯಾಗುತ್ತಿದೆ. ಲೀಟರ್ ಹಾಲಿಗೆ 25 ರೂ.ನಿಂದ 36 ರೂ.ಗೆ ಏರಿಸಲಾಗಿದೆ. ಅದರ ಕೀರ್ತಿ ಉತ್ಪಾದಕರಿಗೆ ಸಲ್ಲುತ್ತದೆ. ಬೇರೆ ಯಾವ ರಾಜ್ಯವೂ ನೀಡದ ದರವನ್ನು ನಮ್ಮ ಒಕ್ಕೂಟ ನೀಡುತ್ತಿದೆ, ಹಾಲು ಉತ್ಪಾದನೆಯಲ್ಲಿ ಗುಜರಾತ್ ಬಿಟ್ಟರೆ ನಮ್ಮ ರಾಜ್ಯ ಎರಡನೇ ಸ್ಥಾನದಲ್ಲಿದೆ ಇರುವ ಅಧಿಕಾರವಧಿಯಲ್ಲಿ ಉತ್ಪಾದಕರ ಶ್ರೇಯೋಭಿವೃದ್ದಿಗೆ ಶ್ರಮಿಸುವುದಾಗಿ ತಿಳಿಸಿದರು.

ಮೈಮುಲ್ ನಿರ್ದೇಶಕ ರಾಜೇಂದ್ರಪ್ಪ ಮಾತನಾಡಿ ಒಂದು ಸಂಘ ಉತ್ತಮವಾಗಿ ಕಾರ್ಯ ನಿರ್ವಹಿಸಬೇಕಾದರೆ ಆಡಳಿತ ಮಂಡಳಿ, ಜೊತೆಗೆ ಸದಸ್ಯರ ನಿಷ್ಠೆ ನಿಯಮ ಮುಖ್ಯ, ಇಲ್ಲವಾದರೆ ಸಂಘಗಳು ವ್ಯವಹರಿಸುವುದೇ ಕಷ್ಟ ಕರವಾಗುತ್ತದೆ. ಹಾಲು ಉತ್ಪಾದನೆಯಲ್ಲಿ ಉತ್ಪಾದಕರ ಸಮಯ ಪ್ರಜ್ಞೆ ತುಂಬಾ ಮುಖ್ಯ, ನಮ್ಮನ್ನ ನಾವು ಅರಿತು ಬಾಳಿದಾಗ ಸುಖದ ಹಾದಿ ಸುಗಮವಾಗುತ್ತದೆ. ಆದ್ದರಿಂದ ಗುಣಮಟ್ಟದ ಹಾಲು ಉತ್ಪಾದನೆ ಮಾಡಿ ಸಂಘದ ಜೊತೆ ನೀವೂ ಲಾಭಗಳಿಸಿ ಎಂದರು.

ಕಳೆದ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು.

ಸಂಘಕ್ಕೆ ಅತೀ ಹೆಚ್ಚು ಹಾಲು ಸರಬರಾಜು ಮಾಡಿದ ಪ್ರಕಾಶ್, ಲಕ್ಷ್ಮೀ ಮತ್ತು ಅತೀ ಹೆಚ್ಚು ಹಾಲು ಖರೀದಿ ಮಾಡಿದ ಎಸಿ.ರಾಜಶೇಖರಯ್ಯ ಕ್ಯಾಂಟೀನ್ ಮಂಜು ಅವರಿಗೆ ಬಹುಮಾನ ನೀಡಲಾಯಿತು. ಈಗಿರುವ ಕಟ್ಟಡದ ಮೇಲ್ಭಾಗದಲ್ಲಿ ಸಭಾಂಗಣ ನಿರ್ಮಾಣಕ್ಕೆ ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ 5 ಲಕ್ಷ ನೀಡುವುದಾಗಿ ತಿಳಿಸಿದರು. ಪ್ರಸಕ್ತ ಸಾಲಿನಲ್ಲಿ ಸಂಘವು ರೂ. 10.02 ಲಕ್ಷ ಈ ನಿವ್ವಳ ಲಾಭ ಗಳಿಸಿದೆ ಎಂದು ವಾರ್ಷಿಕ ವರದಿ ಮಂಡಿಸಿ ಸಿಇಓ ಕಿಶೋರ್ ಸಭೆಯಲ್ಲಿ ತಿಳಿಸಿದರು. ಇದೇ ಸಂದರ್ಭದಲ್ಲಿ ವಿಸ್ತರಣಾಧಿಕಾರಿ ಬಿ.ಎಸ್‌ನಿಶ್ಚಿತ್, ನಂದಿನಿ, ಡೇರಿ ಅಧ್ಯಕ್ಷ ನಜೀಬ್, ಉಪಾಧ್ಯಕ್ಷ ಶಿವಣ್ಣ, ನಿರ್ದೇಶಕರಾದ ಕೃಷ್ಣೇಗೌಡ, ಶಿವರಾಮೇಗೌಡ, ಕೆ.ಎನ್.ಜಯಣ್ಣ ಚೆಲುವೇಗೌಡ, ಸ್ವಾಮಿ, ಕೆ.ಕೃಷ್ಣ, ಕೆ.ಕೆ.ಸ್ವಾಮಿ, ಸಾಕಮ್ಮ, ಜಯಮ್ಮ ಸಿಬ್ಬಂದಿ ಮಂಜು, ರೇವಣ್ಣ ಮುಖಂಡರಾದ ನಾಗೇಗೌಡ, ಕೆ.ಕುಮಾರ್, ಪ್ರಕಾಶ್ ಗೌಡ, ನಾರಾಯಣಗೌಡ, ಕೆ.ಸಿ. ರಾಜೇಗೌಡ, ಸಿ.ಎಲ್, ರಾಜೇಗೌಡ, ಲೋಕೇಶ್, ವಜೀರ್ ಖಾನ್, ಗಿರೀಶ್ ಮತ್ತಿತರರಿದ್ದರು.

## ಡಿಆರ್‌ಸಿ ಸಿನಿಮಾಸ್

ದೂ : 4240422/4241800

- ಸ್ಕ್ರೀನ್ 1 ಕೌಸಲ್ಯ ಸುಪ್ರಜಾ ರಾಮ (ಕ): ಬೆ.10ಕ್ಕೆ, ರಾ.10.10ಕ್ಕೆ, ಜೈಲರ್ (ತ): ಮ.1ಕ್ಕೆ, ಬ್ಯಾಂಗ್ (ಕ): ಸಂ.4.30ಕ್ಕೆ ಓಎಂಜಿ 2 (ಹಿಂ): ರಾ.7.10ಕ್ಕೆ.
- ಸ್ಕ್ರೀನ್ 2 ಗೂಮರ್ (ಹಿಂ): ಬೆ.10.15ಕ್ಕೆ, ರಾ.7.25ಕ್ಕೆ, ಜೈಲರ್ (ಕ): ಮ.12.55ಕ್ಕೆ, ಗದರ್ 2 (ಹಿಂ): ಸಂ.4.05ಕ್ಕೆ, ಮಿಸ್ಟರ್ ಪ್ರಗ್ನೆಂಟ್ (ತೆ): ರಾ.10.10ಕ್ಕೆ.
- ಸ್ಕ್ರೀನ್ 3 ಕ್ಷೇತ್ರಪತಿ (ಕ): ಬೆ.10.40ಕ್ಕೆ, ಆಚಾರ್ & ಕೋ (ಕ): ಮ.1.45ಕ್ಕೆ, ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಸಂ.4ಕ್ಕೆ, ಬ್ಲೂ ಬೀಟಲ್ (ಇಂ): ರಾ.7.15ಕ್ಕೆ, ರಾ.9.55ಕ್ಕೆ.
- ಸ್ಕ್ರೀನ್ 4 ಜೈಲರ್ (ತ): ಬೆ.9.50ಕ್ಕೆ, ಮ.3.50ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.1ಕ್ಕೆ.

## ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

- ಸ್ಕ್ರೀನ್ 1 ಜೈಲರ್ (ಕ): ಬೆ.11.20ಕ್ಕೆ, ರಾ.9.50ಕ್ಕೆ, ಜೈಲರ್ (ತ): ಮ.2.50ಕ್ಕೆ, ಸಂ.6.20ಕ್ಕೆ.
- ಸ್ಕ್ರೀನ್ 2 ಗೂಮರ್ (ಹಿಂ): ಬೆ.9.55ಕ್ಕೆ, ಓಎಂಜಿ 2 (ಹಿಂ): ಮ.12.55ಕ್ಕೆ, ರಾ.7.15ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಸಂ.4.10ಕ್ಕೆ, ಬ್ಲೂ ಬೀಟಲ್ (ಇಂ): ರಾ.10.30ಕ್ಕೆ.
- ಸ್ಕ್ರೀನ್ 3 ಗದರ್ 2 (ಹಿಂ): ಬೆ.9.55ಕ್ಕೆ, ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಮ.1.25ಕ್ಕೆ, ಬ್ಲೂ ಬೀಟಲ್ (ಇಂ): ಸಂ.4.55ಕ್ಕೆ, ಆಚಾರ್ & ಕೋ (ಕ): ರಾ.7.45ಕ್ಕೆ, ಗೂಮರ್ (ಹಿಂ): ರಾ.10.10ಕ್ಕೆ.
- ಸ್ಕ್ರೀನ್ 4 ಜೈಲರ್ (ತ): ಬೆ.10.30ಕ್ಕೆ, ಗದರ್ 2(ಹಿಂ): ಮ.2ಕ್ಕೆ, ಸಂ.6.10ಕ್ಕೆ, ಓಎಂಜಿ 2 (ಹಿಂ): ರಾ.9.40ಕ್ಕೆ.

## ಮೈಸೂರು ವಿಷನ್ ಸಿನಿಮಾ

ದೂ : 0821–2973519

- ಸ್ಕ್ರೀನ್ 1 ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ.
- ಸ್ಕ್ರೀನ್ 2 ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ.
- ಸ್ಕ್ರೀನ್ 3 ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ.
- ಸ್ಕ್ರೀನ್ 4 ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ.

## ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

**ಜೈಲರ್ (ತ):** ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, **ಜೈಲರ್ (ಕ):** ಬೆ.8.25ಕ್ಕೆ, ಮ.3.10ಕ್ಕೆ, **ಓಎಂಜಿ 2 (ಹಿಂ):** ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, **ಗದರ್ 2 (ಹಿಂ):** ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ):** ರಾ.9.45ಕ್ಕೆ, **ಆಚಾರ್ & ಕೋ (ಕ):** ಮ.3.55ಕ್ಕೆ, **ಕೌಸಲ್ಯ ಸುಪ್ರಜಾ ರಾಮ (ಕ):** ಮ.3.25ಕ್ಕೆ, ರಾ.10.30ಕ್ಕೆ, **ನಮೋ ಭೂತಾತ್ಮ (ಕ):** ಬೆ.11.55ಕ್ಕೆ, **ರಾಖಿ ಔರ್ ರಾಣಿ (ಹಿಂ):** ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, **ಓಪನ್‌ಹೈಮರ್ (ಇಂ):** ಸಂ.6.35ಕ್ಕೆ, **ಭೋಳಾ ಶಂಕರ್ (ತೆ):** ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, **ಮೆಗ್ 2 (ಇಂ):** ಮ.12.50ಕ್ಕೆ.

**ಸೂಚನೆ :** ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಬೇಬಿ (ತೆ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಬೇಬಿ (ತೆ) | 4 ಪ್ರದರ್ಶನಗಳು |
| **ಉಮಾ ಚಿತ್ರಮಂದಿರ** | (ದೂ: 2520009) |
| ಡೇ ಅಂಡ್ ಸಮ್‌ಒನ್ (ತೆ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಗದರ್ –2 (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ನಮೋ ಭೂತಾತ್ಮ–2 (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) | 4 ಪ್ರದರ್ಶನಗಳು |
| **ರಾಜ್‌ಕಮಲ್** | |
| ಗದರ್ –2 (ಹಿಂ) | 4 ಪ್ರದರ್ಶನಗಳು |
| **ಸಂಗಂ** | |
| ಕ್ಷೇತ್ರಪತಿ (ಕ) | 4 ಪ್ರದರ್ಶನಗಳು |
| **ಲಿಡೋ** | |
| ಕೌಸಲ್ಯ ಸುಪ್ರಜಾ ರಾಮ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಬೋಳಾಶಂಕರ (ತೆ) | 4 ಪ್ರದರ್ಶನಗಳು |
| **ಪ್ರಭಾ** | |
| ನಮೋ ಭೂತಾತ್ಮ–2 (ಕ) | 4 ಪ್ರದರ್ಶನಗಳು |

### ಶತಾಯುಷಿ ನಿಂಗಮ್ಮ ನಿಧನ



ಹಿರೀಕ್ಯಾತನಹಳ್ಳಿ, ಆ.18– ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮದ ಶತಾಯುಷಿ ನಿಂಗಮ್ಮ(102) ಶುಕ್ರವಾರ ಮುಂಜಾನೆ ನಿಧನರಾದರು. ಮೃತರು ಹುಣಸೂರು ತಾಲೂಕು ಒಕ್ಕಲಿಗರ ಸಂಘದ ನಿರ್ದೇಶಕ ಸುರೇಶ್ ಸೇರಿದಂತೆ ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಅವರ ತೋಟದಲ್ಲಿ ಅಂತ್ಯಕ್ರಿಯೆ ನಡೆಯಿತು

ಜಿಲ್ಲಾ ರೈತ ಸಂಘದ ಅಧ್ಯಕ್ಷ ಹೊಸೂರ್ ಕುಮಾರ್, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಗಣೇಶ್ ಗೌಡ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಯೋಗಾನಂದ್ ಕುಮಾರ್, ಸತ್ಯ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ, ತಾಲೂಕು ಒಕ್ಕಲಿಗರ ಸಂಘದ ನಿರ್ದೇಶಕರು ಹಾಗೂ ಹಲವಾರು ಮುಖಂಡರು ಸಂತಾಪ ಸೂಚಿಸಿ ಅಂತಿಮ ದರ್ಶನ ಪಡೆದರು.

### ಬಿ.ಅರ್.ಪಾರ್ವತಮ್ಮ



ಹುಣಸೂರು, ಅ.18– ನಗರದ ಕಲ್ಕುಣಿಕೆ ಹೌಸಿಂಗ್ ಬೋರ್ಡ್ ಕಾಲೊನಿಯ ವಾಸಿ ಕೃಷ್ಣಶೆಟ್ಟಿ ಅವರ ಧರ್ಮಪತ್ನಿ ಬಿ.ಅರ್. ಪಾರ್ವತಮ್ಮ(52) ಅವರು ಇಂದು ಮದ್ಯಾಹ್ನ ಮೈಸೂರಿನ ಕೆ.ಅರ್.ಅಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತಿ, ಪುತ್ರ, ಪುತ್ರಿ, ಅಳಿಯ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ(ಶನಿವಾರ) ಮಧ್ಯಾಹ್ನ ಪಟ್ಟಣದ ತಾಲೂಕು ಕಛೇರಿ ಪಕ್ಕದಲ್ಲಿರುವ ರುದ್ರಭೂಮಿಯಲ್ಲಿ ನೇರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಡಾ. ತಿಮ್ಮೇಗೌಡ ನಿಧನ



ಕೆ.ಆರ್.ನಗರ, ಆ.18– ನಿವೃತ್ತ ಪಶುವೈದ್ಯ ನಿರೀಕ್ಷಕ ಮಿರ್ಲೆ ಡಾ.ತಿಮ್ಮೇಗೌಡ (91) ಗುರುವಾರ ರಾತ್ರಿ ತಮ್ಮ ಪುತ್ರ ಡಾಕ್ಟರ್ ಶಿವಪ್ರಸಾದ್ ಅವರ ಮನೆಯಲ್ಲಿ ನಿಧನರಾದರು. ಅವರ ಅಂತ್ಯಕ್ರಿಯೆ ಸ್ವಗ್ರಾಮ ಮಿರ್ಲೆಯಲ್ಲಿ ಇಂದು ನಡೆಯಿತು.

ಡಾ. ತಿಮ್ಮೇಗೌಡ ಸರ್ಕಾರಿ ನೌಕರಿಯಿಂದ ನಿವೃತ್ತಿ ಹೊಂದಿದ ಮೇಲೆ ಸಾಮಾಜಿಕ ಕಾರ್ಯಗಳನ್ನು ಮಾಡುವ ಮೂಲಕ ಜನಸೇವೆಯಲ್ಲಿ ನಿರತರಾಗಿದ್ದರು. ಇವರಿಗೆ ಇಬ್ಬರು ಗಂಡು ಮಕ್ಕಳಿದ್ದು ಒಬ್ಬ ವೈದ್ಯಾಧಿಕಾರಿಯಾಗಿದ್ದು ನಂಜನಗೂಡಿನ ತಾಲೂಕು ಆಸ್ಪತ್ರೆಯಲ್ಲಿ ಆರೋಗ್ಯ ಆಡಳಿತ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇನ್ನೊಬ್ಬರು ಉದ್ಯಮಿಯಾಗಿದ್ದಾರೆ. ಮಾಜಿ ಸಚಿವ ಸಾರಾ ಮಹೇಶ್ ನವನಗರ ಅರ್ಬನ್ ಬ್ಯಾಂಕಿನ ಅಧ್ಯಕ್ಷ ಕೆ.ಎನ್.ಬಸಂತ್ ತಾಲೂಕು ನೌಕರ ಸಂಘದ ಅಧ್ಯಕ್ಷ ಸಿ.ಜೆ. ಅರುಣ್ ಕುಮಾರ್ ಸೇರಿದಂತೆ ವಿವಿಧ ಗಣ್ಯರು ಅಂತಿಮ ದರ್ಶನ ಪಡೆದರು. ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ವಸ್ತುಪ್ರದರ್ಶನದ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಸಂತಾಪ ಸೂಚಿಸಿದ್ದಾರೆ.

MEGA LOAN & EXCHANGE MELA

UNBELIEVABLE OFFERS

On 19th & 20th Aug 2023

Venue : Ramavilas Rd, Kukkarahalli, Saraswathipuram, Mysuru



Finance upto 100%

EMI Tenure upto 72 Months

Flat Rate of interest 6.2%

EMI STARTS @ ₹5,500*

INSTANT LOAN APPROVAL SPOT DELIVERY

ICICI Bank | kotak Kotak Mahindra Bank | HDFC BANK | IDFC FIRST Bank | AXIS BANK | L&T Finance Holdings

*T & C Apply

**Honda BigWing Mysuru Central**

Palace Auto Agency Mysore Pvt. Ltd.,
CH 79, New Kantharaj Urs Road (North), Opp. Palace Honda
Saraswathipuram, Mysuru - 570009. Hotline: 93539 42779 | 80884 17428 | 76765 23911

Honda BigWing —EXCITES THE WORLD— HONDA

---

SHUBHA MANGALYAM 2023 FESTIVE EDITION



ONE INDIA
ONE EMOTION

WEDDINGS by

JOS ALUKKAS

A TRADITION OF FINE JEWELLERY

ಉಡುಗೊರೆಗಳು — ಎಲ್ಲಾ ಖರೀದಿಗಳಿಗೆ

ಮೆಗಾ ಆಫರ್ ಮೇಕಿಂಗ್ ಚಾರ್ಜಸ್ 4.99% ರಿಂದ ಪ್ರಾರಂಭ

ವಜ್ರಗಳ ಮೇಲೆ 25% ವರೆಗೆ ರಿಯಾಯಿತಿ

ಪ್ಲಾಟಿನಂ ಆಭರಣಗಳಿಗೆ 7% ರಿಯಾಯಿತಿ

ವಿಶೇಷ ರಿಯಾಯಿತಿ ಮೇಕಿಂಗ್ ಚಾರ್ಜಸ್ ಮೇಲೆ 30% ವರೆಗೆ

ಎಕ್ಸ್‌ಚೇಂಜ್ — ಹಳೆಯ ಚಿನ್ನವನ್ನು HUID ಚಿನ್ನದ ಆಭರಣಗಳಿಗೆ ಎಕ್ಸ್‌ಚೇಂಜ್ ಮಾಡಿಕೊಳ್ಳಿ ಹೆಚ್ಚಿನ ಲಾಭಗಳೊಂದಿಗೆ

5% EXTRA CASHBACK* SBI card

*Min. Trxn.: ₹25,000; Max. Cashback: Upto ₹2,500 per card account. Validity: 11 Aug - 28 Aug 2023. T&C Apply.

Push360

MYSURU: Opp. Woodlands Theatre, B. N. Road. Ph: 0821-2441012. ಜೋಸ್ ಆಲುಕ್ಕಾಸ್
Shop online at www.josalukkasonline.com

KARNATAKA | ANDHRA PRADESH | TELANGANA | PUDUCHERRY | TAMIL NADU | KERALA

---

ಮೈಸೂರು ಮಿತ್ರ

ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

---

Organised By life is calling | Associate Sponsor THOUGHTFOCUS | 10k Powered By ArisGlobal LifeSphere | WURTH ELEKTRONIK

CELEBRATION MYSURU 1/2 MARATHON & 10K

August 27th 2023

ಸೆಲೆಬ್ರೇಶನ್ ಮೈಸೂರು 1/2 ಮ್ಯಾರಥಾನ್ & 10K

Last 4 days to Register

CATEGORIES: 5K RUN/WALK | 10K RUN | HALF MARATHON | 30K RUN

CELEBRATION MYSURU 1/2 MARATHON & 10K

Date : AUG 27th 2023 (Sunday)
Venue : Balarama Gate, Mysuru Palace

To Register: www.eventzalley.com / Contact@eventzalley.com or Whatsapp / Text : +91 96066 22006

Scan Here Register Now!

---

SEMI COMMERCIAL SITE FOR SALE

- 50 X 80
- WEST FACING
- JAYALAKSHMIPURAM

CONTACT 9035379769

---

BUILDING CONSTRUCTION

Starts from Rs. 1696/- per sqft

Call: 99885 54496

---

8ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ 8 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ಇಂತಿ ದುಃಖತಪ್ತರು

ಪತಿ: ಆನಂದ. ಸಿ,
ತಂಗಿ: ಎನ್. ಪ್ರಭಾ
ಮಕ್ಕಳು: ಎ.ಬಿ.ರೋಶ್ನಿ, ಎ.ಬಿ. ಶಾಶ್ವತ್,
ಅಶೋಕನಗರದ ಚೋಗಯ್ಯನ ಕುಟುಂಬವರ್ಗ ಸಂತೇಮರಹಳ್ಳಿ ನಂಜಯ್ಯ ನವರ ಕುಟುಂಬವರ್ಗ

ಶ್ರೀಮತಿ ಭಾಗ್ಯ ಎನ್.
ಸಹ ಶಿಕ್ಷಕಿ, ಮಂಗಲ
18.06.1974–19.08.2015

---

21ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಹನುಮಂತಪ್ಪ ಶ್ರೀರಂಗಪಟ್ಟಣ

ನೀವು ನಮ್ಮನ್ನಗಲಿ ಇಂದಿಗೆ 21 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ದುಃಖತಪ್ತರು: ಕುಟುಂಬವರ್ಗದವರು ಹಾಗೂ ಬಂಧುಮಿತ್ರರು

---

ಬೇಕಾಗಿದ್ದಾರೆ

ಆರ್.ಜೆ. ಕಾರ್ಪೊರೇಷನ್
ರಿಂಗ್ ರೋಡ್, ಬೋಗಾದಿ, ಮೈಸೂರು

ಕೆಳಗಿನ ಅಭ್ಯರ್ಥಿಗಳು ಬೇಕಾಗಿದ್ದಾರೆ

1) ವಾಣಿಜ್ಯ ಮತ್ತು ವಸತಿ ಕಿಚನ್ ಘಟಕಗಳನ್ನು ಮಾರ್ಕೆಟಿಂಗ್ ಮತ್ತು ಮಾರಾಟ ಮಾಡಲು ಬೇಕಾಗಿದ್ದಾರೆ, ದ್ವಿಚಕ್ರ ಪರವಾನಗಿ ಇರುವವರಿಗೆ ಆದ್ಯತೆ".
2) ಆಫೀಸ್ ಅಸಿಸ್ಟೆಂಟ್ – ಕಂಪ್ಯೂಟರ್ ಜ್ಞಾನ ಉಳ್ಳವರು ಸಂಪರ್ಕಿಸಿ:

9820120182 | 8722001666

---

NORTH EAST CORNER

MUDA APPROVED SITE

Urgent sale at Huge Discount
Ready for Construction at Bogadi Gaddige Road

CONTACT 99800 83876 / 93531 89435

---

2ನೇ ವಾರ & ಕೊನೆಯ ವಾರ ಯಶಸ್ವಿ ಪ್ರದರ್ಶನ



ಪದ್ಮ

ದಿನ 4 ಪ್ರದರ್ಶನ
10.15 1.30
4.45 8.00

ಬೇಬಿ (ತೆಲುಗು)

ಬುಕ್ ಮೈ ಷೋನಲ್ಲಿ ಟಿಕೆಟ್ ಲಭ್ಯವಿದೆ.

---

WANTED

30x40 MUDA ALLOTED site wanted in Vijayanagar, 4th stage for immediate purchase.

Brokers Excuse

Contact: 82966 58879

---

ಬೇಕಾಗಿದ್ದಾರೆ

ಗಾರ್ಮೆಂಟ್ ಉದ್ಯಮ ಒಂದಕ್ಕೆ

1. ಐರನ್ ಮಾಡಲು ಒಬ್ಬ ಮಹಿಳೆ
2. ಆಫೀಸ್ ಬಾಯ್ ಒಬ್ಬರು

ವಿಜಯನಗರ ವಿದ್ಯಾವರ್ಧಕ ಕಾಲೇಜ್ ಸಮೀಪ ಸಮವಸ್ತ್ರ ಹೊಲೆಯುವ ಗಾರ್ಮೆಂಟ್ಸ್ ಕೆಲಸ ಸ್ವಲ್ಪ ಅನುಭವ ಇದ್ದರೆ ಸಾಕು
ಬೆಳಿಗ್ಗೆ 9.55 ರಿಂದ ಸಂಜೆ 6.00 ರವರೆಗೆ

ಸಂಪರ್ಕಿಸಿ: 81976 63470

---

REQUIRED ORDER BOY AND SALES MAN

Location: Mysore, Mandya, Ramanagar, Hassan, Chikamagaluru, Qualification - PUC /Diploma Or Degree, Salary - 15500+ESI+PF +Travel Expenses. Call:

9964992821 | 8971422339

---

REMEMBRANCE



SRI BADRI PRASADJI

02-09-1902 to 19-08-1984

Your blessings, guidance and love will be cherished forever & ever

— Founder, Indra Group of Concerns

---

STAR HYUNDAI Delivering Miles Of Happiness

NEWLY LAUNCHED HYUNDAI EXTER AVAILABLE FOR TEST DRIVE AT OUR SHOWROOM

EMI at Just ₹1604/-*

ಮೈಸೂರು ಕಾರ್ ಹಬ್ಬ



ಉಚಿತ ಟೆಸ್ಟ್ ಡ್ರೈವ್, ಉಚಿತ ಇವಾಲ್ಯುಯೇಷನ್
ಉಚಿತ ಮಾನ್ಸೂನ್ ಸರ್ವಿಸ್ ತಪಾಸಣೆ

₹.0 ಮುಂಗಡ ಪಾವತಿ*

19 ಮತ್ತು 20 ಆಗಸ್ಟ್ 2023
(ಶನಿವಾರ ಮತ್ತು ಭಾನುವಾರ)
ಬೆಳಿಗ್ಗೆ 10 ರಿಂದ ಸಂಜೆ 8 ರವರೆಗೆ

ರೂ.43,000/-* ದವರೆಗೆ ಉಳಿತಾಯ

- 15ಕ್ಕೂ ಹೆಚ್ಚು ಪ್ರಮಾಣೀಕೃತ ಪ್ರೀ ಓನ್ಡ್ ಕಾರುಗಳ ಪ್ರದರ್ಶನ
- ಉಚಿತ ತೈಲ ಮತ್ತು ಕೂಲೆಂಟ್ ಟಾಪ್ ಅಪ್
- ಅದೇ EMI ನಲ್ಲಿ ನಿಮ್ಮ ಈಗಿನ ಕಾರನ್ನು ದೊಡ್ಡ ಕಾರಿಗೆ ಅಪ್‌ಗ್ರೇಡ್ ಮಾಡಿ
- ಹೊಸ ಕಾರುಗಳಿಗೆ ಅತ್ಯಾಕರ್ಷಕ ರಿಯಾಯಿತಿ ಕೊಡುಗೆಗಳು*
- ಹೊಸ ಕಾರುಗಳ ಸ್ಪಾಟ್ ಬುಕಿಂಗ್‌ಗಳಿಗೆ ವಿಶೇಷ ಕ್ಯಾಶ್ ರಿಯಾಯಿತಿ*

ಸ್ಥಳ : ಟೆರೇಸಿಯನ್ ಕಾಲೇಜ್ ಸಿಗ್ನಲ್,
ರಿಲಯನ್ಸ್ ಪೆಟ್ರೋಲ್ ಬಂಕ್ ಹತ್ತಿರ, ಸಿದ್ಧಾರ್ಥನಗರ, ಮೈಸೂರು

ನಂ.36, ಹೈವೇ ಸರ್ಕಲ್ ಹತ್ತಿರ, ಬಂಬೂ ಬಜಾರ್ ಮುಖ್ಯ ರಸ್ತೆ, ಮೈಸೂರು.
ಸೇಲ್ಸ್: 95388 79294, ಸರ್ವೀಸ್: 95380 10000, ಪ್ರೀ ಓನ್ಡ್ ಕಾರ್ಸ್: 95388 79259

---

PREMIUM 3 BHK VILLAS FOR SALE

@ 4th Stage Vijayanagar Mysuru

Contact: 96069 07153

---

ನಂಬಲಾರದ ದರದಲ್ಲಿ ಮಾರಾಟಕ್ಕಿದೆ

18 ಎಕರೆ ವಿಸ್ತಾರ ಪ್ರದೇಶದಲ್ಲಿ RERA & DTCP ಅನುಮೋದನೆಗೊಂಡು 100% ಸಂಪೂರ್ಣವಾಗಿ ಕಾಮಗಾರಿ ಪೂರ್ಣಗೊಂಡು ಒಟ್ಟು 301 ಸೈಟ್‌ಗಳು ಹುಣಸೂರಿನಲ್ಲಿ ಲಭ್ಯವಿರುತ್ತದೆ. ಸೊಸೈಟಿಗಳಿಗೆ ಒಟ್ಟು ಖರೀದಿಗೂ ಹಾಗೂ ಉತ್ತಮ ಹೂಡಿಕೆಗೂ ಸೂಕ್ತ ಕೂಡಲೇ ಸಂಪರ್ಕಿಸಿ ಷರತ್ತಿನೊಂದಿಗೆ

7871100111

---

CHANGE OF NAME

I, Chethana W/o Sujith kumar G A, Residing at # 108, Lakshmidevi Poultry Farm, Dasanakoppal Gate, Bogadi Post, Mysuru-570026, Have changed my name from Chethana to Chethana,G. Vide affidavit sworn before Notary Kusuma R , Mysuru, Dated 16th August 2023.

Sd/- Chethana.G

---

ಮುಡಾ ಅನುಮೋದಿತ ಸೈಟುಗಳು ಮಾರಾಟಕ್ಕಿದೆ

ಶ್ರೀನಿಧಿ ಎನ್‌ಕ್ಲೇವ್ ಬೆಳವಾಡಿ, ಮೈಸೂರು

ಬ್ಯಾಂಕ್ ಲೋನ್ ಸೌಲಭ್ಯವಿದೆ.

ಸಂಪೂರ್ಣ ಅಭಿವೃದ್ಧಿ ಹೊಂದಿದೆ । ಮನೆಗಳು ಕಟ್ಟಲ್ಪಟ್ಟಿವೆ

•20x33 | •20x40 | ಕೆಲವೇ ನಿವೇಶನಗಳು ಲಭ್ಯವಿದೆ.

ಶಾಹಿ ಗಾರ್ಮೆಂಟ್ ಹತ್ತಿರ, ಹುಂಡೈ ಕಾರು ಶೋ ರೂಂ ಹಿಂಭಾಗ
ಎಕ್ಸೆಲ್ ಪಬ್ಲಿಕ್ ಸ್ಕೂಲ್ ರಸ್ತೆ, ಬೆಳವಾಡಿ, ಮೈಸೂರು. 91484 34989

---

ಗೃಹಶೋಭೆ

ಮಾನ್‌ಸೂನ್ ಶಾಪಿಂಗ್ ಫೆಸ್ಟಿವಲ್



17 Days

GRUHA SHOBHE
LIVING STYLE EXHIBITION



TIMING : 11 Am to 9 Pm

ಆಗಸ್ಟ್ 11 ರಿಂದ 27 ರವರೆಗೆ
ದಸರಾ ವಸ್ತುಪ್ರದರ್ಶನ ಮೈದಾನ
ಮೈಸೂರು

ENTRY Rs. 30/- Children Below 05 Years Free Entry

---

ಉದ್ಯೋಗ ಅವಕಾಶ

Palli Developers & Consultants LLP

ಪಲ್ಲಿ ಡೆವಲಪರ್ಸ್

1. ಟೆಲಿಕಾಲರ್ಸ್ – 02
2. ರೆಸೆಪ್ಷನಿಸ್ಟ್ ಕಮ್ ಟೆಲಿಕಾಲರ್ಸ್ – 01
(ಹೊಸಬರಿಗೂ ಕೂಡ ಅವಕಾಶವಿದೆ)

ಕರೆ ಮಾಡಿ 97420 55560
0821-3551296

---

IMMEDIATE REQUIREMENT

Hiring for A Reputed US Based Outsourcing Company (Non-Voice)

Position-Process Associate

Qualification

BSc, BCA, BCom, BBM, MCA, MBA, MSc, MCom, BE candidates are also considered

KEY ATTRIBUTES:
- Proficiency in English Communication
- Must be a Computer Literate
- Good in Analytical skills (Non-Technical)
- Both Male & Females with Good Typing skills

Kindly attach your recent Passport size PHOTO to your Resume. Interested Candidates can APPLY IMMEDIATELY

Walk-In Interview-18th Aug to 9th Sept 2023
Walk-In Time: 10:00am to 5:00pm

For any queries, please contact
Mob: 8147424748

SOURCE HUB One click convenience to outsourcing

Venue: Source Hub India Pvt Ltd #11, Second Floor, E & F Block, Above Royal Enfield Showroom Udayaravi Road, Kuvempunagar, Mysore - 570023.

---

ವರಲಕ್ಷ್ಮೀ ಹಬ್ಬದ ಪ್ರಯುಕ್ತ ಬಾರಿ ರಿಯಾಯಿತಿ ಮಾರಾಟ

World Class Designer Shirt T-Shirts, Jeans, Kurthis Tops Leggins & Kidswear



ಬಾಂಬೆಯಲ್ಲಿ ಭಾರಿ ಮಳೆಯ ಕಾರಣದಿಂದ ನನ್ನ ಮತ್ತು ಅಣ್ಣನ ಅಂಗಡಿಯನ್ನು ಮುಚ್ಚಬೇಕಾಗಿದ್ದು, ಆದ್ದರಿಂದ ಈ ಬಟ್ಟೆಗಳನ್ನು ಮೈಸೂರು ನಗರದ ಪಡುವಾರಹಳ್ಳಿ ವಿನಾಯಕನಗರದ ಶ್ರೀ ಬಸವೇಶ್ವರ ಕಲ್ಯಾಣಮಂಟಪದಲ್ಲಿ ಅತಿ ಕಡಿಮೆ ಬೆಲೆ ಮಾರಾಟ ಮಾಡುವುದಕ್ಕೆ ತೀರ್ಮಾನಿಸಿದ್ದೇವೆ.

ಮಾರಾಟ 7 ದಿನಗಳು ಮಾತ್ರ. ದಿನಾಂಕ: 19-08-2023 ರಿಂದ 25-08-2023ರವರೆಗೆ

| | |
|---|---|
| ಯಾವುದೇ ಶರ್ಟ್ ಖರೀದಿಸಿ ಪುರುಷರ ಕಾಟನ್ ಶರ್ಟ್ಸ್ ಸಮ್ಮರ್ ಶರ್ಟ್ಸ್, ಕ್ಯಾಷುಯಲ್ ಶರ್ಟ್ಸ್ | Rs. 149/- |
| ಯಾವುದೇ ಪ್ಯಾಂಟ್ ಖರೀದಿಸಿ ಜೀನ್ಸ್, ಕಾಟನ್ ಪ್ಯಾಂಟ್ ಫಾರ್ಮಲ್ ಪ್ಯಾಂಟ್ | Rs. 199/- |
| ಟಿ ಶರ್ಟ್ಸ್, ಶರ್ಟ್ಸ್ ಮಕ್ಕಳ ಪ್ಯಾಂಟ್ 3/4 ಪ್ಯಾಂಟ್ ವಿವಿಧ ಗಾರ್ಮೆಂಟ್ಸ್ | 49 to 99/- |

| ವಿವಿಧ ವೆರೈಟಿಯ ಸೀರೆಗಳು | ಬ್ರಾಂಡೆಡ್ ಶೂಸ್ & ಸ್ಯಾಂಡಲ್ಸ್ |
|---|---|
| 149 to 199/- | 650 to 1800/- |

ಪುರುಷರ ಇನ್ನರ್‌ವೇರ್ ದೊರೆಯುತ್ತವೆ

ಸ್ಥಳ : ಶ್ರೀ ಬಸವೇಶ್ವರ ಕಲ್ಯಾಣ ಮಂಟಪ, 1ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ವಿನಾಯಕನಗರ, ಮಹಾರಾಣಿ ಕಾಲೇಜು ಹಿಂಭಾಗ, ಪಡುವರಹಳ್ಳಿ, ಮೈಸೂರು
ಸಮಯ : ಬೆಳಗ್ಗೆ 10 ರಿಂದ ರಾತ್ರಿ 9-30 ರವರೆಗೆ ಮೊ. : 82175 20139

---

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತು ದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು